
ಕಲ್ಯಾಣ ಕಿರಣ

ಸೆಪ್ಟಂಬರ್ - 2002

ಬೆಲೆ. - 5-00





ದಿ. 3-7-2002 ರಂದು ಭಾಲ್ಕಿಯ ಲಿಂ॥ ಚನ್ನಬಸವ ಪಟ್ಟದ್ದೇವರ ಗದ್ದುಗೆಯನ್ನು ಸಂದರ್ಶಿಸಿ ಮಾಲಾರ್ಪಣೆ ಮಾಡಿದಾಗ



ದಿ. 7-7-2002, ಸಂಕೇಶ್ವರದ ಡಾ॥ ಶಿವಗೌಡ ಪಾಟೀಲ್ ಅವರ ಮಗನ ವಿವಾಹ
ವಿವಾಹ ವೇದಿಕೆಯ ಮೇಲೆ ಎಡದಿಂದ ಬಲಕ್ಕೆ ಪೂಜ್ಯ ಮಾತೆ ಸರ್ವಮಂಗಳಾದೇವಿ, ಪೂಜ್ಯ ಮಾತಾಜಿ,
ವಧು ಶರಣೆ. ವೀಣಾ, ವರ ಶರಣ. ವಿಶ್ವನಾಥ್,
ಮಹಾರಾಷ್ಟ್ರದ ರಾಷ್ಟ್ರೀಯ ಬಸವ ದಳದ ಅಧ್ಯಕ್ಷೆ ಶರಣೆ. ಮಾಲೂತಾಯಿ, ಇಚಲಕರಂಜಿ

ಓಂ ಶ್ರೀ ಗುರು ಬಸವಲಿಂಗಾಯ ನಮಃ
86666

ಸಂಪುಟ 31 ಬಸವ ಶಕೆ 869 ಆಜೀವ ಸದಸ್ಯತ್ವ 500 ರೂ
ಸಂಚಿಕೆ -9 ಸೆಪ್ಟಂಬರ್ 2002 ವಾರ್ಷಿಕ ಚಂದಾ 50/- ರೂ

❖ ಗುರುಚರಣಕೆ ನುಡಿ ನೈವೇದ್ಯ ❖

ಈ ಬಗೆಯ ನಿಲುವ ಇನ್ನಾವ ಜಂಗಮದೊಳು ಕಾಣೆ
ಬಸವ ಕರುಣೆಯ ಕಿರಣ ಗುರು ಲಿಂಗಾನಂದರಲ್ಲದೆ ॥ ಪ ॥
ಹರಿವ ಗಂಗೆಯ ತೆರದಿ ಜಗದ ಬಯಲಲಿ ಚರಿಸಿ
ವರ ಭಕ್ತಿ-ಜ್ಞಾನಗಳ ಬೆಳೆ ತೆಗೆದ ಗುರುವೆ ।
ಬಸವ ಧರ್ಮದ ಪ್ರಭೆಯ ಪುನಃ ಬೆಳಗಿದ ಯೋಗಿ
ಬಸವ ಸಾಮ್ರಾಜ್ಯವನು ಕಟ್ಟಿದ ಮಹತ್ಯಾಗಿ ॥ 1 ॥
ಮನುಗೂಳಿಯಲಿ ಜನಿಸಿ ವಿಜಯಪುರದೊಳು ಓದಿ
ಬೆಳಗಾಂವಿಯ ನೆಲದಿ ಪದವಿಯಂ ಪಡೆದು ।
ಧಾರವಾಡದಿ ಜ್ಞಾನ ಸಂಪದವ ಸಂಚಯಿಸಿ
ಚರಿಪ ಮಾರುತವಾಗಿ ಸುಳಿದ ಜ್ಞಾನದಾಸೋಹಿ ॥ 2 ॥
ಮಲ್ಲಪ್ಪ ಕಲ್ಲಮ್ಮ ದಂಪತಿಯ ಶಿಶುವಾಗಿ
ಚೆಲುವಿನಾ ಕಾಯವನು ಧರಿಸಿದ ಶಿವದೇಹಿ ।
ಸಂಗಮೇಶನೆಂಬ ದಿವ್ಯ ನಾಮದಿ ಬೆಳೆದು
ಆದೆ ಲಿಂಗಾನಂದ ಬಸವ ಕರುಣೆಯ ಪಡೆದು ॥ 3 ॥
ಮಹಿಳಾಗುರು ಪೀಠವಂ ಸ್ಥಾಪಿಸಿದ ಮಹಾಗುರು
ಮಹಮನೆಯ ಆಸರೆಯ ನೀಡಿದ ಕಲ್ಪತರು ।
ಕೂಡಲ ಸಂಗಮದ ಬಸವ ಧರ್ಮದ ಪೀಠ
ಏರಿ ಜಗದ್ಗುರುವಾಗಿ ಬೆಳಗಿದ ಸುವಿರಾಗಿ ॥ 4 ॥
ರಾಷ್ಟ್ರಪ್ರೇಮದ ಕಣಿಯೆ ಸತ್ಯನಿಷ್ಠೆಯ ಕಲಿಯೆ
ರಾಷ್ಟ್ರೀಯ ಬಸವ ದಳ ಸ್ಥಾಪಿಸಿದ ತತ್ತ್ವವಾದಿ ।
ಪ್ರವಚನ ಪಟುವಾಗಿ ಜ್ಞಾನ ನೀಡಿದ ಮೂರ್ತಿ
ವಚನ ವಾಙ್ಮಯ ಕೀರ್ತಿ ಪಸರಿಸಿದ ಗುರುಜ್ಯೋತಿ ॥ 5 ॥
ಚೈತನ್ಯ ಚಿಲುಮೆಯೆ ಸತ್ಯ ಚಿಂತನ ನಿಧಿಯೆ
ಜಾತಿವಾದವ ಜರಿದ ವಿಶ್ವಪ್ರೇಮದ ಸುಧೆಯೆ ।
ಶರಣ ಧರ್ಮದ ದಿವ್ಯ ವರರತ್ನ ತಾವು
ಎಂದು ಬಸವಾತ್ಮಜೆಯು ನಿತ್ಯ ನೆನೆಯುವೆ ನಾನು ॥ 6 ॥

★ ಕಲ್ಯಾಣ ಕಿರಣ ★

ಸಂಪುಟ 31	ಬಸವ ಶಕೆ 869	ಆಜೀವ ಸದಸ್ಯತ್ವ 500 ರೂ
ಸಂಚಿಕೆ -9	ಸೆಪ್ಟಂಬರ್ 2002	ವಾರ್ಷಿಕ ಚಂದಾ 50 ರೂ

ಕಿರಣಗನ್ನಡಿ

ಲೇಖನಗಳು	ಲೇಖಕರು	ಪುಟ
1. ಜಂಗಮ ಜ್ಯೋತಿ ಲಿಂಗಾನಂದ ಅಪ್ಪಾಜಿ	ಮಾತಾಜಿ	3
2. ಮೂರ್ಖರ ಬೀಡು, ಸಂಪಾದಕೀಯ-1	ಮಾತಾಜಿ	5
3. ಸಮಸ್ಯೆ ? ಸಮಾಧಾನ !	ಮಾತಾಜಿ	10
4. ಸ್ಫುರಣ - ಕಿರಣ	ಮಾತಾಜಿ	24
5. ಲಿಂಗದೇವನ ಶರಣ (ವಚನ ವಿಶ್ಲೇಷಣೆ)	ಮಾತೆ ಕಸ್ತೂರಿದೇವಿ	26
6. ಲಿಂಗಾಯತ ಸಮಾಜದ ಭವಿಷ್ಯವೇನು ? - ಒಂದು ಪತ್ರ	ಬಸಗೌಡ ಪಾಟೀಲ್	36
7. ನಿರಾಶೆ ಬೇಡ - ಪತ್ರಕ್ಕೆ ಉತ್ತರ	ಮಾತಾಜಿ	38
8. ನೀವೇ ಹೇಳಿ, ಲಿಂಗಾಯತರು ಮತ್ತು ವೀರಶೈವರು ಒಂದೇ ಏನು?	ಕೆ. ಬಸವರಾಜ್	42
9. ಒಳಪಂಗಡಗಳ ಪ್ರಚೋದನೆ ಸಲ್ಲದು	ಡಾ|| ಶಿವಗೌಡ ಪಾಟೀಲ್	45
10. ಮತ್ತೀಪುರದಲ್ಲಿ ಬಸವ ಜಯಂತಿ	ರಾಜಮಣಿ ಮಲ್ಲಿಕಾರ್ಜುನಪ್ಪ	46
11. ಲಿಂಗಾಯತ ಧರ್ಮ ವೀರಶೈವ ಪಂಥ ಬೇರೆ	ಸಿ.ಬಿ. ಬೇವನೂರು	47
12. ಧರ್ಮಕ್ರಾಂತಿಯ ಧೀರಯೋಗಿ	ಮಂಜುನಾಥ ಬಂಡಿ	50
13. ಧನ ದಾಸೋಹಿಗಳ ಯಾದಿ	-	52
14. ಬಸವ ಕಲ್ಯಾಣದಲ್ಲಿ ಅಕ್ಟೋಬರ್ ತಿಂಗಳಲ್ಲಿ ಬಸವ ತತ್ತ್ವ ತರಬೇತಿ ಕಮ್ಮಟ	-	54
15. ಬಸವ ಗಂಗೋತ್ರಿ ನಗರ ಯೋಜನೆ	-	57



★ ದಿ. 10-9-2002 ರಂದು ಪರಮ ಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳವರ 72ನೆಯ ಜಯಂತಿಯು ಒದಗಿ ಬಂದಿದ್ದು ಅಂದು ರಾಷ್ಟ್ರೀಯ ಬಸವ ದಳಗಳ ಹುಟ್ಟು ಹಬ್ಬವನ್ನು ಆಚರಿಸಲಾಗುವುದು. ತನ್ನಿಮಿತ್ತ ಕಲ್ಯಾಣ ಕಿರಣದ ಓದುಗರಿಗೆಲ್ಲ ಶುಭ ಹಾರೈಕೆಗಳು. ಅಂದು ಎಲ್ಲರೂ ರಾಷ್ಟ್ರೀಯ ಬಸವ ದಳದ ಹುಟ್ಟು ಹಬ್ಬವನ್ನು ಆಚರಿಸಬೇಕೆಂದು ಕೋರುತ್ತೇವೆ.



★ ಪೂಜ್ಯ ಶ್ರೀ ಮಾತೆ ಗಂಗಾದೇವಿಯವರು ದಿ. 10-9-2002 ರಂದು 44 ವರ್ಷಗಳನ್ನು ಪೂರೈಸಿ 45ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಲಿದ್ದಾರೆ. ಅವರಿಗೆ ಗೌರವ ಪೂರ್ವಕ ನಮನಗಳು.

KALYANA KIRANA- Reg. No. 19988/70. Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgodu, Bangalore-560074. Phone : 8437234

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ: ಬಸವ ಮಂಟಪ, 2035
20ನೆಯ ಮುಖ್ಯರಸ್ತೆ, ಎರಡನೆಯ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
ದೂರವಾಣಿ: 3325335/ 3322790

ಸಂಪಾದಕೀಯ - 1

- ಮಾತಾಜಿ

ಮೂರ್ಖರ ಬೀಡು

1. ಒಂದು ದಿನ ಓರ್ವ ಪತ್ರಿಕೆ ಮಾರುವ ಹುಡುಗ ಸಂತೆಯಲ್ಲಿ ಚುರುಕಾಗಿ ಓಡಾಡುತ್ತ ದೊಡ್ಡ ಧ್ವನಿಯಲ್ಲಿ ಕೂಗುತ್ತಿದ್ದ, ಬೆಂಗಳೂರು ನಗರದಲ್ಲಿ 10 ಜನಕ್ಕೆ ಮೋಸ ... ಮೋಸ ! ಜನರಿಗೆ ಕುತೂಹಲವಾಯಿತು. ಏಕೆಂದರೆ ಕೊಲೆ, ಮೋಸ, ದರೋಡೆ, ಅತ್ಯಾಚಾರ ಇಲ್ಲದಿದ್ದರೆ ಪತ್ರಿಕೆಯಲ್ಲಿ ಭಾರತೀಯರಿಗೆ ಆಸಕ್ತಿಯೇ ಇರುವುದಿಲ್ಲ. ಬೆಳಿಗ್ಗೆ ಓದಿ ರಾತ್ರಿ ತನಕ ಅದನ್ನೇ ಹೋದಲ್ಲಿ ಬಂದಲ್ಲಿ ಚರ್ಚಿಸುವುದು ಇವರ ಅಭ್ಯಾಸ.

ಪತ್ರಿಕೆ ಮಾರುವವನ ಆಕರ್ಷಣೀಯ ಪ್ರಚಾರ ಕೇಳಿ ಓರ್ವರು ಕೊಂಡರು ; ಮುಖಪುಟದ ಮೇಲೆ ಕಣ್ಣಾಡಿಸಿದರು. ಅಂಥ ವಿಶೇಷವಾದ ಯಾವ ಭಯಂಕರ ಸುದ್ದಿಯೂ ಇರಲಿಲ್ಲ. ಆಗ ಆ ಓದುಗ ಪತ್ರಿಕೆ ಮಾರುವ ಹುಡುಗನನ್ನು ತಡೆದು ನಿಲ್ಲಿಸಿ, ಎಲ್ಲಿದೆಯೋ ಮೋಸದ ಸುದ್ದಿ ಸುಳ್ಳು ಹೇಳುತ್ತೀಯಾ ? ಎಂದು ಗದರಿದ. ಆ ಹುಡುಗ ಏನೊಂದೂ ಹೇಳದೆ ಮತ್ತೆ ಕೂಗಿದ, "ಬೆಂಗಳೂರು ನಗರದಲ್ಲಿ ಹನ್ನೊಂದು ಜನಕ್ಕೆ ಮೋಸ .... ಮೋಸ" ಈಗ ಪತ್ರಿಕೆ ಕೊಂಡವನ ಸಂಖ್ಯೆಯೂ ಸೇರಿ ಹನ್ನೊಂದಾಗಿತ್ತು.

2. ಸಂತೆಯೊಂದರಲ್ಲಿ ಒಂದು ಟೇಬಲ್ ಇಟ್ಟುಕೊಂಡು, ಅದರ ಮೇಲೆ ಊದುಕೊಳವೆಯಂತಹ ಕೊಳವೆ ಇಟ್ಟುಕೊಂಡು ಓರ್ವ ಕೂಗುತ್ತಿದ್ದ. "ಬನ್ನಿ ಬನ್ನಿ, ಕೈಲಾಸ, ಕೈಲಾಸದಲ್ಲಿ ಶಿವ-ಪಾರ್ವತಿಯರ ದರ್ಶನ ಭಾಗ್ಯ, ಕೇವಲ 5 ರೂದಲ್ಲಿ" ಜನರು 5 ರೂ ತಾನೇ ? ಕಳೆದುಕೊಳ್ಳುವುದೇನು ಮಹಾ. ಒಂದು ವೇಳೆ ಶಿವಪಾರ್ವತಿಯರ ದರ್ಶನ ಭಾಗ್ಯ ದೊರೆತರೆ ? ಹೀಗಾಗಿ ಕ್ಯೂನಿಂತರು. "ಈ ಕೊಳವೆಯನ್ನು ಆಕಾಶದ ಕಡೆಗೆ ಹಿಡಿಯಿರಿ ಯಾರು ಪುಣ್ಯವಂತರೋ ಅವರಿಗೆ ಕೈಲಾಸ, ಶಿವ-ಪಾರ್ವತಿಯರ ದರ್ಶನ ಪ್ರಾಪ್ತಿ " ಎಂದ. ನೋಡಿದರು, ಏನೂ ಕಾಣಲಿಲ್ಲ. ಕಾಣಲಿಲ್ಲ ಎಂದರೆ ಪಾಪಾತ್ಮರ ಸಾಲಿನಲ್ಲಿ ನಿಲ್ಲಬೇಕಾಗುತ್ತದೆ ಎಂದುಕೊಂಡು ನೋಡಿದವರೆಲ್ಲ "ಅಹುದಹುದು ; ಶಿವಪಾರ್ವತಿ ಕಂಡರು, ನಸುನಕ್ಕು ಆಶೀರ್ವದಿಸಿದರು." ಎಂದು ಒಬ್ಬರು ಅಂದರೆ ಇನ್ನೊಬ್ಬರು "ಅವರ ಜೊತೆಗೆ ಗಣಪತಿ, ಷಣ್ಮುಖರೂ ಇದ್ದರು " ಎಂದು ನುಡಿದರು. ಅಂತೂ ಆ ಬರಿ ಕೊಳವೆಯ ಬುದ್ಧಿವಂತನಿಗೆ ಬಂಡವಾಳವಿಲ್ಲದೆ ಭರ್ಜರಿ ವ್ಯಾಪಾರವಾಯಿತು.

3. "ಪೆನ್ನಿನ ಸಹಾಯವಿಲ್ಲದೆ ಬರೆಯುವ ತಂತ್ರ ಕಲಿಸಲಾಗುತ್ತದೆ. ಕೇವಲ 5 ರೂ ಎಂ.ಓ. ಮಾಡಿರಿ" ಎಂಬ ಜಾಹೀರಾತು ಕಾಣಿಸಿಕೊಂಡಿತು. ಪೆನ್ನು ಅವುಗಳಿಗೆ ತುಂಬುವ ಇಂಕ್, ರೀಫಿಲ್, ಜೊತೆಗೆ ಕಳೆಯುವ ಸಾಧ್ಯತೆ ಬಹಳ ; ಮರೆಗುಳಿಗಳಂತೂ ಲೆಕ್ಕವಿಲ್ಲದಂತೆ ಕಳೆದುಕೊಳ್ಳುವರು. ಹೀಗಾಗಿ ಈ ಜಾಹೀರಾತು ಬಹು ಜನರನ್ನು ಆಕರ್ಷಿಸಿತು. ಎಂ.ಓ.ಗಳ ಮಹಾಪೂರವೇ ಹರಿದು ಬಂತು. ಆ ಮಾಹಿತಿದಾರ ಒಂದು ಸಾಲಿನ ಉತ್ತರ ಬರೆದು ಕಾರ್ಡ್ ಪೋಸ್ಟ್ ಮಾಡಿದ. ಆ ಸಾಲು ಹೀಗಿತ್ತು : "ಪೆನ್ಸಿಲ್‌ನಿಂದ ಬರೆಯಿರಿ."

ಇಂಥ ಪ್ರಸಂಗಗಳನ್ನು ನೆನಪು ಮಾಡುವ ಘಟನೆಯೊಂದು ಬೆಂಗಳೂರಲ್ಲಿ

ನಡೆಯಿತು. ಫಿಲಿಫೈನ್ಸ್ ದೇಶದ ಓರ್ವ ಬರಿಗೈ ಶಸ್ತ್ರ ಚಿಕಿತ್ಸಕ ಅಲೆಕ್ಸ್ ಆರ್ಬಿಟೋ ಎಂಬಾತ ದಿಢೀರನೆ ಬಂದ. ಬರಿಗೈಯಿಂದ ಶಸ್ತ್ರ ಚಿಕಿತ್ಸೆ ಮಾಡುವುದಾಗಿ ಆತನ ಅಭಿಮಾನಿಗಳು ಪ್ರಚಾರ ಮಾಡಿದರು. ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ದಲ್ಲೇ ಪವಾಡ ಪ್ರದರ್ಶನ, ಮಂತ್ರಿಗಳು, ಶಾಸಕರ ನೂಕು ನುಗ್ಗಲು. "ಬಳ್ಳಿಗುರುಡರು ಸೇರಿ ಹಳ್ಳವನು ಬಿದ್ದಂತಹ " ಪ್ರಸಂಗ

ಈ ಪ್ರಸಂಗವನ್ನು ವಿಮರ್ಶಿಸುವ ಓರ್ವ ವೈದರ ಪತ್ರ ಮತ್ತು ಇಂಥದೇ ಪವಾಡ ಈಜಿಪ್ಟಿನ ಕೈರೋದಲ್ಲಿ ನಡೆದ ವಿಷಯಗಳನ್ನು ಓದುಗರಿಗೆ ಕೊಡಲಾಗಿದೆ.

ಬರಿಗೈ ಶಸ್ತ್ರ ಚಿಕಿತ್ಸೆ ಅಸಾಧ್ಯ !

ಮಾನ್ಯರೆ,

ಬರಿಯ ಕೈ ಬೆರಳುಗಳಿಂದಲೆ ಹೊಟ್ಟೆಯನ್ನು ಬಗೆದು ಒಳಗಿರುವ ಹುಣ್ಣನ್ನು ಹೊರತೆಗೆದು ಹೊಲಿಗೆ ಹಾಕದೆ ಮುಚ್ಚಿ ಬಿಟ್ಟ ವಿಷಯವನ್ನು ಓದಿದೆ. (ಪ್ರ.ವಾ. ಆ.11) ಇಂತಹ ಘಟನೆಗಳನ್ನು ವೈಜ್ಞಾನಿಕ ಒರೆಗಲ್ಲಿಗೆ ಹಚ್ಚುವುದು ಸೂಕ್ತ. ಶಸ್ತ್ರ ಚಿಕಿತ್ಸೆಯಲ್ಲಿ ಚರ್ಮದ ಸೀಳುವಿಕೆಯನ್ನು ಹೊಲಿಗೆಯಿಂದ ಮುಚ್ಚಿದರೆ ಮಾತ್ರ ಅದು ಒಂದು ವಾರದಲ್ಲಿ ಒಂದುಗೂಡುತ್ತದೆ. ತಕ್ಷಣ ಕೂಡಲು ಸಾಧ್ಯವಿಲ್ಲ. ಆದ್ದರಿಂದ ಈ ವೈದ್ಯ (ಅಲೆಕ್ಸ ಅರ್ಬಿಟೋ) ಹೊಟ್ಟೆಯನ್ನು ಕುಯ್ದಿಲ್ಲವೆಂದೆ ಅರ್ಥ ! ಹಾಗೂ ಆತ ತೆಗೆದ ಹುಣ್ಣು ಹೊಟ್ಟೆಯಿಂದ ತೆಗೆದದ್ದು ಅಲ್ಲವೆಂದೆ ಅರ್ಥ !!

ಈ ಕೃತ್ಯವನ್ನು ವೈಜ್ಞಾನಿಕವಾಗಿ ಶೋಧಿಸಬೇಕು. ಅಲೆಕ್ಸ ಅರ್ಬಿಟೋ ಹೊಟ್ಟೆಯಿಂದ ತೆಗೆದು ತೋರಿಸುವ ಹುಣ್ಣು ಮಾನವ ಜೀವ ಕೋಶಗಳಿಂದ ನಿರ್ಮಿತವಾದದ್ದು ಎಂದು ವೈದ್ಯರಿಂದ ಪ್ರಮಾಣಿಸಲ್ಪಡಬೇಕು. ಫಿಲಿಪ್ಪೀನ್ ದೇಶದ ವೈದರು ನಿಜವಾಗಿಯೂ ಇಂತಹ ಶಸ್ತ್ರ ಚಿಕಿತ್ಸೆ ಮಾಡುತ್ತಿದ್ದರೆ ವೈಜ್ಞಾನಿಕ ಶೋಧನೆಗೆ ಒಳಪಡಲು ಮುಂದಾಗಬೇಕು. ಇಲ್ಲವೆ ಒಪ್ಪಲೇಬೇಕು. ಇಪ್ಪತ್ತು ವರ್ಷಗಳ ಹಿಂದೆ ಇದೇ ವರದಿ ಮಿರರ್ ಮಾಸ ಪತ್ರಿಕೆಯಲ್ಲಿ ವರದಿಯಾಗಿತ್ತು. ಈ ವೈದರು ಮಾಡುವ ಪವಾಡ ಶಸ್ತ್ರ ಚಿಕಿತ್ಸೆಯಲ್ಲಿ ತೆಗೆದ ಹುಣ್ಣಲ್ಲ ಕೋಳಿ ಮಾಂಸದ್ದು ಎಂದು ವೈಜ್ಞಾನಿಕವಾಗಿ ಹೊರಗೆಡವಲಾಗಿತ್ತು.

- ಡಾ॥ ವಿರುಪಾಕ್ಷಪ್ಪ ಪಾಟೀಲ್., ಸಿರವಾರ

ಪ್ರಜಾವಾಣಿ. 16-8-2002

ತಲೆಬ್ಯಾನೆ ವೈದ್ಯ

ಕೈರೊ : ಫಿಲಿಪ್ಪೀನ್‌ನ ಆರ್ಬಿಟೋ ಎಂಬ ಸೈಕಿಕ್ ಚಿಕಿತ್ಸೆ ಪರಿಣತ ಕರ್ನಾಟಕಕ್ಕೆ ಬಂದು ಕೈಚಳಕ ತೋರಿಸಿದ್ದೂ, ನ್ಯಾಯಾಲಯದಿಂದ ನೋಟೀಸ್ ಬರುತ್ತಿದ್ದಂತೆ ಪರಾರಿಯಾಗಿದ್ದು ಕಣ್ಣಿಗೆ ಕಟ್ಟಿದಂತಿರುವಾಗಲೇ ಈಜಿಪ್ಟ್‌ನಿಂದಲೂ ಇದೇ ರೀತಿ ಚಾಲಾಕಿ ವೈದ್ಯ ಜನರ ಮಿದುಳಿಗೇ ಕೈಯಿಳಿಸಿದ್ದ ಸುದ್ದಿ ಬಂದಿದೆ.

ಕೈರೊ ಸಮೀಪದ ಫಯೋಮ್ ಪಟ್ಟಣದಲ್ಲಿ 40 ವರ್ಷದ ಸಾ ಕೇವಲ 4.74 ಅಮೇರಿಕನ್ ಡಾಲರ್ ಶುಲ್ಕ ಪಡೆದು ತಲೆಬ್ಯಾನೆ ಇದ್ದ ರೋಗಿಗಳ ಮಿದುಳಿನ ಶಸ್ತ್ರ ಚಿಕಿತ್ಸೆ ಮಾಡುತ್ತಿದ್ದ ! ಅಚ್ಚರಿಯೆಂದರೆ ಪ್ರಾಥಮಿಕ ಶಾಲೆ ಓದನ್ನೂ ಪೂರೈಸದ ಈ ಮಹಾ ವೈದ್ಯ ವಾರವೊಂದರಲ್ಲೇ 200 ಮಂದಿಗೆ ಶಸ್ತ್ರ ಚಿಕಿತ್ಸೆ ಮಾಡುತ್ತಿದ್ದ. ಅದೃಷ್ಟ ಕೈ ಕೊಟ್ಟಿತೇನೋ ಪೋಲೀಸರು ಗುರುವಾರ ಕೈಕೋಳ ಹಾಕಿ ಎಳೆದೊಯ್ದರು. ಆದರೆ, ಈತನಿಂದ ನರಮಂಡಳದ ಚಿಕಿತ್ಸೆ ಪಡೆದ ನರರ ಗತಿ ಏನಾಯ್ತು ? ಅದಿನ್ನೂ ತಿಳಿದುಬಂದಿಲ್ಲ.

(ವಿಜಯ ಕರ್ನಾಟಕ 16-8-2002)

ಕೇವಲ ಬರಿಗೈ ಆಡಿಸಿ ಶರೀರವನ್ನು ಭೇದಿಸಲು ಸಾಧ್ಯವೆ ? ಉಗುರಿಗೆ ಸೂಕ್ಷ್ಮವಾದ ಚೂಪಾದ ಬ್ಲೇಡ್ ಅಥವಾ ಚಾಕು ಸಿಕ್ಕಿಸಿ ಕೈಚಳಕದಿಂದ ಕೊಯ್ದಿರಬಹುದು ಎಂದು ಕೊಂಡರೆ ಆ ಸೀಳು ಮುಚ್ಚಲು ಹೊಲಿಗೆ ಹಾಕಬೇಕು. ಆ ಹೊಲಿಗೆ ಕೂಡಲು ಕನಿಷ್ಠ ಒಂದು ವಾರವಾದರೂ ಸಮಯಬೇಕು. ಗಮನವನ್ನು ಬೇರೆಡೆಗೆ ಸೆಳೆದು ಕೈಯನ್ನು ಚಕಚಕನೆ ಆಡಿಸಿ ಮಾಂಸದ ಮುದ್ದೆಯಂತಹ ಏನಾದರೊಂದು ವಸ್ತುವನ್ನು ತೆಗೆದು ಆಶ್ಚರ್ಯ ಹುಟ್ಟಿಸಬಹುದು. ಆದರೆ ಇದನ್ನು ಶಸ್ತ್ರ ಚಿಕಿತ್ಸೆ ಎನ್ನಲಾದೀತೆ ?

ಹಿಂದಿನ ಕಾಲದಲ್ಲಿ ಎಲ್ಲರ ವೃತ್ತಿಗಳಲ್ಲೂ ವೃತ್ತಿ ಪ್ರಾಮಾಣಿಕತೆ (Professional honesty) ಎಂಬುದು ಇತ್ತು. ಬರೀ ಬಾಯಿಂದ ಆಡಿದ ಮಾತಿಗೆ ಜನರು ಎಷ್ಟೊಂದು ಬೆಲೆ ಕೊಡುತ್ತಿದ್ದರು ಎಂಬುದನ್ನು ಹೇಳಲು ಸಾಧ್ಯವಿಲ್ಲ. ಬಹಳ ಹಿಂದನ ಮಾತೇನಲ್ಲ ; ಸಣ್ಣವರಿದ್ದಾಗ ನಾವೇ ನೋಡಿದ್ದೇವೆ. ಯಾವ ಪ್ರಾಮಿಸರಿ ನೋಟ್ ಅಗತ್ಯವಿರಲಿಲ್ಲ. "ಮಾತು ಆಡಿದರೆ ಹೋಯ್ತು ಮುತ್ತು ಒಡೆದರೆ ಹೋಯ್ತು " ಎಂಬ ಮಾತು ಚಲಾವಣೆಯಲ್ಲಿತ್ತು. "ಇನ್ನೊಬ್ಬರ ಋಣದಲ್ಲಿ ತಾವು ಬದುಕಬಾರದು, ಪಡೆದ ಸಾಲ ತೀರಿಸದೆ ಅದನ್ನು ಇಟ್ಟುಕೊಂಡು ಸಾಯಬಾರದು" ಎಂಬ ಮಾತುಗಳನ್ನು ಜನ ಆಡುತ್ತಿದ್ದರು. ಈಗ ನಿರ್ಭಯವಾಗಿ ಮೋಸ ಮಾಡುತ್ತಿದ್ದಾರೆ. ಸಾಲ ತೀರಿಸದಿರುವುದು ದೊಡ್ಡಸ್ಥಿಕೆಯ ವಿಷಯವಾಗಿದೆ.

ಒಮ್ಮೆ ಓರ್ವ ದೊಡ್ಡ ಮನುಷ್ಯರು ಹೇಳುತ್ತಿದ್ದರು, ನಮ್ಮ ಫ್ಯಾಕ್ಟರಿ ತುಂಬಾ ಲಾಸ್‌ದಲ್ಲಿದೆ. ಅದಕ್ಕೆ ಸಾಲ ಮನ್ನಾಕ್ಕೆ ಪ್ರಯತ್ನಿಸುತ್ತಿದ್ದೇವೆ. ನಾನು ಕೆಲವು ದಿನದ ನಂತರ ಮತ್ತೊಮ್ಮೆ ಕೇಳಿದೆ, "ಅಯ್ಯೋ ಪಾಪ, ಫ್ಯಾಕ್ಟರಿ ಲಾಸ್ ಅಂತೆ. ಬಹಳ ಪ್ರಮಾಣದ್ದೇ ?" ಎಂದೆ. ಅವರು ನಕ್ಕು, "ನಿಮಗೆ ಅದೆಲ್ಲ ತಿಳಿಯಲ್ಲ ಬಿಡಿ. ಇನ್ನೊಬ್ಬರು ರಾಜಕೀಯ ಧುರೀಣರು ಇದ್ದರಲ್ಲ ಅವರಿಗಾಗಿ ಹೇಳಿದೆ, ಫ್ಯಾಕ್ಟರಿ ಲಾಭದಲ್ಲೇ ನಡೆದಿದೆ" ಎಂದಾಗ ನನಗೆ ಸುಸ್ತು.

ಈ ವಂಚನೆಯ ಪ್ರವೃತ್ತಿ ಎಲ್ಲ ರಂಗದಲ್ಲೂ ಬೆಳೆದಿದ್ದು ವ್ಯಾಪಾರಿ ಮನೋಭಾವ ಅಧಿಕಗೊಂಡಿದ್ದು, ಸೇವಾಧಾರಿತವಾಗಿ ನಡೆಯಬೇಕಾದ ವೈದ್ಯಕೀಯ ಸೇವಾಕ್ಷೇತ್ರವೂ ಧನಾಧಾರಿತವಾಗಿದೆ. ಪಾಶ್ಚಿಮಾತ್ಯ ರಾಷ್ಟ್ರಗಳಿಂದ ಬಂದಿರುವ ನೆಟ್ ವರ್ಕ್ ವ್ಯವಸ್ಥೆ ಎಲ್ಲ ರಂಗಗಳನ್ನು ಧನದಾಹಿಯನ್ನಾಗಿ ಮಾಡುತ್ತಿದೆ. "ತಯಾರಿಕರಿಂದ ಗ್ರಾಹಕರಿಗೆ ನೇರವಾಗಿ ತಲ್ಪಿಸುವ ವ್ಯವಸ್ಥೆ ಇದು. ಮಧ್ಯವರ್ತಿ ದಲ್ಲಾಳಿ ಇಲ್ಲ" ಎಂದು ಹೇಳುವರಾದರೂ ನೆಟವರ್ಕ್ ಬಹಳ ಜನರ ಮೂಲಕ ಹಾಯುವುದರಿಂದ ವಸ್ತುಗಳ ಬೆಲೆ ವಿಪರೀತ ಹೆಚ್ಚು.

ಈ ಹಿನ್ನೆಲೆಯಲ್ಲಿ ಅಲೆಕ್ಸ್ ಆರ್ಬಿಟೋ ಅವರ ಅವಾಂತರವನ್ನು ನೋಡೋಣ. ಧಾಂ ಧೂಂ ಎಂದು ಪ್ರಚಾರ ಮಾಡಿ, ದುಡ್ಡು ಪಡೆದು, ಬರಿಗೈ ಆಡಿಸಿ ಜಾದೂ ಮಾಡಿ ಶಸ್ತ್ರ ಚಿಕಿತ್ಸೆ ಆಯಿತು ಎಂದು ಹೇಳಿ ನಂಬಿಸಿ ದೇಶಬಿಟ್ಟು ಓಡಿ ಹೋದ ಮೇಲೆ ರೋಗಿಗಳು ಇನ್ನೇನು ಮಾಡಲು ಸಾಧ್ಯ ? ಶಸ್ತ್ರ ಚಿಕಿತ್ಸೆಯ ನಂತರದ ಪರಿಣಾಮವೇನು ? ಒಂದು ವೇಳೆ ಇಂಥ ಒಂದು ಜಾದೂ ಸಾಧ್ಯವಿದ್ದರೆ ಎಲ್ಲ ಶಸ್ತ್ರಚಿಕಿತ್ಸರಿಗೂ ವಿರಾಮ ನೀಡಿ ಪವಾಡ ಸದೃಶ್ಯವಾಗಿ ಎಲ್ಲರ ಮೇಲೂ ಕೈಯಾಡಿಸುತ್ತ ಹೋಗಬಹುದಲ್ಲವೆ ?

ಸೈಕಿಕ್ ಪವರ್ ಎನ್ನುವುದು ಉಂಟು, ಸೈಕಿಕ್ ಹೀಲಿಂಗ್ ಸಹ ಸತ್ಯವೆ ! ದೇಹವು ಮನಸ್ಸನ್ನು ನಿಯಂತ್ರಿಸುವುದಕ್ಕಿಂತ ಹೆಚ್ಚಾಗಿ ಮನಸ್ಸು ದೇಹವನ್ನು ನಿಯಂತ್ರಿಸುತ್ತದೆ. ಪ್ರತಿ ವ್ಯಕ್ತಿಯ ಅನಾರೋಗ್ಯಕ್ಕೆ ಆಹಾರ-ವಿಹಾರಗಳ ವಿಷಮತೆಯೊಡನೆ ಮಾನಸಿಕ ತುಮುಲ, ಉದ್ವೇಗ ಮುಖ್ಯ ಕಾರಣವಾಗುತ್ತವೆ. ಲಿಂಗಾಯತ ಧರ್ಮದಲ್ಲಿ ದೀಕ್ಷಾಗುರು, ಜ್ಞಾನಗುರುಗಳ ಪಾತ್ರ, ಕ್ರೈಸ್ತರ ಚರ್ಚಿನಲ್ಲಿ ಪಾದ್ರಿಯ ಪಾತ್ರ ಒಂದು ರೀತಿಯಲ್ಲಿ ಸೈಕಿಕ್ ಹೀಲಿಂಗ್. ಮಾನವರಲ್ಲಿ ಆತ್ಮವಿಶ್ವಾಸ, ಚಿತ್ತ ಸಮತೆ, ಸ್ಥೈರ್ಯ ವೃದ್ಧಿಯಾದರೆ ಯಾವುದೇ ಔಷಧಿಗಳಿಲ್ಲದೆ ಅನೇಕ ಕಾಯಿಲೆಗಳು ವಾಸಿಯಾಗುತ್ತವೆ. ಆಹಾರ-ವಿಹಾರ-ವಿಚಾರ ಇವು ಮೂರೂ ಶುದ್ಧವಾದರೆ ಮನುಷ್ಯನ ಅನೇಕ ಸಮಸ್ಯೆಗಳಿಗೆ ಪರಿಹಾರ ತನ್ನಿಂದ ತಾನೇ ದೊರಕುತ್ತದೆ. ಜೀವನದ ಸುಖ-ದುಃಖಗಳ ತಾಡನದಿಂದ ದಿಕ್ಕೆಟ್ಟ ಮನುಷ್ಯನಿಗೆ ಗುರುಗಳು ನೀಡುವ ಸಾಂತ್ವನ, ಧೈರ್ಯ ಅದ್ಭುತವಾದ ಶಕ್ತಿಯನ್ನು ಕೊಡುತ್ತವೆ. ಮುಳುಗುವ ಮನುಷ್ಯನಿಗೆ ಆಸರೆ ಸಿಕ್ಕಂತೆ ದೇವನ ಅನುಗ್ರಹವು ಗುರುವಿನ ಮೂಲಕ ಹರಿದು ಬಂದು ಮಾನಸಿಕ ಸ್ಫೂರ್ತಿಯನ್ನು ನೀಡುತ್ತದೆ. ಅಧ್ಯಾತ್ಮಿಕ ಬೋಧೆಯೂ ಒಂದು ರೀತಿಯ ಸೈಕಿಕ್ ಹೀಲಿಂಗ್.

ಕೆಲವೊಂದು ಕಾಯಿಲೆಗಳು ತೀವ್ರವಾದ ಶಸ್ತ್ರ ಚಿಕಿತ್ಸೆಯ ಹಂತಕ್ಕೆ ಬಂದಿರುತ್ತವೆ. ಗುರುಗಳ ಆಶೀರ್ವಾದದಿಂದ ಶಸ್ತ್ರ ಚಿಕಿತ್ಸೆ ಇಲ್ಲದೆ ವಾಸಿಯಾಯಿತು ಎಂದು ಕೆಲವರು ಅನುಭವಿಸಿರುತ್ತಾರೆ, ಹೇಳುತ್ತಾರೆ. ವ್ಯಕ್ತಿ ಪಡೆಯುವ ಮಾನಸಿಕ ಸಾಂತ್ವನ, ನೆಮ್ಮದಿ ಅಂಥ ರೋಗದ ವಿಷಮತೆಯಿಂದ ಮುಕ್ತಗೊಳಿಸುತ್ತದೆ. ಹೀಗಾಗಿಯೇ ಗುರುವು ಅನುಗ್ರಹಿಸುವ ಕೈಯಲ್ಲಿ ಸ್ಪರ್ಶ ಚಿಕಿತ್ಸೆ - ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸುವ ಹಸ್ತ ಮಸ್ತಕ ಸಂಯೋಗ (ಕುಕ್ಕುಟ ನ್ಯಾಯ) ನೋಟ ಚಿಕಿತ್ಸೆ (ಮತ್ಸ್ಯ ನ್ಯಾಯ) ಮತ್ತು ಸಂಕಲ್ಪ ಚಿಕಿತ್ಸೆ (ಕೂರ್ಮ ನ್ಯಾಯ) ಎಂಬ ಮೂರು ಆಚರಣೆಗಳನ್ನು ಶಕ್ತಿಪಾತವೆಂಬ ಹೆಸರಿನಿಂದ ಮಾಡಲಾಗುತ್ತದೆ. ಪ್ರತಿಯೊಬ್ಬನಲ್ಲಿರುವ ಸೈಕಿಕ್ ಪವರ್ ಸುಪ್ತವಾಗಿದ್ದು ಅದು ನೆಲದ ಮರೆಯ ನಿಧಾನದಂತೆ, ಮುಗಿಲ ಮರೆಯ ಮಿಂಚಿನಂತೆ ಇರುತ್ತದೆ. ಗುರುವು ತನ್ನ ಬೋಧೆಯಿಂದ, ನೋಟದಿಂದ, ಹಸ್ತ-ಮಸ್ತಕ ಸಂಯೋಗದಿಂದ ಜಾಗ್ರತಗೊಳಿಸುತ್ತಾನೆ. ಚಿಕಿತ್ಸೆಯಲ್ಲಿ ಚೇತನಗೊಂಡ ಸೈಕಿಕ್ ಪವರ್ ಅದ್ಭುತವಾಗಿ ಕೆಲಸ ಮಾಡುತ್ತದೆ. ಇದೆಲ್ಲ ಸುಳ್ಳಲ್ಲ, ಉತ್ಪ್ರೇಕ್ಷೆಯಲ್ಲ. ಅದೇ ರೀತಿ ಸಂಕಲ್ಪ ತರಂಗಗಳು ತೀವ್ರಗತಿಯಲ್ಲಿ ಸಂಚರಿಸಿ ಕೆಲಸ ಮಾಡುತ್ತವೆ. ಎಷ್ಟೋ ದೂರದಲ್ಲಿದ್ದೂ ಗುರು ತನ್ನ ಶಿಷ್ಯರನ್ನು, ಭಕ್ತರನ್ನು ಸಂಕಲ್ಪದಿಂದ ಅನುಗ್ರಹಿಸಬಲ್ಲ.

ಆದರೆ ಬರಿಗೈಯಿಂದ ಅಂಗ ಛೇದನ ಅಸಾಧ್ಯ ! ಇದನ್ನು ಸಿ.ಬಿ.ಐ. ಮಾಜಿ ಅಧಿಕಾರಿ ಕಾರ್ತಿಕೇಯನ್‌ರಂಥವರು, ಡಾ॥ ರಮೇಶ್‌ರಂಥವರು ನಂಬುತ್ತಾರೆ, ಇತರರನ್ನು ನಂಬಿಸುತ್ತಾರೆ ಎಂಬುದು ಬಹಳ ವಿಷಾದನೀಯ. ವಿದ್ಯಾವಂತರಾಗಿದ್ದೂ ಮೂಢರಾಗಿರುವ ಇಂಥ ಅಧಿಕಾರಿಗಳು, ಡಾ॥ ಮಾಲಕರೆಡ್ಡಿ, ಲೀಲಾದೇವಿ ಪ್ರಸಾದ, ಸೋಮಣ್ಣರಂಥ ರಾಜಕಾರಣಿಗಳಿಂದ ವಿಚಾರಶೀಲ ಸಮಾಜವನ್ನು ನಿರೀಕ್ಷಿಸುವುದಾದರೂ ಹೇಗೆ ?

ನಕಲಿ ವೈದ್ಯರನ್ನು ಪ್ರೋತ್ಸಾಹಿಸಿದ ಸಚಿವ ಮಾಲಕ ರೆಡ್ಡಿ ರಾಜೀನಾಮೆಗೆ ಆಗ್ರಹ

ಮಂಗಳೂರು :- ದೈವಿಕ ಶಕ್ತಿಯಿಂದ ಕಾಯಿಲೆಗಳನ್ನು ಗುಣಪಡಿಸುತ್ತೇನೆಂದುಕೊಂಡು ಇತ್ತೀಚೆಗೆ ಫಿಲಿಫೈನ್ಸ್‌ನಿಂದ ಬೆಂಗಳೂರಿಗೆ ಬಂದಿದ್ದ ಆರ್ಬಿಟೊ ಎಂಬುವವರನ್ನು ಪ್ರೋತ್ಸಾಹಿಸುವ ಮೂಲಕ ರಾಜ್ಯದ ವೈದಕೀಯ ಶಿಕ್ಷಣ ಸಚಿವ ಡಾ. ಮಾಲಕ ರೆಡ್ಡಿ ಮತ್ತು ಶಾಸಕರು ನಕಲಿ ವೈದ್ಯರನ್ನು ಪ್ರೋತ್ಸಾಹಿಸಿದಂತಾಗಿದೆ ಎಂದು ದ.ಕ. ವಿಚಾರವಾದಿಗಳ ಸಂಘದ ಕಾರ್ಯದರ್ಶಿ ನರೇಂದ್ರ ನಾಯಕ್ ಹೇಳಿದ್ದಾರೆ. ಶುಕ್ರವಾರ ಇಲ್ಲಿ ಪತ್ರಕರ್ತರ ಮುಂದೆ ನಕಲಿ ವೈದ್ಯರು ಬರಿಗೈಯಲ್ಲಿ ಮಾಡುವ ಶಸ್ತ್ರಚಿಕಿತ್ಸೆಯನ್ನು ಪ್ರದರ್ಶಿದ ನರೇಂದ್ರ ನಾಯಕ್, ಸಚಿವರು ಮತ್ತು ಹಲವಾರು ಶಾಸಕರು ಇಂತಹ ನಕಲಿ ವೈದ್ಯರನ್ನು ಪ್ರೋತ್ಸಾಹಿಸುವುದು ಅಪರಾಧ ಎಂದು ತಿಳಿಸಿದರು.

ದೈವಿಕ ಶಕ್ತಿಯಿಂದ ಶಸ್ತ್ರ ಚಿಕಿತ್ಸೆ ನಡೆಸುತ್ತೇನೆನ್ನುವುದು ಕೇವಲ ಮೋಸ. ಇದು ಕೈಚಳಕದಿಂದ ಮಾಡುವ ಕೆಲಸ. ಮೊದಲೇ ಕೈಯೊಳಗೆ, ಹತ್ತಿಯೊಳಗೆ ಅಡಗಿಸಿಟ್ಟ ಪ್ರಾಣಿಯ ಮಾಂಸದ ತುಂಡನ್ನು ಹೊಟ್ಟೆಯಿಂದ ದುರ್ಮಾಂಸ ಹೊರತೆಗೆದಂತೆ ತೋರಿಸುತ್ತಾರೆ. ಜನ ಭಾವುಕತೆಯಿಂದ ನಂಬುತ್ತಾರೆ ಎಂದು ನರೇಂದ್ರ ನಾಯಕ್ ವಿವರಿಸಿದರು.

ಫಿಲಿಫೈನ್ಸ್‌ನಿಂದ ಬಂದ ನಕಲಿ ವೈದ್ಯ ಜನರನ್ನು ಮೋಸ ಮಾಡಿ ಲಕ್ಷಾಂತರ ರೂಪಾಯಿ ಸಂಪಾದಿಸಿ ಪರಾರಿಯಾಗಿದ್ದಾನೆ. ಇವರನ್ನು ಪ್ರೋತ್ಸಾಹಿಸುವುದು ತಪ್ಪು. ಸ್ವತಃ ವೈದ್ಯರಾಗಿರುವ ಮಾಲಕ ರೆಡ್ಡಿ ಅವರ ಹೆಸರನ್ನು ಮೆಡಿಕಲ್ ರಿಜಿಸ್ಟ್ರಿಯಿಂದ ತೆಗೆದು ಹಾಕಬೇಕು. ನಕಲಿ ವೈದರನ್ನು ಪ್ರೋತ್ಸಾಹಿಸಿರುವುದಕ್ಕೆ ಅವರು ರಾಜೀನಾಮೆ ನೀಡಬೇಕು ಎಂದು ನರೇಂದ್ರ ನಾಯಕ್ ಒತ್ತಾಯಿಸಿದರು.

ದ.ಕ. ವಿಚಾರವಾದಿಗಳ ಸಂಘದ ಡಾ. ಕೃಷ್ಣಮೋಹನ್ ಪತ್ರಿಕಾ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

('ಹೊಸ ದಿಗಂತ' ಕನ್ನಡ ದಿನ ಪತ್ರಿಕೆ)

ಆಧ್ಯಾತ್ಮಿಕ ಚಿಕಿತ್ಸೆ ನೀಡಿದ ಅಲೆಕ್ಸ್ ಆರ್ಬಿಟೊ ವಂಚಕ

ಬೆಂಗಳೂರು. ಆ. 17- ವಿಧಾನಸೌಧದ ಬಾಂಕ್ವೆಟ್ ಸಭಾಂಗಣದಲ್ಲಿ ಆಧ್ಯಾತ್ಮಿಕ ಚಿಕಿತ್ಸೆ ನೀಡಿದ ರೆವರೆಂಡ್ ಅಲೆಕ್ಸ್ ಎಲ್.ಅರ್ಬಿಟೊ ಒಬ್ಬ ವಂಚಕ ಎಂದು ಆರೋಗ್ಯ ಇಲಾಖೆಯ ಕಾರ್ಯದರ್ಶಿ ವರದಿ ನೀಡಿದ್ದಾರೆ.

ಅವರು ಚಿಕಿತ್ಸೆ ನೀಡುವ ಸಂದರ್ಭದಲ್ಲಿ ಹೈಕೋರ್ಟ್‌ನ ಸೂಚನೆ ಮೇಲೆ ಹಾಜರಿದ್ದ ಆರೋಗ್ಯ ಇಲಾಖೆಯ ಕಾರ್ಯದರ್ಶಿ ಅರ್ಬಿಟೊನನ್ನು ಒಬ್ಬ ವಂಚಕ ಎಂದು ಅಭಿಪ್ರಾಯಪಟ್ಟು ವರದಿ ಸಲ್ಲಿಸಿದ್ದಾರೆ. ಈ ವರದಿಯನ್ನು ನ್ಯಾಯಾಲಯಕ್ಕೆ ಒಪ್ಪಿಸಲಾಗಿದೆ ಎಂದು ಆರೋಗ್ಯ ಸಚಿವ ಕಾಗೋಡು ತಿಮ್ಮಪ್ಪ ಇಂದು ಸುದ್ದಿಗಾರರಿಗೆ ತಿಳಿಸಿದರು.

(ಪ್ರಜಾವಾಣಿ 17-8-2002)

ಸಮಸ್ಯೆ ?- ಸಮಾಧಾನ !

ವಿನಯ ಪರಮಾದಿ, ಹುಬ್ಬಳ್ಳಿ .- ಬೆಂಗಳೂರಿನಲ್ಲಿ ಫಿಲಿಪೈನ್ಸ್‌ನ ಆರ್ಬಿಟೋ ಎಂಬ ವ್ಯಕ್ತಿ ಸೈಕಿಕ್ ಹೀಲಿಂಗ್ ಎಂದು ಬರಿಗೈಯಿಂದ ಶಸ್ತ್ರಚಿಕಿತ್ಸೆ ಮಾಡುತ್ತಾನೆ ಎಂದು ಇದ್ದಕಿದ್ದಂತೆಯೇ ಪ್ರಚಾರವಾಯಿತು. ವಿಧಾನ ಸೌಧದ ಹಾಲ್‌ನಲ್ಲೇ ಪ್ರದರ್ಶನ ನಡೆಯಿತು. ಶಾಸಕರು ನಾ ಮುಂದು ತಾ ಮುಂದು ಎಂದು ನುಗ್ಗಿದರಂತೆ. ಲೀಲಾದೇವಿ ಆರ್.ಪ್ರಸಾದರ ಹೊಟ್ಟೆಯೊಳಗಿಂದ ಕಪ್ಪು ಬಣ್ಣದ ಗಡ್ಡೆ ಹೊರತೆಗೆದರಂತೆ. ಶಾಸಕ ಸೋಮಣ್ಣನವರ ಬೆನ್ನು, ಸೊಂಟದ ಶಸ್ತ್ರಚಿಕಿತ್ಸೆ (ಬರಿಗೈ ಯಿಂದಲೇ) ಮಾಡಿ ಏನೋ ಹೊರಗೆ ತೆಗೆಯಲಾಯಿತಂತೆ. ಶಾಸಕರು, ಮಂತ್ರಿಗಳು ಇಷ್ಟು ಮೂಢರೇ ? ಕೇಳಿ ದಿಗ್ಭ್ರಾಂತರಾಗಿದ್ದೇವೆ.

★ ಅನೇಕ ಶಾಸಕರು, ಮಂತ್ರಿಗಳು, ಅಧಿಕಾರಿಗಳು, ಮಂತ್ರಿಗಳು ಮುಂತಾದವರೆಲ್ಲ ಬಹಳ ಬುದ್ಧಿವಂತರು, ಪ್ರಜ್ಞಾವಂತರು ಎಂದು ಈ ವರೆಗೂ ತಿಳಿದಿದ್ದ ನಿಮ್ಮ ಮೂಢತ್ವ ನಮಗೆ ಆಶ್ಚರ್ಯ ತಂದಿದೆ. ಈ ಸರ್ಕಾರದ ಆಡಳಿತದಲ್ಲಿ ಸಾಗಿರುವ ಪ್ರಾಣ ಬಲಿ ಬಗ್ಗೆ ಕೇಳಿದರೆ ಆಶ್ಚರ್ಯ-ದುಃಖ ಎರಡೂ ಆಗುತ್ತವೆ. ಸದ್ಯ, ದ್ವೇಷ-ಮಾತ್ಸರ್ಯ-ಸಣ್ಣತನ ಎಲ್ಲಾ ಗಟ್ಟಿಗೊಂಡು ಕಪ್ಪುಗಡ್ಡೆಯಾಗಿದ್ದುದು ಲೀಲಾದೇವಿಯವರ ಹೊಟ್ಟೆಯಿಂದ ಈಗಾದರೂ ಹೊರಗೆ ಬಿದ್ದಿದ್ದರೆ ಅದಕ್ಕಿಂತ ಸಂತೋಷದ ವಿಷಯ ಏನಿದೆ ? ಅಧಿಕಾರದಲ್ಲಿರುವವರನ್ನು ಅಪ್ಪಾಜಿ ಎಂದು ಓಲೈಸುತ್ತ, ಇನ್ನೊಬ್ಬರು ಅಧಿಕಾರಕ್ಕೆ ಬರುತ್ತಲೇ ಆ ಅಪ್ಪಾಜಿಗೆ ದತ್ತುಪುತ್ರರಾಗುವ, ಪಕ್ಷಾಂತರ ಪ್ರವೀಣ ಸೋಮಣ್ಣನವರ ಬೆನ್ನಿನಿಂದ ಗಡ್ಡೆ ಹೊರಬಿದ್ದು ಈಗಲಾದರೂ ಅವರ ಬೆನ್ನು ತತ್ತ್ವನಿಷ್ಠೆ, ಸ್ವಾಭಿಮಾನದಿಂದ ನಿರೋಗಿಯಾದರೆ ನಾವು-ನೀವು ಸಂತೋಷ ಪಡಬೇಕಲ್ಲವೇ ?

ವನಜಾ ಶ್ರೀನಿವಾಸ್, ಬೆಂಗಳೂರು.- ಸೈಕಿಕ್ ಹೀಲಿಂಗ್ ಎಂಬುದು ಸತ್ಯವೇ ಸುಳ್ಳೇ ? ಬರಿಗೈಯಿಂದ ಶಸ್ತ್ರಚಿಕಿತ್ಸ ಸಾಧ್ಯವೇ? ಎಷ್ಟು ಮೂರ್ಖರಂತೆ ಅನೇಕ ಜನರು ಮುನ್ನುಗ್ಗಿದರಲ್ಲ. ಇದು ಸರಿಯೆ ?

★ ಜಗತ್ತಿನ ಇತರ ರಾಷ್ಟ್ರಗಳಲ್ಲಿ ತಿರಸ್ಕರಿಸಲ್ಪಟ್ಟ ಎಲ್ಲಾ ಸಾಮಗ್ರಿಗಳು ಸಲಕರಣೆಗಳಿಗೆ ಭಾರತವು ಒಳ್ಳೆಯ ಮಾರುಕಟ್ಟೆ, ಏಕೆಂದರೆ ಜನರು ಮೂಢರು,ವ್ಯಾಪಾರಸ್ಥರು ತಂತ್ರಗಾರರು, ಮಧ್ಯವರ್ತಿಗಳು ಕಪಟಿಗಳು.

ಸೈಕಿಕ್ ಹೀಲಿಂಗ್ ಎಂಬುದು ಒಂದು ವಾಸ್ತವತೆ ಮತ್ತು ವೈಜ್ಞಾನಿಕ ತಳಹದಿಯ ಮೇಲೆ ನಿಂತ ಚಿಕಿತ್ಸಾ ಪದ್ಧತಿ. ಮಗುವಿಗೆ ತಟ್ಟುತ್ತ ಮಲಗಿಸುತ್ತೀರಿ, ತೊಟ್ಟಿಲಲ್ಲಿ ಹಾಕಿ ಹಾಡುತ್ತೀರಿ. ಇವೆಲ್ಲವೂ ಅದರ ಒಂದು ಭಾಗವೆ ? ದೈವೀಶಕ್ತಿಯನ್ನು ನಂಬಿ ಭಸ್ಮ ಧರಿಸುತ್ತೀರಿ, ಮಂತ್ರಜಪ ಮಾಡುತ್ತೀರಿ. ದೇವಕಾರುಣ್ಯವನ್ನು ಅವತರಣ ಮಾಡಲು ನೀವು ಮಧ್ಯವರ್ತಿ ವಾಹಕರಾಗುತ್ತೀರಿ. ಆದರೆ ಈ ಎಲ್ಲಕ್ಕೂ ಒಂದು ಸೀಮೆಯಿದೆ. ಬೆರಳಿನಿಂದ ಕೊಯ್ಯಲು ಬರುವುದೇ ? ಸಮ್ಮೋಹನ ಪ್ರಯೋಗದಿಂದ ವ್ಯಕ್ತಿಯನ್ನು ಭ್ರಾಂತಿಗೆ ಒಳಪಡಿಸಿ, ಕೊಯ್ದಂತೆ, ಒಂದು ಗಡ್ಡೆಯನ್ನು ಹೊರಗೆ ತೆಗೆದಂತೆ ಕೈಚಳಕ ಪ್ರಯೋಗಿಸಬಹುದು. ಆಗ ರೋಗಿಗೆ ತಾತ್ಕಾಲಿಕವಾಗಿ ಆರಾಮಾದಂತೆ ಎನಿಸಬಹುದು. ಆದರೆ ಆ ಸಮ್ಮೋಹಕತೆಯ ಪ್ರಭಾವ ಇಳಿದ ಮೇಲೆ ಕಾಯಿಲೆ ವಾಸಿಯಾದುದು, ಇಲ್ಲದ್ದು ಗೊತ್ತಾಗುತ್ತದೆ. ಏನೊಂದೂ ವಿವೇಚನೆ ಇಲ್ಲದೆ ಕೆಲವು ಜನರು ವರ್ತಿಸುವುದು ನಿಜಕ್ಕೂ ಅಸಂಬದ್ಧ.

ಬಸನಗೌಡ ಪಾಟೀಲ್, ನಿವೃತ್ತ ಸೇನಾಧಿಕಾರಿ, ನಿಗಡಿ ಪೂನಾ.- ಪೂಜ್ಯರೇ, ಲಿಂಗಾಯತ ಸಮಾಜವು ಸಾಗಿರುವ ದಿಕ್ಕನ್ನು ನೋಡಿದರೆ ಗಾಬರಿ ಎನಿಸುತ್ತದೆ. ತೋಂಟದ ಶ್ರೀಗಳು ಸಾದರ ಸಮಾಜವನ್ನು ಅವಹೇಳನ ಮಾಡಿದರು ಎಂದು ಅವರ ಸ್ವಾಮಿಗಳು, ಜಾತಿಯವರು ಶ್ರೀ ಸಿದ್ಧಲಿಂಗ ಸ್ವಾಮಿಗಳ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಅವರು ಪ್ರತಿ ವರ್ಷ ತಮ್ಮ ಜಾತಿಯ ಸಮ್ಮೇಳನ ಮಾಡುತ್ತಾರೆಂದು ಕೇಳಿದ್ದೇನೆ. ಬೆಂಗಳೂರಲ್ಲಿ ವೀರಶೈವ ಸಜ್ಜನ (ಗಾಣಿಗ)ರ ಒಂದು ಉಪಜಾತಿ ಸಮ್ಮೇಳನವಾಯಿತೆಂದು ಪತ್ರಿಕೆಗಳಲ್ಲಿ ಓದಿದೆವು. ಮಾಜಿ ಸಚಿವ ಕಾಶಪ್ಪನವರ ಬೆಂಬಲಿಗರು ವೀರಶೈವ ಪಂಚಮಸಾಲಿ ಜನಾಂಗದ ಪ್ರತಿನಿಧಿಗೆ ಸಚಿವ ಪದವಿ ಕೊಡಬೇಕೆಂದು ಬಹಿರಂಗ ಪ್ರದರ್ಶನ ಮಾಡಿದರು. ಹಾಗಾದರೆ ನಿಜವಾದ ಲಿಂಗಾಯತರು ಯಾರು ? ಇಡೀ ಸಮಾಜವನ್ನು ಒಟ್ಟುಗೂಡಿಸುವುದು ಹೇಗೆ ? ಎಂಬ ಚಿಂತನೆ ಕಾಡುತ್ತಿದೆ.

★ ಹೀಗೆ ಚಿಂತೆ ಅರ್ಥಾತ್ ಚಿಂತನೆ ಮಾಡುವ ನಿಮ್ಮಂಥವರನ್ನು ಕಂಡು ನಮಗೂ ಕಗ್ಗತ್ತಲಲ್ಲಿ ಬೆಳಕು ಕಂಡ ಆಶಾಭಾವನೆ ಮೂಡುತ್ತಿದೆ. ಒಬ್ಬ ವಿದೇಶಿ ಪ್ರವಾಸಿ ಹೇಳಿದನಂತೆ "ಇಂಡಿಯಾದಲ್ಲಿ ನಾನು ಬೆಂಗಾಲಿಯನ್ನು ಕಂಡೆ, ಮಹಾರಾಷ್ಟ್ರೀಯನನ್ನು ಕಂಡೆ, ಗುಜರಾತಿಯನ್ನು ಕಂಡೆ, ಭಾರತೀಯನನ್ನು ಕಾಣಲಿಲ್ಲ ." ಎಂದು. ಹಾಗೆಯೇ ಇಂದು ಲಿಂಗಾಯತ ಸಮಾಜದಲ್ಲಿ ಬಣಜಿಗರನ್ನು, ಪಂಚಮಸಾಲಿಯವರನ್ನು, ಸಾದರನ್ನು, ಸಜ್ಜನರನ್ನು, ರೆಡ್ಡಿ ಇತ್ಯಾದಿ, ಇತ್ಯಾದಿ, ಕಾಣಬಹುದೇ ವಿನಾ ಲಿಂಗಾಯತರನ್ನಲ್ಲ. ಆದರೂ ನಿರಾಶರಾಗಬೇಕಿಲ್ಲ.ಇಂದೂ ಸಮಷ್ಟಿ ಚಿಂತನೆ ಮಾಡುವ ನಿಮ್ಮಂತಹವರು ಇದ್ದಾರೆ ಅಲ್ಲಲ್ಲೇ, ಗಿಡಗಳಲ್ಲಿ ಅರಳಿದ ಹೂಗಳಂತೆ. ನಿರಾಶರಾಗದೆ ನಾವು ಪರಿಹಾರ ಹುಡುಕುತ್ತಿದ್ದೇವೆ. ಅಂದು ಧರ್ಮಪಿತ ಬಸವಣ್ಣನವರು ಎಲ್ಲ ಜಾತಿ ಮತ ಪಂಥ ಉದ್ಯೋಗಗಳವರನ್ನು ಒಟ್ಟುಗೂಡಿಸಿ ಶರಣ ಸಮಾಜ ಕಟ್ಟಬಲ್ಲವರಾದರು. ನಮ್ಮ ದುರಾದೃಷ್ಟ, ಖಾನೇ ಸುಮಾರಿ ಲಿಂಗಾಯತರೊಳಗಣ ಒಳಜಾತಿಗಳವರನ್ನು ಅವ್ರ ಸಣ್ಣತನ ತೊಡೆದು ಒಟ್ಟುಗೂಡಿಸುವ ಭಾರ ಬಿದ್ದಿದೆ. ಅಂದರೆ ಲಿಂಗಾಯತರು 800 ವರ್ಷಗಳಿಗಿಂತಲೂ ಹಿಂದಿದ್ದಾರೆ, ಕ್ಷುಲ್ಲಕರಾಗಿದ್ದಾರೆ. ಎಂದು ಅರ್ಥವಾಗುವುದಿಲ್ಲವೇ ?

ಅದಕ್ಕಾಗಿಯೇ ನಾವು ಜಾತಿ ಸಮ್ಮೇಳನಗಳನ್ನು ಬಿಟ್ಟು ಅಖಂಡ ಸಮಾಜವನ್ನು ಒತ್ತಟ್ಟಿಗೆ ತರಲು ಶರಣಮೇಳ ಮತ್ತು ಕಲ್ಯಾಣಪರ್ವ ಮಾಡುತ್ತಿರುವುದು.ನಿಮ್ಮಗುರು ಯಾರು ? ಎಂದಾಗ ಮನೆ ಗುರು,ಜಾತಿ ಗುರು, ಕುಲಗುರುಗಳ ಹೆಸರು ಬಿಟ್ಟು ಧರ್ಮಗುರು ಬಸವಣ್ಣನವರ ಹೆಸರು ಹೇಳಿ ಎಂದು ಜನರಿಗೆ ಕಲಿಸುತ್ತಿರುವುದು. ಅಂದು ಧರ್ಮಪಿತರು ಎಲ್ಲ ಜಾತಿ ಪಂಗಡಗಳ ಮುಮುಕ್ಷುಗಳನ್ನು ಆಕರ್ಷಿಸಿ ಶರಣ ಸಮಾಜ ಕಟ್ಟಿದರು. ಇಂದು ನಾವು ಲಿಂಗಾಯತ ಸಮಾಜದೊಳಗಣ ಉಪಪಂಗಡಗಳೊಳಗಣ ಪ್ರಾಜ್ಞರನ್ನೆಲ್ಲ ಸೇರಿಸಿ

ನಿಜವಾದ ಲಿಂಗಾಯತ ಸಮಾಜ ಕಟ್ಟೋಣ ; ವೇಮನ ಶಿವಯೋಗಿ ಪೂರ್ವಜೀವನದಲ್ಲಿ ಅತ್ಯಂತ ಹೇಯವಾದ ಅನೀತಿಯ ಜೀವನದಲ್ಲಿ ಮುಳುಗಿದ್ದು ನಂತರ ಜ್ಞಾನೋದಯ ಹೊಂದಿ ಮಹಾಯೋಗಿಯಾದಂತೆ ಕ್ಷುಲ್ಲಕ ಮಾರ್ಗ ಹಿಡಿದ ಲಿಂಗಾಯತರು ಒಂದು ದಿನ ತಮ್ಮ ಸಣ್ಣತನದ ಬಗ್ಗೆ ನಾಚಿಕೆ ಪಟ್ಟುಕೊಂಡು ವಿಶಾಲವಾದ ಬಸವಪಥಕ್ಕೆ ಬರಬಹುದು; ಸಂಘಟಿತವಾದ ಶಿಸ್ತುಬದ್ಧ ಸಮಾಜವಾಗಿ ರೂಪುಗೊಳ್ಳಬಹುದು ಎಂಬ ಆತ್ಮವಿಶ್ವಾಸ ನನಗಿದೆ.

ಪ್ರಭುರಾಜ ಪಾಟೀಲ್, ಬೀದರ್.- ಕೂಡಲ ಸಂಗಮದೇವ ಎಂಬುದರ ಅರ್ಥ ಕೂಡಲ-ಜೀವಾತ್ಮ, ಸಂಗಮ-ಪರಮಾತ್ಮ ಎಂದಿರುವಾಗ ಇದು ಸೃಷ್ಟಿಕರ್ತ ಸೂಚಕ ಪದವೇ ಆಯಿತು. ಏಕಿದನ್ನು ಬದಲಾಯಿಸಬೇಕಿತ್ತು ಎಂದು ಕೆಲವರ ಸಂದೇಹ ?

★ ಬಾ ಭಕ್ತ ಶರಣಾಗು ಎಂಬ ಪದ್ಯದಲ್ಲಿ ಇದನ್ನು ನಾನೇ ಬರೆದಿದ್ದೇನೆ. ನಾಮವಿಲ್ಲದ ದೇವರಿಗೆ ಯಾವ ಹೆಸರನ್ನು ಬೇಕಾದರೂ ಕೊಡಬಹುದು. ಆದರೆ ಕೂಡಲ ಸಂಗಮನಾಥ ಎಂಬ ಹೆಸರಿನ ಸ್ಥಾವರ ಲಿಂಗವು ಇರುವುದರಿಂದ ಬಸವಣ್ಣನವರು ತಮ್ಮ 21 ನೆಯ ವಯಸ್ಸಿನವರೆಗೆ ಅಂದರೆ ಸಾಕ್ಷಾತ್ಕಾರವಾಗುವವರೆಗೆ ಕೂಡಲ ಸಂಗಮೇಶ್ವರನನ್ನು ಪೂಜಿಸಿ ಸಾಕ್ಷಾತ್ಕಾರವಾದ ನಂತರ ನಿರಾಕಾರ ಲಿಂಗದೇವನ ಕುರುಹನ್ನು ಇಷ್ಟಲಿಂಗರೂಪದಲ್ಲಿ ನೀಡಿ ಪೂಜಿಸಲು ಹೇಳಿದರು. ಆದ್ದರಿಂದ ಈ ಎರಡು ಪರಿಕಲ್ಪನೆಗಳನ್ನು ಸ್ಪಷ್ಟವಾಗಿ ಜನರಲ್ಲಿ ಮೂಡಿಸಲು ಎರಡು ಪದಗಳು ಅತ್ಯಗತ್ಯ. ಆದ್ದರಿಂದ ಶಿವನ ಒಂದು ರೂಪವಾದ ಕೂಡಲಸಂಗಮದೇವನನ್ನು ಸಂಕೇತಿಸುವ ಮುದ್ರಿಕೆಯನ್ನು ಕೆಲವು ವಚನಗಳಲ್ಲಿ ಇರಿಸಿಕೊಂಡು,ಈ ಪರಿಕಲ್ಪನೆಗೆ ಬೇರೆಯಾದ ಸೃಷ್ಟಿಕರ್ತನನ್ನು ಸಂಕೇತಿಸುವ ವಚನಗಳಿಗೆ ಲಿಂಗದೇವ ಕೊಡಲಾಗಿದೆ

1. ಹೊತ್ತಾರೆ ಎದ್ದು ಲಿಂಗದೇವನ ದೃಷ್ಟಿಯಾರೆ ನೋಡದವನ ಬಾಳುವೇನವನ ?
2. ಗಂಡ ಲಿಂಗದೇವರ ಭಕ್ತ, ಹೆಂಡತಿ ಮಾರಿ ಮಸಣಿಗೆಯ ಭಕ್ತೆ

ಹೀಗೆ ಲಿಂಗದೇವ ಪದವು ಸೃಷ್ಟಿಕರ್ತನ ಕುರುಹಾದ ಇಷ್ಟಲಿಂಗವನ್ನು ನಿರ್ದೇಶಿಸುತ್ತದೆ.

ವೈಜನಾಥ ಧನ್ನೂರು, ಬೀದರ್.- ನಮ್ಮಲ್ಲಿ ಕೆಲವರು ಹಲವಾರು ವರ್ಷಗಳಿಂದ ಹಂಬಲಿಸುತ್ತಿದ್ದರು, ಆಗ್ರಹಿಸುತ್ತಿದ್ದರು. ಮಾತಾಜಿಯವರು ಕೂಡಲ ಸಂಗಮವನ್ನು ಅಭಿವೃದ್ಧಿಪಡಿಸಿದಂತೆ ಬಸವ ಕಲ್ಯಾಣವನ್ನು ಏಕೆ ಅಭಿವೃದ್ಧಿಪಡಿಸುತ್ತಿಲ್ಲ.? ನಾವೆಲ್ಲರೂ ಸಹಕರಿಸಬಹುದು ಎಂದು. ಬಹುಜನರ ಹಂಬಲ ಪೂರ್ಣಗೊಳಿಸುವಂತೆ ನೀವೀಗ ಕಲ್ಯಾಣಕ್ಕೆ ಬಂದು ಅಭಿವೃದ್ಧಿ ಕಾರ್ಯ ಆರಂಭಿಸಿದ್ದೀರಿ. ಮೊದಲು ಹಂಬಲಿಸುತ್ತಿದ್ದ ಕೆಲವರು ಅವರಿವರ ಮಾತು ಕೇಳಿ ಸಹಕರಿಸದೆ ದೂರ ಉಳಿದಿದ್ದಾರೆ. ಇದಕ್ಕೇನೆನ್ನೋಣ ?

★ ಅವರು ದುರ್ದೈವಿಗಳೆಂದು ಮರುಕಪಡೋಣ. ಸತ್ಕಾರ್ಯಗಳು ಯಾರದೋ ಸಹಾಯ-ಸಹಕಾರದಿಂದ ಹೇಗೋ ನಡೆದುಬಿಡುತ್ತವೆ. ಅಂಥ ಸತ್ಕಾರ್ಯದಲ್ಲಿ ಭಾಗಿಗಳಾಗುವ ಪುಣ್ಯವನ್ನು ಕಳೆದುಕೊಳ್ಳುವ ಜನರು ದುರ್ದೈವಿಗಳಲ್ಲವೆ?

ಧಾನೇ ಧಾನೇ ಪರ್ ಖಾನೇ ವಾಲೋಂಕಾ ನಾಮ್ ಲಿಖಾ ಹೈ ಎಂಬ

ಜ್ಞಾನೋಕ್ತಿಯಂತೆ ಪ್ರತಿಯೊಬ್ಬರ ಹಣದ ಮೇಲೂ ಅದು ಏತಕ್ಕೆ ಸಲ್ಲಬೇಕೆಂಬುದು ಬರೆಯಲ್ಪಟ್ಟಿರುತ್ತದೆ. ನಿಜವಾಗಿಯೂ ಬಸವ ಸಂತಾನವಾಗಿದ್ದರೆ ಒಂದು ದಿನ ಮಹಾಮನೆಯ ನಿರ್ಮಾಣದಲ್ಲಿ ಕೈ ಜೋಡಿಸುತ್ತಾರೆ.

ರಾಜಕುಮಾರ್ ಹಲಬರ್ಗಾ, ಕಲಬುರಗಿ.- ಕೆಲವು ರಾಜಕಾರಣಿಗಳು ಮತ್ತು ಕೆಲವು ಮಠಾಧೀಶರು ಸಹ ಬಹಳ ದುಷ್ಟ ಪ್ರವೃತ್ತಿಯವರು ಇರುತ್ತಾರೆ. ಇದು ಎಲ್ಲರಿಗೂ ಗೊತ್ತೇ ಇರುತ್ತದೆ. ಆದರೂ ಸಹ ಅವರನ್ನು ಓಲೈಸುವ, ಗೌರವಿಸುವ (?) ಜನರು ಇದ್ದೇ ಇರುತ್ತಾರಲ್ಲ. ಇದೆಂಥ ವಿಚಿತ್ರ!

★ ಜಗತ್ತಿನ ಯಾವುದೇ ದೇಶ,ಧರ್ಮಗಳಲ್ಲಿ ಇಲ್ಲದಿರುವ ಪದ್ಧತಿಗಳು ಈ ದೇಶದಲ್ಲಿವೆ. ವಿಷ ಉಣ್ಣಿಸುವ ನಾಗರಹಾವು, ಸದಾ ಕೆಟ್ಟದ್ದನ್ನೇ ಮಾಡುವ ಶನಿ ಮುಂತಾದುವುಗಳ ಪೂಜೆ ಇಲ್ಲಿ ರೂಢಿಯಲ್ಲಿದೆ. ಅವು ಒಳ್ಳೆಯವು, ಗೌರವಾರ್ಹವಾದವು ಎಂದಲ್ಲ. ಆ ದುಷ್ಟ ಶಕ್ತಿಗಳು ತಮ್ಮನ್ನು ಕಾಡದಿರಲಿ ಎಂದು. ಅದೇ ರೀತಿ ಈ ದುಷ್ಟಶಕ್ತಿಗಳು ಕಾಡದಿರಲಿ ಎಂದು ಅಂತರಂಗದಲ್ಲಿ ಅಭಿಮಾನ, ಗೌರವ ಇಲ್ಲದಿದ್ದರೂ ಹೊರಗೆ ಆ ಅಭಿಮಾನ, ಗೌರವವನ್ನು ಕೆಲವರು ತೋರಿಸುವರು.

ಎಂ.ಗೀತಾಂಜಲಿ ಶಿವಮೂರ್ತಿ, ಚಂದಕವಾಡಿ- 571313.-

ಪ್ರಶ್ನೆ- 1 :- ಓಂ ಲಿಂಗಾಯ ನಮಃ ಎಂಬ ದೇವ ಮಂತ್ರವನ್ನು ಓಂ ನಮಃ ಲಿಂಗಾಯ ಎಂದು ಉಚ್ಚರಿಸಬಹುದೆ?

★ ಕನ್ನಡ ಭಾಷೆಯಲ್ಲಿ ನಮಸ್ಕಾರವು ಕೊನೆಗೆ ಬರುತ್ತದೆ. ಸಂಸ್ಕೃತದಲ್ಲಿ ಎಲ್ಲಿ ಬೇಕಾದರೂ ಬರಬಹುದು. ಓಂ ನಮಃ ಶಿವಾಯ ಅದೇ ರೀತಿ ರೂಢಿಯಾಗಿರುವುದು. ಲಿಂಗಾಯ ನಮಃ ಎಂಬ ಈ ಪದಪುಂಜವನ್ನು ನಾನು ಈಗಾಗಲೇ ಸಾಂಪ್ರದಾಯಿಕವಾಗಿ ರೂಢಿಯಲ್ಲಿರುವ ಶ್ರೀ ಗುರುಬಸವ ಲಿಂಗಾಯ ನಮಃ ಎಂಬ ಗಣೆಯಿಂದಲೇ ಆಯ್ದು ತೆಗೆದಿದ್ದೇನೆ. ಅದಕ್ಕಾಗಿ ಈಗಾಗಲೇ ರೂಢಿಯಲ್ಲಿರುವಂತೆ ನಮಃ ಕೊನೆಯಲ್ಲಿ ಬರುವುದೇ ಸೂಕ್ತ. ಓಂಕಾರ ಸ್ವರೂಪಿಯಾದ ಲಿಂಗದೇವನಿಗೆ ನಮಸ್ಕಾರ ಎಂಬುದು ಬಹಳ ಅರ್ಥಗರ್ಭಿತ.

ಪ್ರಶ್ನೆ- 2 :- ಇಷ್ಟಲಿಂಗದ ಮೇಲೆ 3 ಬಾರಿ ಮಂತ್ರೋದಕ ಎರೆದು ತೀರ್ಥವನ್ನು ಸ್ವೀಕರಿಸುತ್ತೇವೆ. ಆಗ ಇಷ್ಟಲಿಂಗದ ಮೇಲೆ ವಿಭೂತಿ-ಗಂಧ ಇರುತ್ತವೆ. ಇದರಿಂದ ಏನೂ ತೊಂದರೆಯಾಗುವುದಿಲ್ಲವೆ.?

★ ಪೂಜೆಗೆ ಬಳಕೆಯಾಗುವ ವಸ್ತುಗಳೆಲ್ಲ ಕೇವಲ ನಿರಪಾಯಕಾರಿಯಾಗಿರುವುದು ಅಷ್ಟೇ ಅಲ್ಲ ಔಷಧೀಯ ಗುಣಗಳಿಂದ ಕೂಡಿರುತ್ತವೆ. ಆದ್ದರಿಂದ ಏನೂ ತೊಂದರೆಯಿಲ್ಲ.ಹಾಗೆಂದು ವಿಭೂತಿಯನ್ನು ಸಿಕ್ಕಾಪಟ್ಟೆ ತಿನ್ನಬಾರದು,ಅದು ಜಠರಾಂಗದಲ್ಲಿ ಕುಳಿತು ರೋಗಕ್ಕೆ ಕಾರಣವಾಗುತ್ತದೆ.

ಪ್ರಶ್ನೆ- 3 :- ಈ ಮಹತ್ ಸೃಷ್ಟಿಯನು ರಚಿಸಿದ ಮಹಾದೇವ ಎಂಬುದರಲ್ಲಿ ಮಹಾದೇವ ಬದಲು ಲಿಂಗದೇವ ಎನ್ನಬಹುದೇ ?

★ ಎನ್ನಬಹುದು; ಮಹಾದೇವ ಎಂದರೆ (Great God) ಎಂದರ್ಥ. ಧರ್ಮಪಿತರ ವಚನದಲ್ಲಿ ಬಂದಿಲ್ಲವೇ "ಮಹಾದೇವ ಮಹಾದೇವ ಇಲ್ಲಿಂದ ಮುಂದೆ ಶಬ್ದವಿಲ್ಲ" ಆದ್ದರಿಂದ ದೇವನನ್ನು ಹೇಗೂ ಕರೆಯಬಹುದು ಎಂದು ಈ ಪದ ಇಡಲಾಗಿದೆ. ಲಿಂಗದೇವನ ಅನಂತ ನಾಮಗಳ ಪರಿಚಯವಾದರೆ ಒಳಿತಲ್ಲವೇ ?

ಪ್ರಶ್ನೆ 4 :- ಅಲ್ಲಮ ಪ್ರಭುಗಳ ಅಂಕಿತನಾಮ ಗುಹೇಶ್ವರ; ಅನಿಮಿಷಯೋಗಿಯಿಂದ ಗುಹೆಯಲ್ಲಿ ಸಿಕ್ಕ ಕುರುಹು. ಹಾಗಾದರೆ ಈ ಅನುಗ್ರಹಕ್ಕೆ ಮೊದಲು ಅವರು ವಚನ ಬರೆದಿಲ್ಲವೆ ?

★ ಗುರುಕಾರುಣ್ಯ ಆದ ಮೇಲೆ ಬರೆದಿರುವ ಸಾಧ್ಯತೆ ಇದೆ. ನಾನೂ ಅಷ್ಟೇ; ದೀಕ್ಷೆ ಆದ ಮೇಲೇ ಬರೆದುದು. ಒಂದು ವೇಳೆ ಪ್ರಭುದೇವರು ಮೊದಲು ಏನಾದರು ಬರೆದಿದ್ದರೂ ಅಂಕಿತನಾಮವಿಲ್ಲದ ಕಾರಣ ಆ ಸಾಹಿತ್ಯ ಗುರುತಿಸಲ್ಪಟ್ಟಿರಲಿಲ್ಲ ಎಂಬುದೂ ಚಿಂತನಾರ್ಹ.

ಪ್ರಶ್ನೆ 5 :- ಊಟಕ್ಕೆ ಕುಳಿತಾಗ ಎಲ್ಲ ಎಡೆಯಾದ ಮೇಲೆ ಇಷ್ಟಲಿಂಗಕ್ಕೆ ತೋರಿಸಿ ಶಿವಶರಣು ಎನ್ನುವ ಪದ್ಧತಿಯುಂಟು. ಲಿಂಗ ಶರಣು ಎನ್ನಬಹುದಲ್ಲವೇ ?

★ ಖಂಡಿತ ಅನ್ನಬಹುದು. ಲಿಂಗ(ದೇವನಿಗೆ)ಶರಣು ಎಂದು ನೈವೇದ್ಯ ಮಾಡಿ ಎಲ್ಲರಿಗು ಶರಣು ಶರಣಾರ್ಥಿ ಎಂದು ಸಹಪಂಕ್ತಿಯಲ್ಲಿ ಕುಳಿತವರಿಗೆ, ಎಡೆಬಡಿಸಿದವರಿಗೆ ಶರಣು ಮಾಡಿ ಪ್ರಸಾದ ಎಂದು ಸ್ವೀಕರಿಸುವುದು ಬಹಳ ಶ್ರೇಷ್ಠ. ಹಾಗೆಯೇ ಎಡೆ ಮಾಡುತ್ತಿರುವಾಗ ಲಿಂಗದೇವ, ಗುರುಬಸವಣ್ಣನವರ ಸ್ಮರಣೆಯ ಕೆಳಗಿನ ವಚನಗಳನ್ನು ಹೇಳಬೇಕು.

1. ನೀನೊಲಿದರೆ (ಧರ್ಮಪಿತರ ವಚನ) ಮತ್ತು
2. ಆಯಿತ್ತು ಬಸವಾ (ಪ್ರಭುದೇವರ ವಚನ)
3. ಅಂದಂದಿನಾಹಾರ ತಂದೆಯಂದದಿ ನೀಡಿ

ಎಂದೆಂದು ಎಮ್ಮಗಳ ಸಲಹುತ್ತಲಿರುವ
ಇಂಬೀವ ಜಗದೊಡೆಯ ನನ್ನ ನಾನರ್ಪಿಸುವೆ
ಎಂಬ ಶರಣಾಗತಿಯಿಂ ನೈವೇದ್ಯವಿಡುವೆ.

ಪಿ. ರಂಗಪ್ಪ., ತುಮಕೂರು ಮತ್ತು ಡಿ. ಗುರುಮಲ್ಲಪ್ಪ, ತಾಳವಾಡಿ.

ಪ್ರಶ್ನೆ- 1 :- ದಿ. 19-08-1996 ಹೊರಡಿಸಿರುವ ಬಸವ ಲಿಂಗೈಕ್ಯ ದಿನಾಚರಣೆಯ ಕರಪತ್ರದಲ್ಲಿ 800 ನೆಯ ಲಿಂಗೈಕ್ಯ ದಿನಾಚರಣೆ ಎಂದಿದ್ದೀರಿ. ಆದರೆ 1167 ರಲ್ಲಿ ಬಸವಣ್ಣನವರು ಲಿಂಗೈಕ್ಯರಾದುದೆಂದು ಶತಮಾನೋತ್ಸವ ಮಾಡಿದಾಗ ಆಗಲೂ ಅಂಚೆ ಚೀಟಿ ಬಿಡುಗಡೆಯಾಯಿತು. ಯಾವುದು ಸರಿ ?

★ ಕಾಲಜ್ಞಾನ ವಚನಗಳಲ್ಲಿ ಅತ್ಯಂತ ಸ್ಪಷ್ಟವಾಗಿ ರಾಕ್ಷಸನಾಮ ಸಂವತ್ಸರದ ನಂತರ ಬರುವ ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ದಿನ; ಅಂದು ಮಂಗಳವಾರವಿತ್ತು. ಆ ದಿನ ಬಸವಣ್ಣನವರು ಬಯಲಾದರು ಎಂದು ಖಚಿತವಾಗಿದೆ ಹೇಳಲ್ಪಟ್ಟಿದೆ. ಇದನ್ನು ಇಂಗ್ಲೀಷ್ ತೇದಿಗೆ ಸರಿಹೊಂದಿಸಿದರೆ ಅದು 1167-1168 ಆಗದೆ 1196 ಆಗುತ್ತದೆ.

ಬಸವಣ್ಣನವರ ಜೀವಿತದ ಕಾಲ ನಿರ್ಣಯ ಎಂಬ ಪುಸ್ತಕ ನಾನು ಬರೆದಿದ್ದು ಜನನದಿಂದ ಲಿಂಗೈಕ್ಯದವರೆಗೆ ವಿವರ ನೀಡಿದ್ದೇನೆ.ಆಂಧ್ರದ ಖ್ಯಾತ ಪಂಡಿತರಾದ ಶ್ರೀ ಮಲ್ಲಿಕಾರ್ಜುನ ಪಂಡಿತಾರಾಧ್ಯರು ಬಸವಣ್ಣನವರು ಲಿಂಗೈಕ್ಯರಾದುದು ತಿಳಿದು ಶೋಕಗೀತೆ ಹಾಡಿ, ನಂತರ ತಾವೂ ಶಿವೈಕ್ಯರಾಗಿದ್ದಾರೆ. ಅದರ ಆಧಾರದ ಮೇಲೆ ಲಿಂಗೈಕ್ಯ ವರ್ಷ 1196.

ಪ್ರಶ್ನೆ 2 :- ಜೀವಿತದ ಅವಧಿ ಎಷ್ಟು?

★ ಲಿಂಗೈಕ್ಯರಾದುದು ಖಚಿತವಾಗಿ 1196, 36 ವರ್ಷ ಕಲ್ಯಾಣದಲ್ಲಿ ವಾಸಿಸಿದ್ದರು ಎಂಬುದಕ್ಕೆ ಧರ್ಮಪಿತ ಬಸವಣ್ಣನವರ ವಚನವೇ ಸಾಕ್ಷಿ ಹೇಳುತ್ತದೆ. ಅಂದರೆ 1160 ಶ್ರಾವಣ ಸೋಮವಾರ, ವಿಕ್ರಮನಾಮ ಸಂವತ್ಸರದಲ್ಲಿ ಕಲ್ಯಾಣವನ್ನು ಪ್ರವೇಶಿಸಿದರು. ಅದಕ್ಕೂ 5 ವರ್ಷ ಮೊದಲು ಮಂಗಳವೇಡೆಗೆ ಆಗಮನ; ಕೂಡಲಸಂಗಮ ಬಿಡುವಾಗ ಹರಿಹರ ಕವಿ ಹೇಳುವಂತೆ ಮೂರೇಳು 3 X 7 = 21 ವಯಸ್ಸು ; ಸಂಗಮದಲ್ಲಿದ್ದ ಅವಧಿ 12 ವರ್ಷ (ಹನ್ನೆರಡು ವರ್ಷದ ಚಿಂತೆ ಇಂದು ನಿಶ್ಚಿಂತವಾಯಿತ್ತು ಎಂಬ ವಚನವೇ ಸಾಕ್ಷಿ), ಆದ್ದರಿಂದ ಹುಟ್ಟಿದ್ದು 1134.

ಒಟ್ಟು ಜೀವಿತ 62 ವರ್ಷ 3 ತಿಂಗಳು 2 ದಿವಸ. ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯ, ರೋಹಿಣಿ ನಕ್ಷತ್ರದಲ್ಲಿ ಜನನ (30-4-11340)ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು ಲಿಂಗೈಕ್ಯ (30-7-1196) ಡಾ|| ಬಾಡಾಲ ರಾಮಯ್ಯ ದಿ. 2-7-1196 ಎಂದು ಬರೆಯುತ್ತಾರೆ. ಇದು ಸರಿಯಲ್ಲ. ಏಕೆಂದರೆ ಎಂದೂ ಶ್ರಾವಣಮಾಸವು ಜುಲೈ ಆರಂಭದಲ್ಲಿ ಬರುವುದಿಲ್ಲ. ಆದ್ದರಿಂದ 2-7-1196 ಅಧಿಕ ಆಷಾಡದ ಪಂಚಮಿ ಬಂದಿದೆ. ಆದ್ದರಿಂದ ಶ್ರಾವಣ ಪಂಚಮಿ 30-7-1196ಕ್ಕೆ ಬಂದಿದೆ.

ಧಾರ್ಮಿಕ ಸಂಘಟನೆಯ ಕಾರ್ಯಕರ್ತ, ಊರುಬೇಡ.- ಕೆಲವರು ಸಭೆ ನಡೆದಾಗ ದೊಡ್ಡ ಮೊತ್ತವನ್ನು ದೇಣಿಗೆ ಕೊಡುವುದಾಗಿ ಹೇಳಿ ಜನರಿಂದ ಚಪ್ಪಾಳೆ ಗಿಟ್ಟಿಸಿಕೊಳ್ಳುತ್ತಾರೆ. ಸಭೆಯ ಸಂಯೋಜಕರಿಂದ ಸನ್ಮಾನ ಪಡೆದುಕೊಳ್ಳುತ್ತಾರೆ. ಆದರೆ ಕೊಡುವ ಶಕ್ತಿ ಇದ್ದರೂ ಕೊಡಲಾರದೆ ನಮ್ಮನ್ನು ತಿರುಗಾಡಿಸುತ್ತಾರೆ. ನಾವು ಏನು ಮಾಡಬೇಕು ?

★ ಅವರ (ಅವ) ಗುಣ ನೋಡಿ ಸೈರಿಸಿಕೊಳ್ಳುವ ತಾಳ್ಮೆ ಬೆಳೆಸಿಕೊಳ್ಳಬೇಕು. ಏಕೆಂದರೆ ಅಂಥವರಿಗೆ ದುಡ್ಡು ಬಿಚ್ಚಬೇಕೆಂದರೆ ಪ್ರಾಣಬಿಡುವಷ್ಟು ಯಾತನೆ ಆಗುತ್ತದೆ. ಆದರೆ ಕೀರ್ತಿಯ ಹುಚ್ಚಿನಿಂದಾಗಿ ವೇದಿಕೆ ಮೇಲೆ ವಾಗ್ದಾನ ನೀಡುವ ಹವ್ಯಾಸ ಬೆಳೆಸಿಕೊಂಡಿರುತ್ತಾರೆ. "ಮಾತು ಆಡಿದರೆ ಹೋಯ್ತು, ಮುತ್ತು ಒಡೆದರೆ ಹೋಯ್ತು" ಎಂಬಂತೆ ನಾಲಿಗೆಯಿಂದ ಹೊರಬಂದ ವಾಗ್ದಾನವನ್ನು ಪೂರೈಸಬೇಕು ಎಂಬ ನಿಷ್ಠೆಯೇ ಇರುವುದಿಲ್ಲ. ನನಗಿನ್ನೂ ಜೀವನಾನುಭವ ಆಷ್ಟಿಲ್ಲದಿದ್ದಾಗ ಅಂಥ (ಗೊಳ್ಳು) ವಾಗ್ದಾನಿಗಳು ಮಾತುಕೊಟ್ಟ ಮೇಲೆ ಆಗಾಗ ಅದನ್ನು ನೆನಪಿಸುತ್ತಿದ್ದೆವು. ಈಗ ಅದನ್ನೂ ಕೈಬಿಟ್ಟಿದ್ದೇವೆ. ಏಕೆಂದರೆ ಅಂಥ ಜಿಪುಣರನ್ನು ಒತ್ತಾಯಿಸಿದರೆ ಅವರ ಹಣವೂ ಬರದು, ಅವರೂ ಪೂಜೆ-ಪ್ರಾರ್ಥನೆಗೆ ಬರುವುದಿಲ್ಲ. ಆದ್ದರಿಂದ ಮತ್ತೆ ಯಾರಾದರೂ ಪುಣ್ಯಾತ್ಮರು ಕೊಟ್ಟೇ ಕೊಡುತ್ತಾರೆ, ಕೆಲಸ ಹೇಗೋ ನಡೆಯುತ್ತದೆ; ಈ (ವಾಕ್) ದಾನಿಗಳನ್ನು ಏಕೆ

ಕಳೆದುಕೊಳ್ಳಬೇಕು? ಎಂದು ಆಲೋಚಿಸುತ್ತೇನೆ. ವೇದಿಕೆ ಮೇಲೆ ಘೋಷಿಸಿ ಕೆಲವು ನಿಮಿಷಗಳ ಕಾಲವಾದರೂ ಅವರು ಎಲ್ಲರಿಗೂ ಸಂತೋಷ ನೀಡಿದರಲ್ಲ (?) ಎಂದು ಸಮಾಧಾನ ಪಟ್ಟುಕೊಳ್ಳಬೇಕು ಅಷ್ಟೆ!

ಚಂದ್ರಶೇಖರ್. ಎನ್.ಎಸ್., ಬೆಂಗಳೂರು.- ಈ ಊರಲ್ಲಿ ಓರ್ವ ಸ್ವಾಮಿಗಳಿದ್ದಾರೆ. ಎಲ್ಲಾ ಕಡೆ ಹೋಗಿ ಅವರವರ ವೇದಿಕೆಗೆ ತಕ್ಕಂತೆ ಹಿತವಾಗಿ ಮಾತನಾಡುತ್ತಾರೆ .ಬಸವ ತತ್ತ್ವದವರ ವೇದಿಕೆ ಮೇಲೆ ಏಕದೇವೋಪಾಸಕರಾಗಿ ಮಾತನಾಡಿದರೆ ಮತ್ತೊಂದು ಕಡೆ ಹೋಗಿ ಬೆತ್ತಲೆ (ಬೇವಿನ ಸೊಪ್ಪು ಉಡುವ) ಸೇವೆ, ಸತಿ ಸಹಗಮನ ಮುಂತಾದವು ಭಾರತೀಯ ಧಾರ್ಮಿಕ ಆಚರಣೆಗಳು ಉಳಿಯಬೇಕು ಎನ್ನುತ್ತಾರೆ. ಇದೆಂಥಾ ವಿಚಿತ್ರ?

★ ನಿಜ, ಕೆಲವರಿಗೆ ಸಿಗರೇಟು, ಗುಟ್ಕಾದಂತೆ ಮೈಕ್ ಮುಂದೆ ಪೋಸ್ ಕೊಡುವುದು ಒಂದು ಹವ್ಯಾಸವಾಗಿರುತ್ತದೆ. ಒಂದು ವಿಶಿಷ್ಟ "ಇಸಂ", ಸಿದ್ಧಾಂತಕ್ಕೆ ಬದ್ಧರಾಗದ ಇವರು ವಿಶಿಷ್ಟ ವಿಚಾರಧಾರೆಯನ್ನು ಬಿಂಬಿಸಿ ಜನ ಪರಿವರ್ತನೆ ಮಾಡುವುದಕ್ಕಿಂತ ರಂಜನೀಯವಾಗಿ ಮಾತನಾಡುವವರಾಗಿರುತ್ತಾರೆ ಅಷ್ಟೆ !

ಮಂಜುಳಾ, ಸರಸ್ವತಿಪುರ, ಹುಬ್ಬಳ್ಳಿ- ನಾವು ಹುಟ್ಟು ಲಿಂಗಾಯತರಾಗಿದ್ದರೂ ಏನೇನೂ ಜ್ಞಾನವಿರಲಿಲ್ಲ.ಬಸವಣ್ಣ ಎಂದರೆ ಎತ್ತು,ಇಷ್ಟಲಿಂಗ ಒಂದು ಜಾತಿಯ ಕುರುಹು ಎಂಬ ಅಜ್ಞಾನದಲ್ಲಿದ್ದೆವು. ಪೂಜ್ಯ ಲಿಂಗಾನಂದ ಅಪ್ಪಾಜಿಯವರ ಪ್ರವಚನ ಕೇಳಿ ನಿಬ್ಬೆರಗಾಗಿ ಈ ಬಸವ ಪಥಕ್ಕೆ ಬಂದೆವು. ಈ ತತ್ತ್ವದ ಸಾರ ಗೊತ್ತಾಗಲಿಕ್ಕೆ ಮೊದಲು ನನ್ನ ಸೋದರಿಯೋರ್ವಳು ಬ್ರಹ್ಮಕುಮಾರಿ ಮಾರ್ಗಕ್ಕೆ ಹೋಗಿದ್ದಳು. ಈಗ ಆಕೆಗೆ ಬಸವ ಪಥ ಪರಿಪೂರ್ಣ ಪಥ ಹೇಗೆ ? ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಮಾತ್ರವಲ್ಲದೆ ಅಧ್ಯಾತ್ಮಿಕವಾಗಿ ಈ ಮಾರ್ಗ ಎಷ್ಟು ಶ್ರೇಯಸ್ಕರವಾಗಿದೆ ಎಂಬುದನ್ನು ತಿಳಿಸಿಕೊಡುತ್ತಿದ್ದೇವೆ. ಅದಕ್ಕೆ ನನ್ನ ತಂಗಿ, ಅಲ್ಲಿಯೂ ಇದೇ ತತ್ತ್ವವಿದೆ. ಅವರ ಪತ್ರಿಕೆಯಲ್ಲಿ ಸಹ ವಚನಗಳನ್ನು ಉಲ್ಲೇಖಿಸುತ್ತಾರೆ ಎಂದು ವಾದಿಸುತ್ತಾಳೆ. ಇದಕ್ಕೆ ಏನು ಹೇಳುವಿರಿ ?

★ ಲಿಂಗಾಯತ ಧರ್ಮೀಯರು ಉಳ್ಳಾಗಡ್ಡಿ ತಲೆ ಜನ ಎಂದು ಅದಕ್ಕೇ ವಿಡಂಬನೆಗೆ ಒಳಗಾಗುತ್ತಿರುವುದು. ಇವರು ಸಾತ್ವಿಕರಾದರೂ ಅನ್ಯರ ಮೋಸಗಾರಿಕೆ ತಂತ್ರ ಅರಿಯಲಾರರು. ಕುತಂತ್ರಿ ವಾಮನ ಮೂರ್ತಿಗೆ ಶ್ರದ್ಧಾವಂತ ಭಕ್ತನೂ, ಉದಾರಿಯೂ, ದಾನಿಯೂ ಆದ ಬಲಿ ಚಕ್ರವರ್ತಿ ದಾನ ಕೊಟ್ಟು ತಲೆ ಮೇಲೆ ಕಾಲು ಇಡಿಸಿಕೊಂಡು ಪಾತಾಳಕ್ಕೆ ತುಳಿಯಲ್ಪಟ್ಟಂತೆ ಇವರ ನಡೆ. ಬ್ರಹ್ಮಕುಮಾರಿಗಳು ವಚನ ಸಾಹಿತ್ಯ ಬಳಸಿಕೊಂಡು ಸಂಭಾವಿತ ಲಿಂಗಾಯತರನ್ನು ಆಕರ್ಷಿಸಿ ನಂತರ ಬಸವ ಭಕ್ತಿ ಕಳೆದು, ಇಷ್ಟಲಿಂಗ-ಅಷ್ಟಾವರಣಗಳನ್ನು ಉಪಾಯದಿಂದ ಬಿಡಿಸುವರು. ವಚನ ವಾಙ್ಮಯವನ್ನು ಲಿಂಗಾಯತರನ್ನು ಆಕರ್ಷಿಸಲು ಉದಾಹರಿಸುವರೇ ವಿನಾ ಅದರ ಮೇಲಿನ ಭಕ್ತಿ-ಶ್ರದ್ಧೆಯಿಂದಲ್ಲ . ಅಂಥ ಶ್ರದ್ಧೆ ಇದ್ದಿದ್ದರೆ ಎಲ್ಲ ದೃಷ್ಟಿಯಿಂದಲೂ ಶ್ರೇಷ್ಠವಾಗಿರುವ ಬಸವ ಪಥಕ್ಕೆ ಬ್ರಹ್ಮಕುಮಾರ-ಬ್ರಹ್ಮಕುಮಾರಿಯರನ್ನು ಕರೆತಂದು ಬಸವ ಕುಮಾರ-ಬಸವ ಕುಮಾರಿಯರನ್ನಾಗಿ ಮಾಡುತ್ತಿದ್ದರಲ್ಲವೆ ?

ಪ್ರಶ್ನೆ 2 :- ಸಾತ್ವಿಕ ಸಂಸ್ಕಾರ ಶರಣ ಸಂಸ್ಕೃತಿಯಿಂದ ರೂಪುಗೊಂಡಿರುತ್ತದೆ. ಅನೇಕ

ಹೆಣ್ಣುಮಕ್ಕಳು (ಗಂಡು ಮಕ್ಕಳು ಸಹ) ಮನಃಶಾಂತಿ ಬಯಸಿ ಬ್ರಹ್ಮಕುಮಾರಿ ಪಂಥ ಸೇರುತ್ತಾರೆ. ಅದು ಎಷ್ಟು ಬೆಳೆದರೂ ಲಿಂಗಾಯತ ಮಠಾಧೀಶರು ಏನು ಚಿಂತಿಸುವುದಿಲ್ಲ. ಆದರೆ ರಾಷ್ಟ್ರೀಯ ಬಸವ ದಳದ ಪ್ರಾರ್ಥನೆಗೆ ಹೋಗುವವರಿಗೆ ಕಿರುಕುಳ ಕೊಡುತ್ತಾರೆ. ಬಸವ ತತ್ತ್ವವನ್ನು ಪ್ರಚಾರ ಮಾಡುವ ನಿಮಗೆ ತೊಂದರೆ ಕೊಡುತ್ತಾರೆ. ಹೀಗೇಕೆ?

★ "ಮನೆಗೆ ಮಾರಿ ಪರರಿಗೆ ಉಪಕಾರಿ" ಎಂಬ ಧೋರಣೆ ಅನೇಕ ಮಠಾಧೀಶರದು. ಬಹುಪಾಲು ಮಠಾಧೀಶರಿಗೆ ಸಮಷ್ಟಿ ಹಿತಕ್ಕಿಂತ ವೈಯಕ್ತಿಕ ಪ್ರತಿಷ್ಠೆಯೇ ದೊಡ್ಡದಾಗಿದೆ. ಆದರೆ ನನಗೊಂದು ಸಮಾಧಾನ ಏನೆಂದರೆ ಸ್ವಧರ್ಮೀಯರಿಗೆ ಕಿರುಕುಳಕೊಟ್ಟರೂ ಪರಮತ, ಅನ್ಯಪಂಥೀಯರೊಡನೆಯಾದರೂ ಸಹಕರಿಸಿ ಶರಣ ಸಂಸ್ಕೃತಿಯ ಗೌರವ ಕಾಯ್ದುಕೊಳ್ಳುತ್ತಾರೆ ಎಂದು.

ಆರ್.ಎಸ್.ಪಾಟೀಲ್, ಸಿಂಧನೂರು-584128.

ಪ್ರಶ್ನೆ 1 :- ಲಿಂಗದೇವ ವಚನಾಂಕಿತ ಹಾಕಿದ ವಚನಗಳ ಸಂಗ್ರಹ ಬಸವ ವಚನ ದೀಪ್ತಿಯನ್ನು ಸರ್ಕಾರವು ನಿಷೇಧಿಸಿತು. ಆದರೆ ನೀವು ಕಳ್ಳತನದಲ್ಲಿ ಮಾರಾಟ ಮಾಡುತ್ತಿರುವಿರಿ? ಇದು ಸರಿಯೆ?

★ ಕಳ್ಳತನದಲ್ಲಿ ಮಾರುತ್ತಲಿಲ್ಲ. ನಿಮ್ಮಂತಹವರು ಕೊಟ್ಟ ವಿಶೇಷ ಪ್ರಚಾರದಿಂದ ಬಸವ ವಚನ ದೀಪ್ತಿ ತೀವ್ರಗತಿಯಲ್ಲಿ ಮಾರಾಟವಾಯಿತು. ಈಗ ಅನೇಕ ಲೇಖನಗಳಲ್ಲಿ ಲಿಂಗದೇವ ವಚನಾಂಕಿತ ಬಳಸುತ್ತಿರುವುದೇ ಅಲ್ಲದೆ ಬಹಿರಂಗವಾಗಿ ಧೈರ್ಯವಾಗಿ ವಚನಗಳಲ್ಲಿ ಲಿಂಗದೇವ ಬಳಸಿ ಪ್ರಾರ್ಥನೆ ಮಾಡಲಾಗುತ್ತಿದೆ; ಜನರೂ ಅಷ್ಟೇ ಸಂತೋಷದಿಂದ ಸ್ವೀಕರಿಸುತ್ತಿದ್ದಾರೆ. ಲಿಂಗದೇವ ತತ್ತ್ವವನ್ನು ಪ್ರತಿಷ್ಠಾಪಿಸಲು,ಪ್ರಚಾರ ಮಾಡಲು ಸನ್ನದ್ಧರಾಗಿರುವಾಗ ಇನ್ನು ಕದ್ದುಮುಚ್ಚಿ ಬಳಸುವುದೇನು ಬಂತು!

ಪ್ರಶ್ನೆ 2 :- ಬಸವ ಕಲ್ಯಾಣದಲ್ಲಿ ನಡೆಯಬೇಕಾಗಿದ್ದ ಕಲ್ಯಾಣ ಪರ್ವವು ನಡೆಯಬಾರದೆಂದು ಸರಕಾರ ನಿಷೇಧಾಜ್ಞೆ ಹೇರಿದ್ದು ಅಭಿನಂದನಾರ್ಹ ಕ್ರಮವಾಗಿದೆ. ಹೀಗೆ ಅದ್ದೂರಿಯಾಗಿ ನಡೆಸಬೇಕಾಗಿದ್ದ ಕಾರ್ಯಕ್ರಮಗಳಿಗೆ ಅಡ್ಡಿಯಾಗಿರುವುದು ಮತ್ತು ಸರ್ಕಾರ ದಿಟ್ಟ ಕ್ರಮ ಕೈಗೊಂಡಿರುವುದು ನಿಮ್ಮ ನಂಬುಗೆಯ ಲಿಂಗದೇವನ ಲೀಲಾ ವಿಶೇಷವಿರಬೇಕಲ್ಲವೆ?

★ ಅಹುದು; ಲಿಂಗದೇವನು ಸರ್ವಶಕ್ತ ಮತ್ತು ಶ್ರೇಷ್ಠ ನ್ಯಾಯಾಧೀಶ . ಭೀಮಣ್ಣ ಖಂಡ್ರೆಯವರು ಸರ್ಕಾರವನ್ನು "ಮಾತಾಜಿಯವರನ್ನು ಬೀದರ ಜಿಲ್ಲೆಗೆ ಬರಗೊಡಬಾರದು; ಗಡಿಪಾರು ಮಾಡಬೇಕು; ಬಂಧಿಸಬೇಕು" ಎಂದು ಆಗ್ರಹಪಡಿಸಿ ನಿತ್ಯವೂ ಹೇಳಿಕೆ ಕೊಡುತ್ತಿದ್ದರು. ಈ ದೇಶದಲ್ಲಿ ಪ್ರಜಾಪ್ರಭುತ್ವವಿದೆ. ಇಲ್ಲೊಂದು ಸಂವಿಧಾನವಿದೆ, ಕಾನೂನು ಕಟ್ಟಳೆ ಇದೆ ಎಂಬುದನ್ನು ತಮ್ಮ ಸರ್ವಾಧಿಕಾರಿ ಧೋರಣೆಯಲ್ಲಿ ಮರೆತಿದ್ದರು. ಆದರೆ, "ತಿಮ್ಮ ಸಾಯಲಿ, ತಿಮ್ಮ ಸಾಯಲಿ ಎಂದು ಒಬ್ಬ ಬಡಬಡಿಸುತ್ತಿರುವಾಗ (ಬಹುಶಃ ನಾಲಿಗೆ ಜಾರಿರಬೇಕು) ಆತನ ತಮ್ಮನೇ ಸತನಂತೆ." ಹಾಗೆ ಭೀಮಣ್ಣನವರ ಸುಪುತ್ರರು ಸ್ವಯಂಕೃತಾಪರಾಧದಿಂದ ತಾವೇ ತಿಂಗಳುಗಟ್ಟಳೆ ಗಡಿಪಾರಾಗಿ, ಬಂಧನದ ನಿರೀಕ್ಷೆಯಲ್ಲಿ

ತಲೆ ಮರೆಸಿಕೊಳ್ಳುವಂತೆ ಆಯಿತು. ಇದು ಲಿಂಗದೇವನ ಲೀಲಾ ವಿಶೇಷವಲ್ಲವೆ? ಬಸವೇಶ್ವರ ದೇವಾಲಯ ಆಡಳಿತವರ್ಗಕ್ಕೆ ಸಂಬಂಧಿಸಿದವರ ಪ್ರಚೋದನೆಯಿಂದ ಕೆಲವರು ಗೂಂಡಾಗಳು ಮೋಟಾರ್ ಬೈಕ್ ಹತ್ತಿ ಅತ್ತಿಂದಿತ್ತ ತಿರುಗಾಡುತ್ತ ಬಹಳ ಜನ ಶರಣರಿಗೆ ಹೊಡೆದು ಬಡಿದು ಹಿಂಸಿಸಿದರು. ಕೆಲವೇ ದಿನಗಳಲ್ಲಿ ಅಂಥ ಒಬ್ಬ ಕ್ರೂರಿ ಅಪಘಾತಕ್ಕೊಳಗಾಗಿ ರಸ್ತೆಯಲ್ಲಿ ಛಿದ್ರವಾಗಿ ಬಿದ್ದಿದ್ದನಂತೆ. ಹಿಂದೊಮ್ಮೆ ಬಸವ ಜ್ಯೋತಿಯು ಮುಂಬೈ ಸಮ್ಮೇಳನದ ಹಿನ್ನೆಲೆಯಲ್ಲಿ ಹುಬ್ಬಳ್ಳಿಗೆ ಆಗಮಿಸಿದಾಗ ಮೂರುಸಾವಿರ ಮಠಾಧೀಶರು ವಿರೋಧ ವ್ಯಕ್ತಪಡಿಸಿದರು. ಅವರ ಬಲಗೈ ಭಂಟರಾದ ಉಮದಿ ಎಂಬುವವರು ಬಸವ ಜ್ಯೋತಿ ಹೊತ್ತ ಗಾಡಿಗೆ ಕಲ್ಲು ಬೀಸಿದರು. ಎಂಟು ಹತ್ತು ದಿವಸಗಳಲ್ಲಿ ಉಮದಿಯವರು ಅಪಘಾತಕ್ಕೊಳಗಾಗಿ ಸತ್ತಾಗ ಹೊಟ್ಟೆಯೊಳಗಿನ ಕರುಳುಗಳು (ಬಸವ ಜ್ಯೋತಿ ಗಾಡಿಯ ಗಾಜು ಪುಡಿಯಾದಂತೆ) ಛಿದ್ರವಾಗಿ ನೆಲದ ಮೇಲೆ ಹರಡಿದ್ದವಂತೆ. ನಂತರ ಮೂರು ಸಾವಿರ ಮಠದ ಪರಿಸ್ಥಿತಿ, ಕೀರ್ತಿ ಎಲ್ಲಿಗೆ ಹೋಯಿತು ನಿಮಗೂ ಗೊತ್ತು. ಇದು ಲಿಂಗದೇವನ ಲೀಲಾ ವಿಶೇಷವಲ್ಲವೆ ?

ಕಲ್ಯಾಣ ಪರ್ವಕ್ಕೆ ಮಠಾಧೀಶರ ಪ್ರಚೋದನೆಯಿಂದಲೇ, ಭೀಮಣ್ಣ ಖಂಡ್ರೆ, ಮಲಕರೆಡ್ಡಿಯವರ ಕೈವಾಡದಿಂದಲೇ ಡಿ.ಸಿ, ಎಸ್.ಪಿ 144 ಕಲಂ ಜಾರಿ ಮಾಡಿದರೆಂಬುದನ್ನು ಎಲ್ಲ ಜನರು ಅರಿತುಕೊಂಡರು. ಇಬ್ಬರು ರಾಜಕಾರಣಿಗಳ ವಿರುದ್ಧ ಪ್ರತಿಭಟನಾ ರ್‍ಯಾಲಿ ಎಷ್ಟು ಬೃಹತ್ತಾಗಿ ಆಯಿತೆಂದರೆ ಭೀಮಣ್ಣನವರ ಜೀವನದಲ್ಲೇ ಅಂಥ ಘಟನೆ ಸಂಭವಿಸಿರಲಿಲ್ಲ. ಅವರ ಅಭಿಮಾನಿಗಳು ಅನುಯಾಯಿಗಳು ಖಂಡ್ರೆಯವರ ವರ್ತನೆಯಿಂದ ಅಸಹ್ಯಪಟ್ಟುಕೊಂಡಿದ್ದರು. ಮಲಕರೆಡ್ಡಿ ಬೀದರ್ ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿದ್ದರು. ಕಲ್ಯಾಣ ಪರ್ವದ ನಂತರ ಬೀದರ್‌ಗೆ ಅವರು ಬರುವ 2-3 ಕಾರ್ಯಕ್ರಮ ಇದ್ದವು. ಕಲ್ಯಾಣದಲ್ಲಿ ಬಸವ ಜಯಂತಿ ಉದ್ಘಾಟನೆಗೆ ದೇವಾಲಯದವರು ಅವರನ್ನು ಆಹ್ವಾನಿಸಿದ್ದರು. ಆದರೆ ಬರುವ ಧೈರ್ಯ ಸಾಲದೆ ಮಲಕರೆಡ್ಡಿ ಎಲ್ಲ ಕಾರ್ಯಕ್ರಮ ತಪ್ಪಿಸಿಕೊಂಡರು. ಇದು ಲಿಂಗದೇವನ ಲೀಲಾ ವಿಶೇಷವಲ್ಲವೆ ? ಪುಣ್ಯಕ್ಕೆ ಬಸವರಾಜ್ ಪಾಟೀಲ್, ಹುಮ್ನಾಬಾದ್ ಇವರನ್ನು ಬೀದರ್ ಜಿಲ್ಲೆ ಉಸ್ತುವಾರಿ ಮಂತ್ರಿಯನ್ನಾಗಿ ಮಾಡಿ ಮಲಕರೆಡ್ಡಿ ಮುಂದೆ ಎದುರಿಸಲಿದ್ದ ಮುಜುಗರದಿಂದ ಎಸ್.ಎಂ.ಕೃಷ್ಣ, ರೆಡ್ಡಿಯವರನ್ನು ಪಾರು ಮಾಡಿದರು.

ಲಿಂಗದೇವನ ಇನ್ನೊಂದು ಲೀಲಾ ವಿಶೇಷವಿದೆ. ನನಗೆ ಹೇಳಲಿಕ್ಕೆ ಮರೆತೇ ಹೋಗಿತ್ತು. ಆರ್.ಎಸ್.ಪಾಟೀಲರ ವ್ಯಂಗ್ಯವಾದ ಮಾತಿನಿಂದ ನೆನಪಾಯಿತು. ದೇವಸ್ಥಾನದವರು ಅಪರೂಪಕ್ಕೆ ತುಂಬಾ ಸುಂದರವಾದ ಆಹ್ವಾನಪತ್ರ ಮುದ್ರಿಸಿ ಬಸವ ಜಯಂತಿಗೆ ಬೃಹತ್ ಪೆಂಡಾಲ್ ಹಾಕಿಕೊಂಡಿದ್ದರು. ನಾವು ಲಕ್ಷಾಂತರ ರೂಪಾಯಿ ತೆತ್ತು ಅತಿ ಸುಂದರವಾದ ಪೆಂಡಾಲ್ ಹಾಕಿದ್ದೆವು. ಅಲ್ಲಿ ಕಾರ್ಯಕ್ರಮ ನಡೆದರೆ ವಿರೋಧಿಗಳ ಮೀಸೆಗೆ ಮಣ್ಣು ಹತ್ತುತ್ತದೆ ಎಂದು ಪೋಲೀಸ್ ಇಲಾಖೆಯವರು ಧಣಿಗಳ ಋಣ ತೀರಿಸಲು ಆ ಪೆಂಡಾಲಿನಲ್ಲಿ ನಾವು ಕಾರ್ಯಕ್ರಮ ನಡೆಸಲು ಬಿಡದೆ ತಾವೇ ಪೆಂಡಾಲಿನಲ್ಲಿ ರಣ ಹದ್ದುಗಳಂತೆ ಕುಳಿತಿದ್ದರು.

ದಿ. 14-5-2002 ಬಸವ ಜಯಂತಿ, 13-5-2002 ರಂದು ಸಂಜೆ ಎಂಥಾ -ಗಾಳಿಮಳೆ ಎಂದರೆ ದೇವಸ್ಥಾನದವರು ಹಾಕಿಸಿದ ಪೆಂಡಾಲ್ ಛಿದ್ರಗೊಂಡಿತ್ತು. ಬೆಳಿಗ್ಗೆ 9ಕ್ಕೆ ಶುರುವಾಗಬೇಕಾದ ಕಾರ್ಯಕ್ರಮ ಪೆಂಡಾಲ್ ಇಲ್ಲದೆ ಹನ್ನೊಂದುವರೆಗೆ , ಹದಿನೈದು ಜನ ಸೇರಿ ಒಂದು ಹಾಲ್‌ನಲ್ಲಿ ಉದ್ಘಾಟನೆಗೊಂಡಿತು. ಸರಿ, ಸಂಜೆಗೆ ಶಾಮಿಯಾನಾ ತಂದು ಹಾಕಿ ಕಾರ್ಯಕ್ರಮ ಶುರು. ಏನು ಹೇಳೋಣ ಲಿಂಗದೇವನ ಮಹಿಮೆ. ನೂರಾರು ಸಾವಿರಾರು ದೀಪದ ಹುಳುಗಳು ಸೈನಿಕರಂತೆ ದಂಡೆತ್ತಿ ಬಂದು ವೇದಿಕೆಯ ಮೇಲಿದ್ದವರ ಅಂಗಿ-ಪಂಚೆ-ಪ್ಯಾಂಟ್ ಹೊಕ್ಕವಂತೆ. ಒಬ್ಬೊಬ್ಬರದು ಒಂದು ಭಂಗಿಯ ನೃತ್ಯ. ಆಗ ಜನರು ಮಾತಾಡುತ್ತಿದ್ದರಂತೆ, ''ಪೋಲೀಸರನ್ನು ಬಿಟ್ಟು ಕಲ್ಯಾಣ ಪರ್ವವನ್ನು ಕೆಡಿಸಿದರು. ಇಲ್ಲಿ ನೋಡ್ರಿ ಪೋಲೀಸರ ಪ್ರತೀಕವೆಂಬಂತೆ ಸಹ್ರಸಾರು ಹುಳು ಕಡಿಯುತ್ತಿವೆ. ಯಾರನ್ನು ಕೂಡ್ರಗೊಡುತ್ತಿಲ್ಲ.'' ಆಗ ಸಭಿಕರಲ್ಲೊಬ್ಬರು ಹಾಸ್ಯ ಚಟಾಕಿ ಹಾರಿಸಿದರಂತೆ, ''ಬಹುಶಃ ಮಾತಾಜಿಯವರು ಈ ಲೈಟ್ ಹುಳುಗಳನ್ನು ಕಳಿಸಿರಬಹುದು.''

ಭಾಷಣಕಾರರೊಬ್ಬರು ಹೇಳಿದರಂತೆ, ''ಈ ಆಹ್ವಾನ ಪತ್ರ ನೋಡಿದರೆ ಸಾಕು ಸಾವಿರಾರು ಜನ ಬರಬೇಕು. ಆದರೆ ಸಭಿಕರಿಗಿಂತಲೂ ವೇದಿಕೆಯ ಮೇಲೆ ಹೆಚ್ಚು ಜನ, ಯಾರಿಗೆ ನಾವು ಭಾಷಣ ಮಾಡಬೇಕು.?''

ಗಾಳಿ ಜೋರಾಗಿ ಬಿಟ್ಟುದರಿಂದ ಶಾಮಿಯಾನಾ ಎದ್ದೆದ್ದು ಕುಣಿಯ ತೊಡಗಿತಂತೆ. ಅತಿಥಿಗಳಾದಿಯಾಗಿ ಎಲ್ಲರೂ ಆ ಕೋಲುಗಳನ್ನು ಭದ್ರವಾಗಿ ಹಿಡಿದುಕೊಂಡು ಕುಳಿತುಕೊಳ್ಳಬೇಕಾಯಿತಂತೆ. ಈ ಎಲ್ಲ ಕುತಂತ್ರ, ಕ್ರೂರ ಕಾರಸ್ಥಾನಗಳ ಹಿಂದೆ ಓರ್ವ ಪ್ರಮುಖ ಸೂತ್ರಧಾರಿ ಇದ್ದಾರೆ. ಅವರ ತಲೆಯ ಮೇಲೆ ಶಾಮಿಯಾನಾದ ಕೋಲು ಧಪ್ಪಂಥ ಬಿತ್ತಂತೆ. ಅಂದರೆ ಲಿಂಗದೇವನು ಎಷ್ಟು ಸಂಕೇತಗಳನ್ನು ನೀಡಿ ಇವರ ತಪ್ಪುಗಳನ್ನು ತೋರಿಸಿದರೂ ಪಶ್ಚಾತ್ತಾಪ ಪಡದೆ ಮತ್ತೂ ಕೆಟ್ಟದಾರಿಯಲ್ಲೇ ಹೋಗಬೇಕೆನ್ನುತ್ತಾರೆ.

ಆರ್.ಎಸ್.ಪಾಟೀಲರು ತಿಳಿದಂತೆ 144 ಕಲಂ ಸರಕಾರದ ದಿಟ್ಟಹೆಜ್ಜೆಯೋ ಜನ ತಿಳಿದಂತೆ ಕೆಟ್ಟ ಹೆಜ್ಜೆಯೋ ನಾವರಿಯೆವು. ಮಾತ್ರ ಇಂಥ ಕೆಟ್ಟಕೆಲಸದ ಹಿಂದೆ ಚಿತ್ರದುರ್ಗದ ಬೃಹನ್ಮಠದವರ ಪಾತ್ರವೇ ಹಿರಿದು ಎಂದು ಬೀದರ್ ಜಿಲ್ಲೆಯ ಪ್ರತಿಯೊಬ್ಬರಿಗೂ ಮಾತ್ರವಲ್ಲ, ಕರ್ನಾಟಕದ ಇತರ ಜಿಲ್ಲೆ, ತಮಿಳುನಾಡು, ಆಂಧ್ರ, ಮಹಾರಾಷ್ಟ್ರಗಳಿಂದ ಬಂದು ಪೋಲೀಸ್ ದೌರ್ಜನ್ಯದಿಂದ ನೊಂದು ವಾಪಸ್ಸು ಹೋದ ಪ್ರತಿಯೊಬ್ಬರಿಗೂ ತಿಳಿಯಿತು. ಇದು ಸಹ ಲಿಂಗದೇವನ ಲೀಲಾ ವಿಶೇಷವಲ್ಲವೆ ?

ಪ್ರಶ್ನೆ 3 :- ಆಗಸ್ಟ್ ಕಲ್ಯಾಣ ಕಿರಣದಲ್ಲಿ ನಿಜಲಿಂಗಪ್ಪ ಬುಣಸಗಿ ಅವರ ಪ್ರಶ್ನೆಗೆ ಕೊಟ್ಟ ಉತ್ತರ ಕೀಳುಮನೋಭಾವನೆಯಿಂದ ಕೂಡಿದ್ದಾಗಿದೆ. ಇಂಥ ವಿಚಾರಗಳಿಂದ ಗುರುಗಳಾದವರು, ಶರಣರಾದವರು, ಸ್ವಾಮಿಗಳಾದವರು, ಕಾವಿಧರಿಸಿದವರು ದೂರ ಇರತಕ್ಕದ್ದು ಎಂದು ಎಲ್ಲರ ಅನಿಸಿಕೆ !

★ ಪಾಟೀಲರ ವಿಚಾರ ಸರಣಿ ಬಹಳ ವಿಲಕ್ಷಣವಾಗಿದೆ. ಇದು ಹೇಗಿದೆ ಎಂದರೆ ಯಾರೋ ಒಬ್ಬರು ಮತ್ತೊಬ್ಬರ ಮೇಲೆ ಗೂಂಡಾಗಿರಿ, ಅತ್ಯಾಚಾರ ಇತ್ಯಾದಿ ಮಾಡಿದಾಗ

ಅವರು ಸಂಕಟದಿಂದ ಪೋಲೀಸರಿಗೆ ದೂರು ಕೊಡಲು ಹೋದಾಗ ಪೋಲೀಸರು, "ಅವರ ಬಗ್ಗೆ ಇಂಥ ಕೀಳುಮಟ್ಟದ ಆರೋಪ ಮಾಡಿದರೆ ಹೇಗೆ ?" ಎಂದು ಆಕ್ಷೇಪಿಸಿದರೆ ಹೇಗೋ ಹಾಗಿದೆ. ಅನುಭವಿಸಿದ ಸಂಕಟ, ದೌರ್ಜನ್ಯಗಳನ್ನು ಜನರ ಮುಂದೆ ಇಡದೆ ಇದ್ದರೆ ಏನು ನಡೆಯಿತೆಂಬುದು ಜನರಿಗೆ ತಿಳಿಯುವುದಾದರೂ ಹೇಗೆ ?

ಕೆ.ಪಂಪಣ್ಣ, ಗದ್ವಾಲ್ ಕ್ಯಾಂಪ್, ಗಂಗಾವತಿ .-

ಪ್ರಶ್ನೆ 1 :- ಧರ್ಮಗುರು ಬಸವಣ್ಣನವರ ವಚನ ಓದಿದಾಗ ಏಕಲಿಂಗ ನಿಷ್ಠೆ ತಾನಾಗಿಯೇ ಅಳವಡುತ್ತದೆ. ಕೂಡಲ ಸಂಗಮದೇವ ಇದ್ದರೂ ಅಷ್ಟೆ, ಲಿಂಗದೇವ ಆದರೂ ಅಷ್ಟೆ ಎಂದು ನನ್ನ ಅಭಿಪ್ರಾಯ.

★ ವಚನ ವಾಙ್ಮಯದಲ್ಲಿ ಬರುವ ಸೃಷ್ಟಿಕರ್ತನ ಪರಿಕಲ್ಪನೆಯನ್ನು ತಾತ್ತ್ವಿಕವಾಗಿ ಅರ್ಥಮಾಡಿಕೊಂಡಾಗ ಮಾತ್ರ ಧರ್ಮಪಿತ ಬಸವಣ್ಣನವರ ಕೂಡಲಸಂಗಮದೇವ, ಅಕ್ಕಮಹಾದೇವಿಯ ಚನ್ನಮಲ್ಲಿಕಾರ್ಜುನ, ಪ್ರಭುದೇವರ ಗುಹೇಶ್ವರ - ಈ ಎಲ್ಲ ಅಂಕಿತನಾಮಗಳು ನಿರ್ದೇಶಿಸುವುದು ಒಂದೇ ನಿರಾಕಾರ ಪರವಸ್ತುವನ್ನು ಎಂಬುದು ಅರ್ಥವಾಗುತ್ತದೆ. ಇದು ಸುತ್ತು ಬಳಸಿನ ಹಾದಿ. ಆದರೆ ಭೂಮಿಯ ಮೇಲೆ ಎರಡು ನದಿಗಳ ಕೂಟಸ್ಥಾನದಲ್ಲಿ ಕೂಡಲ ಸಂಗಮೇಶ್ವರ ಎಂಬ ಸ್ಥಾವರಲಿಂಗ, ಶ್ರೀಶೈಲದಲ್ಲಿ ಮಲ್ಲಿಕಾರ್ಜುನ ಲಿಂಗ ಇರುವ ಕಾರಣ ಅವು ನಿರ್ದೇಶಿಸುವುದು ಶಿವನನ್ನಾದ ಕಾರಣ ನೇರವಾಗಿ ಬಸವಣ್ಣನವರ ಧ್ಯೇಯ ವಸ್ತುವನ್ನು ಸಂಕೇತಿಸುವುದಿಲ್ಲ. ಲಿಂಗದೇವ ಪದವು ಯಾವುದೇ ವಿವರಣೆಯ ಅಗತ್ಯವಿಲ್ಲದೆ ನಿರಾಕಾರ ದೇವನನ್ನು ಸಂಕೇತಿಸುತ್ತದೆ.

ಪ್ರಶ್ನೆ 2 :- ಅಕ್ಕಮಹಾದೇವಿ ವಚನದಲ್ಲಿ ಚನ್ನಮಲ್ಲಿಕಾರ್ಜುನ ಎಂದೇ ಬಳಸಿದ್ದೀರಿ. ಇದರಿಂದ ಬೇರೆ ಹೆಸರು ಹೇಳಿದಂತಾಯಿತಲ್ಲವೆ ? ಆದ್ದರಿಂದ ಅಂಕಿತನಾಮ ಏನೇ ಇರಲಿ ಧ್ಯೇಯ ಒಂದೆ !

★ ಒಂದು ಮನೆಯಲ್ಲಿ ಒಂದೇ ಹೆಸರಿನವರು ಇಬ್ಬರು ಇರುತ್ತಾರೆ ಎಂದು ಕೊಳ್ಳೋಣ. ಲಿಂಗಪ್ಪ ಎಂದು ಆ ಹೆಸರು. ಆಗ ನೀವು ಅವರನ್ನು ಗುರುತಿಸಲು ದೊಡ್ಡ ಲಿಂಗಪ್ಪ, ಸಣ್ಣಲಿಂಗಪ್ಪ ಎಂದೋ, ದೊಡ್ಡ ಮಲ್ಲಪ್ಪ-ಗಿಡ್ಡ ಮಲ್ಲಪ್ಪ ಎಂದೋ ಕರೆಯುತ್ತೀರಿ. ಹಾಗೆ ಸಾಕ್ಷಾತ್ಕಾರಕ್ಕೂ ಪೂರ್ವದಲ್ಲಿ ಬಸವಣ್ಣನವರು ಪೂಜಿಸಿದ್ದು ಶಿವನ ಪ್ರತಿ ರೂಪವಾದ ಕೂಡಲ ಸಂಗಮೇಶ್ವರನನ್ನು. ಇದನ್ನು ಕೂಡಲ ಸಂಗಮ-1 ಎನ್ನೋಣ. 21 ವರ್ಷಗಳ ಬಳಿಕ ಸಾಕ್ಷಾತ್ಕಾರದ ನಂತರ ಪೂಜಿಸಿದ್ದು ನಿರಾಕಾರ ದೇವರನ್ನು - ಇಷ್ಟಲಿಂಗ ರೂಪದಲ್ಲಿ; ಹಾಗಾದರೆ ಇದನ್ನು ಕೂಡಲ ಸಂಗಮದೇವ-2 ಎನ್ನಬೇಕಾಗುತ್ತದೆ. ಹೀಗೆ ಮಾಡುವ ಬದಲು ಸಾಕ್ಷಾತ್ಕಾರ ಪೂರ್ವದ ವಚನಗಳಲ್ಲಿ ಶಿವ ಸೂಚಕವಾದ ಕೂಡಲ ಸಂಗಮದೇವ ಇಟ್ಟು ನಂತರದ ವಚನಗಳಲ್ಲಿ ಲಿಂಗದೇವ ಇಟ್ಟರೆ ಹೆಚ್ಚು ತಾತ್ತ್ವಿಕ ಮತ್ತು ಅರ್ಥಗರ್ಭಿತವೆನಿಸದೆ!? ಅದೇ ರೀತಿ ಚನ್ನಮಲ್ಲಿಕಾರ್ಜುನ ನಂ. 1 , ನಂ. 2 ಎನ್ನುವ ಬದಲು ಚನ್ನಮಲ್ಲಿಕಾರ್ಜುನ, ಮಹಾದೇವಿಯಕ್ಕ ಪ್ರಿಯ ಲಿಂಗದೇವಾ ಎನ್ನುವುದು ಅಕ್ಕನ ದಾರ್ಶನಿಕ ಹಂತಗಳನ್ನು ಚೆಂದಾಗಿ ಚಿತ್ರಿಸುತ್ತವಲ್ಲವೆ ?

ರುದ್ರಾಣಮ್ಮ, ಹೆಚ್.ಎಂ.ಟಿ.ಕಾಲನಿ, ಬೆಂಗಳೂರು.- 'ವರಮಹಾಲಕ್ಷ್ಮಿ ಮುಂತಾದ ಪೂಜೆ ನಮಗೆ ಸರಿಯಲ್ಲ. ನಮ್ಮ ಧರ್ಮಕ್ಕೆ ವಿರುದ್ಧವಾಗಿ ಮಾಡಬೇಡಿರಿ. ನಿಮಗೆ 'ಎಂದಿನಿಂದಲೂ ಮಾಡಿಕೊಂಡು ಬಂದಿದ್ದೇವೆ ; ಈಗ ಏನು ಮಾಡುವುದು' ಎಂಬ ಭ್ರಾಂತಿ ಇದ್ದರೆ ಬಸವೇಶ್ವರ ಪೂಜಾವ್ರತ, ವಚನ ಪಠಣ ಮಾಡಿರಿ ಎಂದರೆ 'ವರಮಹಾಲಕ್ಷ್ಮಿಗಾದರೆ ಆಭರಣ ಹಾಕಿ ಸಿಂಗರಿಸಬಹುದು. ಲಕ್ಷ್ಮಿಗೆ ಎಂದು ಯಜಮಾನರು ಸೀರೆ ತಂದುಕೊಡುತ್ತಾರೆ. ಬಸವಣ್ಣನ ಪೂಜೆ ಎಂದರೆ ಇವೆಲ್ಲ ಸಿಗುವುದಿಲ್ಲ .' ಎನ್ನುತ್ತಾರೆ. ಇವರಿಗೆ ಏನುಹೇಳಬೇಕು?

★ ನೀವು ಏನೂ ಹೇಳಬೇಡಿ. ಕಳ್ಳರು, ದರೋಡೆಗಾರರು, ಡಕಾಯಿತರೇ ಅವರಿಗೆ ಉತ್ತರ ಹೇಳುತ್ತಾರೆ. ಸಾಮಾನ್ಯವಾಗಿ ವರಮಹಾಲಕ್ಷ್ಮಿ ಹಬ್ಬದ ದಿನ ಬೀರಿನೊಳಗಿರುವ ಒಡವೆಗಳೆಲ್ಲ ತೆಂಗಿನ ಕಾಯಿಯ ಲಕ್ಷ್ಮಿಯ ಮೈಮೇಲೆ, ಗೃಹಲಕ್ಷ್ಮಿಯ ಮೈಮೇಲೆ ಬರುತ್ತವೆ ಎಂಬುದು ಈಗ ಕಳ್ಳರಿಗೆ ಚೆನ್ನಾಗಿ ಗೊತ್ತಾಗಿದೆ. ಹೀಗಾಗಿ ವರಮಹಾಲಕ್ಷ್ಮಿ ಹಬ್ಬದ ದಿನ ಕಳ್ಳರಿಗೆ, ಡಕಾಯಿತರಿಗೆ ಸುಗ್ಗಿ. ಸಾಮಾನ್ಯವಾಗಿ ಅಂದು ಕಳ್ಳರ ಮನೆಗೆ ಲಕ್ಷ್ಮಿಯ ಆಗಮನಕ್ಕೆ ಒಳ್ಳೆಯ ಅವಕಾಶ. ಇನ್ನು ಗುರುಗಳು ಭಕ್ತರಿಗೆ ಸರಳತೆಯ ಪಾಠ ಕಲಿಸುವ ಕಾಲ ಮುಗಿದಿದೆ. ಕಳ್ಳರು, ಡಕಾಯತರೇ ಆಡಂಬರ ಪ್ರಿಯ ಮಹಿಳೆಯರಿಗೆ ಪಾಠ ಕಲಿಸಲಿದ್ದಾರೆ.

'ಕುರಿ ಬೇಡ, ಮರಿ ಬೇಡ ಬರಿಯ ಪತ್ರೆಯ ತಂದು ಲಿಂಗದೇವನ ಪೂಜಿಸು' ಎಂದು ಧರ್ಮಪಿತರು ಹೇಳುವಂತೆ, 'ಸೀರೆ ಬೇಡ ಬಂಗಾರದ ಆಭರಣ ಬೇಡ. ಭಕ್ತಿಯಿಂದ ಪೂಜಿಸು ಬಸವಣ್ಣನ ' ಎಂದು ಹೇಳುವ ಕಾಲವು ತಾನಾಗಿ ಬರುತ್ತದೆ.

ವರಮಹಾಲಕ್ಷ್ಮಿ ದೇವಿಗೆ ಹಾಕಿದ್ದ 1.25 ಲಕ್ಷ ಮೌಲ್ಯದ ಚಿನ್ನಾಭರಣ ಕಳವು

ಬೆಂಗಳೂರು, ಆ. 17- ಹನುಮಂತನಗರದ 3ನೇ ಮುಖ್ಯರಸ್ತೆಯ ವ್ಯಾಪಾರಿಯೊಬ್ಬರ ಮನೆಗೆ ಶುಕ್ರವಾರ ರಾತ್ರಿನುಗ್ಗಿರುವ ಕಳ್ಳರು, ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ದೇವರಿಗೆ ಹಾಕಿದ್ದ ಸುಮಾರು 1.25 ಲಕ್ಷ ರೂಪಾಯಿ ಬೆಲೆಯ ಚಿನ್ನಾಭರಣಗಳನ್ನು ದೋಚಿಕೊಂಡು ಪರಾರಿಯಾಗಿದ್ದಾರೆ.

ಗಿರಿನಗರದ ಶ್ರೀ ವೆಂಕಟೇಶ್ವರ ಟ್ರೇಡರ್ಸ್ ಎಂಬ ಪೇಂಟಿಂಗ್ ಮತ್ತು ಹಾರ್ಡ್‌ವೇರ್ ಅಂಗಡಿ ಮಾಲೀಕರಾದ ಎ.ಕೃಷ್ಣನ್ ಎಂಬುವರ ಮನೆಯಲ್ಲಿ ಈ ಘಟನೆ ಜರುಗಿದೆ.

ಕಾರು ಶೆಡ್ ಮೂಲಕ ಒಳನುಗ್ಗಿರುವ ಕಳ್ಳರು ಹಿಂಬದಿಯಿಂದ ಮೊದಲನೇ ಅಂತಸ್ತಿಗೆ ನುಗ್ಗಿ ಎಲ್ಲರೂ ಮನೆಯಲ್ಲಿ ಮಲಗಿದ್ದಾಗಲೇ ನಿರ್ಭಯವಾಗಿ ದೇವರ ಮನೆಯಲ್ಲಿ ಇದ್ದ ಆಭರಣಗಳನ್ನು ಕಳವು ಮಾಡಿದ್ದಾರೆ ಎಂದು ಪೋಲೀಸರು ತಿಳಿಸಿದ್ದಾರೆ.

ಕಳ್ಳತನ ಮಾಡಿರುವುದು ನೋಡಿದರೆ, ಗೊತ್ತಿರುವ ವ್ಯಕ್ತಿಗಳೇ ಈ ಕೃತ್ಯ ಎಸಗಿರುವ ಸಾಧ್ಯತೆ ಇದೆ. ಸ್ಥಳಕ್ಕೆ ಭೇಟಿ ನೀಡಿದ್ದ ಶ್ವಾನದಳ ತಪಾಸಣೆ ನಡೆಸಿತು. ಶ್ವಾನಗಳು ಮನೆ ಸಮೀಪದ ಕುಮಾರಸ್ವಾಮಿ ದೇವಸ್ಥಾನದವರೆಗೆ ಹೋಗಿ, ಅಲ್ಲಿಂದ ಎಲ್ಲಿಗೂ ಹೋಗಲಿಲ್ಲ ಎಂದು ಪೋಲೀಸರು ಹೇಳಿದ್ದಾರೆ. ಹನುಮಂತನಗರ ಪೋಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪ್ರಜಾವಾಣಿ ದಿ. 18-8-2002

ಮಾಧವ ಕುಲಾಲ, ಬಸವ ಮಂಟಪ, ಮಂಗಳೂರು.- ದಕ್ಷಿಣ ಕನ್ನಡ ವಿಚಾರವಾದಿಗಳ ಸಂಘದ ಕಾರ್ಯದರ್ಶಿ ನರೇಂದ್ರನಾಯಕ್ ಅವರು ಪತ್ರಕರ್ತರ ಮುಂದೆ ಬರಿಗೈಯಲ್ಲಿ ಮಾಡುವ ಶಸ್ತ್ರಚಿಕಿತ್ಸೆ ಕುರಿತು ಪ್ರದರ್ಶನ ನೀಡಿದರು. ಮಾತ್ರವಲ್ಲ ಸ್ವತಃ ವೈದ್ಯರಾಗಿರುವ ಡಾ|| ಮಾಲಕರೆಡ್ಡಿ ನಕಲಿ ವೈದ್ಯ ಆರ್ಬಿಟೊನನ್ನು ಪ್ರೋತ್ಸಾಹಿಸಿದ್ದಕ್ಕೆ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸಿದ್ದಾರೆ. ಮಾಲಕರೆಡ್ಡಿಯವರ ಹೆಸರನ್ನು ಮೆಡಿಕಲ್ ರಿಜಿಸ್ಟ್ರಿಯಿಂದ ತೆಗೆದು ಹಾಕಬೇಕೆಂದು ಆಗ್ರಹಿಸಿದ್ದಾರೆ. ನಿಮ್ಮ ಅಭಿಪ್ರಾಯವೇನು?

★ ವೈದ್ಯಕೀಯ ಶಿಕ್ಷಣ ಮಂತ್ರಿ ಡಾ|| ಮಲಕರೆಡ್ಡಿ ಭಾವನಾಹೀನ ಮನುಷ್ಯ ಎಂಬುದು ನಮಗೆ ಕಲ್ಯಾಣಪರ್ವದಲ್ಲೇ ಮನದಟ್ಟಾಯಿತು. ತನ್ನ ಧರ್ಮದ ಕ್ಷೇತ್ರ ಬಸವ ಕಲ್ಯಾಣಕ್ಕೆ ತನ್ನ ಧರ್ಮಾನುಯಾಯಿಗಳು ಬರಲಾರದಂತೆ ಮಾಡಲು ಪೋಲೀಸ್ ಬಲವನ್ನು ದುರ್ಬಳಕೆ ಮಾಡಿಕೊಂಡು ಸಾತ್ವಿಕ ಶರಣರಿಗೆ ಹಿಂಸೆ ಕೊಡಲು ಪ್ರೇರಕ ಶಕ್ತಿಯಾದರು. ಈತ ಭಾವನಾರಹಿತರು ಎನ್ನುವ ಜೊತೆಗೆ ವಿಚಾರಶಕ್ತಿ ಸಹ ಇಲ್ಲದ ಬುದ್ಧಿಹೀನ ಮನುಷ್ಯರು ಎಂಬುದು ಆರ್ಬಿಟೋ ಪ್ರಸಂಗದಲ್ಲಿ ಜಗಜ್ಜಾಹೀರಾಗಿದೆ. ಆದ್ದರಿಂದ ನರೇಂದ್ರ ನಾಯಕ್ ಅವರ ಬೇಡಿಕೆ, ಆಗ್ರಹ ಸರಿ ಇದೆ. ಆದರಿಷ್ಟೆ ನಕಲಿ ವೈದ್ಯನ ಹಿಂದೆ ಸುತ್ತಾಡಿದವರು, ಪ್ರಾಣ ಬಲಿಯನ್ನು ಕೊಡುವ ಸಚಿವರು, ಇಂತಹ ಮಹನೀಯರಿಂದ ತುಂಬಿದ ಸಚಿವ ಸಂಪುಟ ಹೊಂದಿದ ಮುಖ್ಯಮಂತ್ರಿಗಳು ಅದೆಷ್ಟು ವಿಚಾರಶೀಲರು ಎಂಬುದು ಚಿಂತನಾರ್ಹ. ಅಂದಾಗ ಅಂಥ ನಾಯಕರು ಇಂಥವರ ರಾಜೀನಾಮೆ ಕೇಳುವರೆ ?

ಹೆಸರು ಬೇಡ, ಪುಣೆ, ಮಹಾರಾಷ್ಟ್ರ- ಧರ್ಮ ಮುಖ್ಯವೋ, ಮಾನವೀಯತೆ ಮುಖ್ಯವೋ ? ಲಿಂಗಾಯತ ಕನ್ಯೆಯನ್ನು ಲಿಂಗಾಯತೇತರ ವರ ಪ್ರೀತಿಸಿದಾಗ ಆತ ದೀಕ್ಷೆ ಪಡೆಯಲು ಒಪ್ಪದಿದ್ದರೆ ಏನು ಮಾಡಬೇಕು ?

★ ಇದು ಬಹಳ ಸೂಕ್ಷ್ಮವಾದ ವಿಷಯ. ತಾಲೀಬಾನ್, ಪಾಕಿಸ್ಥಾನ್ ಉಗ್ರಗಾಮಿಗಳಿಗೆ ಮಾನವೀಯತೆಗಿಂತಲೂ ಧರ್ಮ ಮುಖ್ಯ. ನಾಸ್ತಿಕರಿಗೆ ಧರ್ಮಕ್ಕಿಂತಲೂ ಮಾನವೀಯತೆ ಮುಖ್ಯ. ಆದರೆ ಬಸವ ಧರ್ಮೀಯರಿಗೆ ಮಾನವೀಯತೆಯಿಂದ ಕೂಡಿದ ಧರ್ಮ ಮುಖ್ಯ. 'ದಯವೇ ಧರ್ಮದ ಮೂಲ' ಎನ್ನುತ್ತದೆ ಬಸವ ವಾಣಿ.

ಬೆಂಗಳೂರಿನಲ್ಲಿ ಓರ್ವ ಕ್ರೈಸ್ತನನ್ನು ಪ್ರೇಮಿಸಿ ಮುಸ್ಲಿಂ ಹುಡುಗಿ ಮದುವೆಯಾದಳು. ಅವನು ಮುಸ್ಲೀಮನಾಗಲು ಒಪ್ಪಲಿಲ್ಲ. ಅದಕ್ಕೇ ಆ ಹುಡುಗಿಯ ತಂದೆ, ಅಣ್ಣಂದಿರು ಕ್ರೂರವಾಗಿ ಆ ದಂಪತಿಗಳ ಹತ್ಯೆ ಮಾಡಿದರು.

ಇದು ಅವರ ದೃಷ್ಟಿಯಲ್ಲಿ ಧರ್ಮಸಮ್ಮತ. ಆದರೆ ಬಸವಣ್ಣನವರ ದೃಷ್ಟಿಯಲ್ಲಿ ದಯವಿಲ್ಲದ್ದು ಧರ್ಮವೇ ಅಲ್ಲ ! ಸಾಮಾನ್ಯವಾಗಿ ಲಿಂಗಾಯತ ವರನು ಅನ್ಯರನ್ನು ಪ್ರೀತಿಸಿದಾಗ ಹೆಣ್ಣುಮಕ್ಕಳು ಇಷ್ಟಲಿಂಗ ದೀಕ್ಷೆ ಪಡೆದುಕೊಂಡು ಮದುವೆಯಾಗುವರು. ಬಸವ ಧರ್ಮದ ಮಹತ್ವ ತಿಳಿದ ಲಿಂಗಾಯತೇತರ ವರನು ಸಹ ಲಿಂಗಾಯತ ಕನ್ಯೆಯನ್ನು ಮದುವೆಯಾದರೆ ಸಂತೋಷದಿಂದ ಈ ಧರ್ಮವನ್ನು ಸ್ವೀಕರಿಸುವನು. ಬಸವಣ್ಣನವರ ವಿಶಾಲ ಹೃದಯ ಅವರನ್ನು ಆಕರ್ಷಿಸುತ್ತದೆ. ಆದರೆ ಬಸವ ತತ್ವದ ಗಂಧವನ್ನೇ ತಿಳಿಯದ ವ್ಯಕ್ತಿಯು ತನ್ನ ಹೆಂಡತಿಗಾಗಿ ದೀಕ್ಷೆ ಪಡೆಯುವುದಿಲ್ಲ. ಅಲ್ಲದೆ ಆಕೆಗೆ ತನ್ನ ಧರ್ಮದ ಬಗ್ಗೆ

ತಿಳುವಳಿಕೆ ಇದ್ದರೆ ಪರಿಣಾಮಕಾರಿಯಾಗಿ ಆತನಿಗೆ ತಿಳಿಸಬಲ್ಲಳು. ಧರ್ಮಕ್ಕಿಂತಲೂ ಕಾಮ, ಪ್ರೇಮವೇ ಮುಖ್ಯವಾದಾಗ ಏನು ಮಾಡಲಾಗದು ! ಅವರಿಗೆ ಸ್ವಾತಂತ್ರ್ಯ ಕೊಡಬೇಕು. ಇಲ್ಲಿ ಮಾನವೀಯತೆ ಕೆಲಸ ಮಾಡಬೇಕು.

ಕೆ.ಕೆ. ಬಸ್ತವಾಡಿ., ಸಂಕೇಶ್ವರ.

ಪ್ರಶ್ನೆ 1.- ಗುಡಿಯೊಳಗಿನ ಲಿಂಗ ಶ್ರೇಷ್ಠವೋ, ಶಿವನು ಶ್ರೇಷ್ಠನೋ ?

★ ಗುಡಿಯೊಳಗಿನ ಶಿವಲಿಂಗಗಳು ಯೋಗಿರಾಜ ಶಿವನ ಪ್ರತೀಕ, ಕುರುಹು. ಎರಡೂ ವಸ್ತುಗಳ ಪೂಜಾ ಮಂತ್ರ ಒಂದೆಯೆ ? ಭಾವಚಿತ್ರಗಳಲ್ಲಿ ರೂಪು ಇರುತ್ತದೆ; ಗುಡಿಯೊಳಗಿನ ಶಿವಲಿಂಗ ಆ ರೂಪವನ್ನು ಹೋಲುತ್ತದೆ. ಲಿಂಗಾಯತ ಧರ್ಮೀಯರು ಶಿವನ ಕುರುಹಾದ ಸ್ಥಾವರ ಲಿಂಗ ಪೂಜಕರಲ್ಲ, ಬ್ರಹ್ಮಾಂಡವನ್ನು ತುಂಬಿದ ಸರ್ವ ಶಕ್ತ ಲಿಂಗದೇವನ ಕುರುಹಾದ ಇಷ್ಟಲಿಂಗ ಪೂಜಕರು.

ಪ್ರಶ್ನೆ 2.- ಶಿವನಿಂದ ಆತ್ಮಲಿಂಗ ಪಡೆದ ರಾವಣ ಶ್ರೇಷ್ಠನೋ ?, ರಾಮೇಶ್ವರದಲ್ಲಿ ಲಿಂಗವನ್ನು ಸ್ಥಾಪಿಸಿದ ರಾಮ ಶ್ರೇಷ್ಠನೋ ?.

★ ಭಕ್ತಿ ಭಾವದಿಂದ ಪ್ರೇರಿತನಾಗಿ 3-4 ಸಾವಿರ ಕಿ.ಮೀ. ದೂರ ಪ್ರಯಾಣಿಸಿ ಗುರು ಶಿವನಿಂದ ಶಿವಲಿಂಗವನ್ನು ರಾವಣ ತಂದ. ಶಿವಭಕ್ತ ರಾವಣನನ್ನು ಕೊಂದು ಅದರ ಪಾಪ ಪರಿಹಾರಾರ್ಥ ಪ್ರಾಯಶ್ಚಿತ್ತವಾಗಿ ರಾಮೇಶ್ವರನನ್ನು ರಾಮ ಪ್ರತಿಷ್ಠಾಪಿಸಿದ. ಆದ್ದರಿಂದ ಶುದ್ಧ ಭಕ್ತಿಯ ರಾವಣನೇ ಶ್ರೇಷ್ಠ.

ನಾಗಶೆಟ್ಟಿ ಶೆಟಕಾರ, ಕಾರ್ಯದರ್ಶಿ, ರಾ.ಬ.ದಳ, ಬೀದರ್.- ಚಿತ್ರದುರ್ಗದ ಬೃಹನ್ಮಠದ ಶರಣರು ಇತ್ತೀಚಿಗೆ ಒಂದು ಹೇಳಿಕೆ ಕೊಟ್ಟರು. ದಿ. 29-6-2002 ರ ವಿಜಯ ಕರ್ನಾಟಕದಲ್ಲಿ ಪ್ರಕಟವಾಯಿತು. ಏನೆಂದರೆ, ಕತ್ತಿ ಹಿಂಸೆಯ ಪ್ರತೀಕ. ಆದ್ದರಿಂದ ಬಸವಣ್ಣನವರ ಭಾವಚಿತ್ರದಲ್ಲಿ ಖಡ್ಗ ಅವಶ್ಯವಿಲ್ಲ, ಅದೇ ರೀತಿ ಮಡಿವಾಳ ಮಾಚಿದೇವರು ಶರಣರಾದ ಕಾರಣ ಅವರಿಗೆ ಸಹ ಖಡ್ಗ ಅವಶ್ಯವಿಲ್ಲ ಎಂದು. ನಿಮ್ಮ ಅಭಿಪ್ರಾಯವೇನು ?

★ ಗುರು ಬಸವಣ್ಣನವರು ಕೇವಲ ಓರ್ವ ಗುರು ಅಥವಾ ಸನ್ಯಾಸಿಯಲ್ಲ. ಅವರು ಪ್ರಧಾನಿಯೂ ಆಗಿದ್ದರು. ಪ್ರಧಾನಿಯು ದಂಡನಾಯಕನೂ ಅಹುದು. ಉದಾಹರಣೆಗೆ ರಾಷ್ಟ್ರಪತಿಯೇ ನಮ್ಮ ಸಂವಿಧಾನದ ಪ್ರಕಾರ ಸೈನ್ಯ, ವಾಯುಪಡೆ, ನೌಕಾ ಪಡೆಗೆ ಮಹಾದಂಡನಾಯಕರು. ಪ್ರಧಾನಿ ಮತ್ತು ದಂಡನಾಯಕರಾಗಿ ಅವರು ಸಮವಸ್ತ್ರ (Uniform) ಧರಿಸುವುದು ಅಗತ್ಯವಿತ್ತು. ಅಂದಿನ ವಾಹನ ಕುದುರೆ. ಸಮವಸ್ತ್ರದ ಮುಖ್ಯ ಲಾಂಛನ ಖಡ್ಗ ಮತ್ತು ಕಿರೀಟ. ಹೀಗಾಗಿ ಸಮವಸ್ತ್ರ ಧರಿಸಿ ಅವರು ತಮ್ಮ ಕಾಯಕಕ್ಕೆ ತೆರಳುತ್ತಿದ್ದರು. ಆದ್ದರಿಂದ ಅಶ್ವಾರೂಢ ಬಸವಣ್ಣನವರ ಜೊತೆ ಖಡ್ಗ ಇರುವುದು ತಪ್ಪಲ್ಲ. ಸ್ವಾಮಿಗಳಿಗೆ ಕಾವಿ ಮತ್ತು ಬೆತ್ತ ಸಮವಸ್ತ್ರವಾದಂತೆ ಇದೂ ಸಹ. ಇನ್ನು ವಚನಕಾರರಾಗಿ ಕಾಣುವಾಗ, ಅಭಯ ನೀಡುವ ಗುರುವಾಗಿ ಕುಳಿತಾಗ, ಇಷ್ಟಲಿಂಗಾರ್ಚನೆ ಮಾಡುವಾಗ ಖಡ್ಗದ ಅವಶ್ಯಕತೆ ಇಲ್ಲ. ಮಡಿವಾಳ ಮಾಚಿದೇವರಿಗೆ ಮಾತ್ರ ಖಡ್ಗ ಇರಲೇಬೇಕು. ಇಷ್ಟಲಿಂಗಾರ್ಚನೆ ಮಾಡಿ, ವಚನ ಬರೆದ ಶರಣರು ಅನೇಕರು ಇರಬಹುದು. ಆದರೆ ಧರ್ಮರಕ್ಷಣೆಗಾಗಿ ಖಡ್ಗ ಹಿಡಿದ ವೀರ ಗಣಾಚಾರಿ ಮಡಿವಾಳ ಮಾಚಿದೇವರು ಮತ್ತು ಅಕ್ಕನಾಗಲಾಂಬಿಕಾ ತಾಯಿ. ಆದ್ದರಿಂದ ಅವರನ್ನು ವೀರಭಂಗಿಯಲ್ಲೇ ಗೌರವಿಸೋಣ.

1. ನಾಯಿ-ಬೆಕ್ಕುಗಳ ಸಖ್ಯ

ಓರ್ವ ಭಕ್ತರು ಬಲು ಮುದ್ದಾದ ಪೊಮೇರಿಯನ್ ನಾಯಿ ಮರಿಯನ್ನು ತಂದು ಕೊಟ್ಟರು. ಬಹಳ ಸುಂದರಿಯಾದ ಅವಳಿಗೆ 'ರಾಣಿ' ಎಂದು ಹೆಸರಿಟ್ಟೆವು. ಅವಳ ಸ್ವಭಾವ ಚೆನ್ನಾಗಿದೆ. ಪುಸ್ತಕ, ಕಿಸೆಟ್ಟುಗಳನ್ನು ಇಲಿಗಳು ಕಡಿದು ವಿಪರೀತ ಹಾಳು ಮಾಡುತ್ತಿವೆ ಎಂದು ಚಿಂತಿಸಿದ ಸಾಧಕಿಯರು ಭಕ್ತರೊಬ್ಬರ ಮನೆಯಲ್ಲಿದ್ದ ಬೆಕ್ಕಿನ ಮರಿಗಳನ್ನು ಪಡೆದುಕೊಂಡರು. ನಾಯಿ ಬೆಕ್ಕುಗಳಿಗೆ ಹುಟ್ಟು ವೈರ ಎಂಬುದನ್ನು ಎಲ್ಲರೂ ಬಲ್ಲರು. ಆದರೆ ಅವು ಒಂದೇ ತಾಣದಲ್ಲಿ ಬದುಕಬೇಕಾದುದು ಅನಿವಾರ್ಯ, ಪರಸ್ಪರ ಹೊಂದಿಕೊಂಡರೆ ಒಳ್ಳೆಯದು ಎಂದು ಆಶ್ರಮವಾಸಿಗಳು ನಾಯಿ ಮತ್ತು ಬೆಕ್ಕಿನ ಮರಿಗಳಲ್ಲಿ ಪರಸ್ಪರ ಸ್ನೇಹ ಕುದುರಿಸಲು ಯತ್ನಿಸಿದರು. ನಾಯಿ ಮರಿ ರಾಣಿ ತಾನೇ ಮುಂದಾಗಿ ಬೆಕ್ಕಿನ ಮರಿಗಳ ಜೊತೆ ಆಟವಾಡಲು ಆಸಕ್ತಳು, ಆದರೆ ಬೆಕ್ಕಿನ ಮರಿ ಮಾತ್ರ ಭಯದಿಂದ ಕಿಸ್ ಎಂದು ತನ್ನ ಕಾಲಿನ ಪಂಜದಿಂದ ನಾಯಿಯನ್ನು ಪರಚಲು ಹೋಗುತ್ತಿತ್ತು. ರಾಣಿ ಸಹನೆ ಕಳೆದುಕೊಳ್ಳದೆ ಬೆಕ್ಕಿನ ಮರಿಯ ಹಿಂದೆ ಮುಂದೆ ಓಡಾಡುತ್ತ ಅದನ್ನು ಅಂತೂ ಸಾಧುಗೊಳಿಸಿತು. ಯಾವಾಗಲಾದರೂ ಮೂಡ್ ಇಲ್ಲದಾಗ ಮಾತ್ರ ಬೆಕ್ಕಿನ ಮರಿ ದಾಳಿ ಮಾಡುತ್ತದೆ. ಬಾಕಿ ಸಮಯದಲ್ಲಿ ಎರಡೂ ಜೊತೆಗೂಡಿ ಆಟವಾಡುತ್ತಿವೆ.

ಇದನ್ನೆಲ್ಲ ಗಮನಿಸಿದ ನನಗೆ ಒಂದು ಸ್ಫುರಣ ಹೊಳೆಯಿತು. ಭಾರತ ದೇಶದಲ್ಲಿ ಹಿಂದು ಸಂಸ್ಕೃತಿಯವರು ಮತ್ತು ಮುಸ್ಲಿಮರು (ಮತ್ತು ಇತರ ಧರ್ಮೀಯರು) ಇದ್ದಾರೆ. ಲಿಂಗಾಯತರು ಧಾರ್ಮಿಕವಾಗಿ ಹಿಂದುಗಳಲ್ಲ ಆದರೆ ಸಾಂಸ್ಕೃತಿಕವಾಗಿ ಸೀರೆ, ಬಳೆ, ಕುಂಕುಮ ಮುಂತಾದ ಧಾರಣೆಯ ಮೂಲಕ ಹಿಂದು ಸಂಸ್ಕೃತಿ ಅಳವಡಿಸಿಕೊಂಡಿದ್ದಾರೆ. ಅಸಂಘಟಿತರು ಮತ್ತು ಹಲವಾರು ಜಾತಿಗಳಿಂದಾಗಿ ಪರಸ್ಪರ ಹೊಂದಾಣಿಕೆ ಇಲ್ಲದೆ ಇರುವವರಾದ ಹಿಂದೂ ಸಂಸ್ಕೃತಿಯ ಜನರು ಸ್ವಲ್ಪ ಹೊಂದಾಣಿಕೆ ಮಾಡಿಕೊಳ್ಳೋಣ ಎಂದು ಮುಸ್ಲೀಮರ ಜೊತೆ ಸೌಹಾರ್ದತೆಯಿಂದ ಬೆರೆಯಲು ಯತ್ನಿಸಿದರೂ ಅವರಲ್ಲಿ ಅನೇಕರು ತೀವ್ರವಾದಿಗಳಾಗಿ ಅಪನಂಬಿಕೆ ವ್ಯಕ್ತಪಡಿಸುವುದಲ್ಲದೆ ಆಗಾಗ ತೀವ್ರ ಘರ್ಷಣೆಗೆ ಇಳಿಯುತ್ತಾರೆ. ಎಷ್ಟೇ ಸಹನೆಯಿಂದ ವರ್ತಿಸಿದರೂ ಅವರು ಪ್ರತ್ಯೇಕತಾವಾದ ಮಂಡಿಸಿ ಉಗ್ರವಾದಿಗಳಾದಾಗ ಆತ್ಮ ರಕ್ಷಣೆಗೆ ಎಂದು ಭಜರಂಗದಳ, ಶಿವಸೇನೆಯಂಥ ಹಿಂದುವಾದಿ ಸಂಸ್ಥೆಗಳು ಮೈದಳೆಯುತ್ತವೆ.

ಹೇಗೆ ಪರಸ್ಪರ ಒಡನಾಡುತ್ತ ನಾಯಿ-ಬೆಕ್ಕುಗಳೆಂಬ ವಿಜಾತಿಯ ಪ್ರಾಣಿಗಳು ಸೌಮ್ಯವೂ, ಸ್ನೇಹಪರವೂ ಆದವೋ ಹಾಗೆ ಪರಸ್ಪರ ಒಡನಾಟದಿಂದ ಹಿಂದು ಸಂಸ್ಕೃತಿಯವರು ಮತ್ತು ಮುಸ್ಲೀಮರು ಸ್ನೇಹಪರವಾಗಿ ಇರಲು ಸಾಧ್ಯ. ಎಲ್ಲರೊಂದಿಗೆ ಕನ್ನಡ ಶಾಲೆ, ಇಂಗ್ಲೀಷ್ ಶಾಲೆಗಳಲ್ಲಿ ಓದಿದ ಮುಸ್ಲೀಮರಲ್ಲಿ ಮತ್ತು ಪ್ರತ್ಯೇಕವಾಗಿ ಉರ್ದುಶಾಲೆಯಲ್ಲೇ ಓದಿದ ಮುಸ್ಲೀಮರಲ್ಲಿ ವ್ಯತ್ಯಾಸವನ್ನು ಕಾಣಬಹುದು. ಆದ್ದರಿಂದ ಸರ್ಕಾರಗಳು ಮುಸಲೀಮರು ಧಾರ್ಮಿಕವಾಗಿ ತಮ್ಮ ಧರ್ಮವನ್ನು ಅನುಸರಿಸಿದರೂ, ಇನ್ನಿತರರೊಡನೆ ಬೆಳೆಯುವಂತೆ, ಬೆರೆಯುವಂತೆ ಮಾಡಲು ಉಳಿದ ಶಾಲೆಗಳಲ್ಲಿ ಅಭ್ಯಾಸ ಮಾಡುವಂತೆ ವ್ಯವಸ್ಥೆ ಮಾಡಬೇಕು. ಉರ್ದು ಕಲಿಯುವುದು, ಮದರಸಾ ಶಿಕ್ಷಣವನ್ನು ಪಡೆಯುವುದು ಅವರ ಸ್ವಯಂಸೇವಾ ಸಂಸ್ಥೆಗಳ ಕೆಲಸವಾಗಿ ಮಾಡುವುದು ಒಳ್ಳಿತು. ಊರ ಹೊರಗೆ ನೂತನ ಹೊಲೆಗೇರಿಗಳನ್ನು ಕಟ್ಟುತ್ತ ಅಸ್ಪೃಶ್ಯತೆ ಕಳೆಯುತ್ತೇನೆಂಬುದು, ಪ್ರತ್ಯೇಕ ಉರ್ದುಶಾಲೆ ತೆಗೆದು ಭಾವೈಕ್ಯತೆ ಬೆಳೆಸುತ್ತೇವೆ ಎಂಬುವು ರಾಜಕೀಯ ಮಾತುಗಳು ವಿನಾ ಆದರ್ಶ ವಿಧಾನಗಳಲ್ಲ.

2. ಆಟದ ಸಾಮಾನು

ಒಬ್ಬ ದೊಡ್ಡ ಸಿರಿವಂತನ ಪರಿವಾರವಿರುತ್ತದೆ ಎಂದುಕೊಳ್ಳೋಣ. ಆಗ ಅವನ ಮಕ್ಕಳಿಗೆ ಬೆಲೆ ಬಾಳುವ ಆಟದ ಸಾಮಾನು ಇರುತ್ತವೆ. ಸುಂದರವಾದ ಬಣ್ಣದ ಕುದುರೆ, ಉಯ್ಯಾಲೆ ಇತ್ಯಾದಿ. ಪಕ್ಕದಲ್ಲೇ ಒಂದು ಗುಡಿಸಲಿನಲ್ಲಿ ಓರ್ವ ಕೂಲಿಕಾರ ಇರುತ್ತಾನೆ ಎಂದುಕೊಳ್ಳೋಣ. ಅವನೋ ಕುಡುಕ. ಹೆಂಡತಿ ಮಕ್ಕಳಿಗೆ ಸರಿಯಾಗಿ ಊಟಕ್ಕೂ ಹಾಕದವನು. ಆಗ ಅವನ ಮಕ್ಕಳು ಆಟವಾಡಬೇಕು ಎಂಬ ಹಂಬಲಹೊಂದಿ ಏನು ಮಾಡುತ್ತವೆ? ಒಂದು ಕೋಲಿನ ತುಂಡನ್ನು ಕಾಲು ಕೆಳಗೆ ಇರಿಸಿಕೊಂಡು ಅದೇ ಕಾರು ಎಂದು ಹೋಗುತ್ತವೆ. ಆ ಕೋಲಿನ ತುದಿಗೆ ಡಬ್ಬಿ ಮುಚ್ಚಳವನ್ನು ಬಡಿದು ಅದನ್ನೇ ಆಡಿಸುತ್ತ ಸಮಾಧಾನ ಪಟ್ಟು ಕೊಳ್ಳುತ್ತವೆ. ಉಯ್ಯಾಲೆಯಾಗಿ ಹಗ್ಗಕ್ಕೆ ಹರಕುಬಟ್ಟೆ ಹಾಕಿ ತೂಗಿಕೊಳ್ಳುತ್ತೇವೆ. ಹಾಗೆಯೇ ವೈದಿಕ-ಹಿಂದು ಧರ್ಮ ಎಲ್ಲ ವರ್ಣ, ಜಾತಿಗಳವರಿಗೆ ಸಮಾನವಾದ ಧರ್ಮಸಂಸ್ಕಾರ, ಉಪಾಸನಾ ವಸ್ತುಗಳನ್ನು ಕೊಡದ್ದರಿಂದ ಹಿಂದುಗಳೆನ್ನಿಸಿಕೊಂಡವರು ಇಲಿ ಪೂಜೆ - ಹುಲಿ ಪೂಜೆ, ನಾಗ ಪೂಜೆ - ಗೋಪೂಜೆ, ಗಿಡಮರ ಪೂಜೆ, ಮಾರಿದುರ್ಗಿ ಪೂಜೆ, ಪ್ರಾಣಿ ಬಲಿ, ಗಂಗಾ ಪೂಜೆ ಇತ್ಯಾದಿ ಮೂಢ ಉಪಾಸನೆಗಳನ್ನು ಅವಲಂಬಿಸಿದರು. ಅಪ್ಪ ಬಸವಣ್ಣನವರು ಇದನ್ನು ಕಂಡು ಧರ್ಮದ ಕರ್ತವ್ಯವೇನೆಂಬುದರ ಹೊಣೆಯರಿತು ಎಲ್ಲರಿಗೂ ಲಿಂಗದೀಕ್ಷಾ ಸಂಸ್ಕಾರ, ಪೂಜೆಯ ಸವಲತ್ತು ಕೊಟ್ಟರು. ವಚನ ಸಾಹಿತ್ಯದ ಸುಂದರ ಉಯ್ಯಾಲೆ ಕಟ್ಟಿದರು.

ಆದರೆ ಮೂಢ ಲಿಂಗಾಯತರು ತಮ್ಮ ಧರ್ಮದ ಮರ್ಮವನ್ನು ಅರಿಯದೆ ಮತ್ತು ಅರ(ಮತ್ತು ಗುರು) ಮನೆ ಬಿಟ್ಟು ಜೋಪಡಿ ಸಂಸ್ಕೃತಿಗೆ ಜೋತು ಬೀಳುತ್ತಿದ್ದಾರೆ.

ನಗೆ ಹನಿ (ಕೇಳಿದ್ದು) ವೃತ್ತಿ - ವ್ಯಾಪಾರ

1. ಓರ್ವ ಪ್ರಸಿದ್ಧ ವಕೀಲರು ತಮ್ಮ ಮಗನನ್ನು ಖ್ಯಾತ ವಕೀಲನನ್ನಾಗಿ ಮಾಡಿದರು ; ಅವರ ಮಗನೂ ವಕೀಲನಾಗಿ ಕೋರ್ಟಿಗೆ ಹೋಗತೊಡಗಿದ. ತಾತನ ಕಾಲದಲ್ಲಿ ಕೋರ್ಟಿಗೆ ಬಿದ್ದಿದ್ದ ದಾವೆಯನ್ನು ಮುಗಿಸಿ, ಕಕ್ಷಿದಾರನನ್ನು ಗೆಲ್ಲಿಸಿದ. ಮೊಮ್ಮಗ ಮನೆಗೆ ಬಂದು ಹೆಮ್ಮೆಯಿಂದ ತಾತನಿಗೆ ಹೇಳಿದನಂತೆ, "ತಾತಾ, ನೋಡ್ರಿ ಐವತ್ತು ವರ್ಷಗಳಿಂದ ನಡೆಯುತ್ತಿದ್ದ ಕೇಸನ್ನು ನೀವಿಬ್ಬರೂ ಮಾಡಲಾರದ್ದನ್ನು ನಾನು ಮಾಡಿಸಿ ತೋರಿಸಿದ್ದೇನೆ. ಕೇಸನ್ನು ಗೆದ್ದುಬಿಟ್ಟೆ." "ಎಲೋ ಮೂರ್ಖ, ನಿಮ್ಮಪ್ಪ ಮತ್ತು ನೀನು ಇಬ್ಬರೂ ಈ ಮಟ್ಟಕ್ಕೇರಲು ಆ ಕೇಸಿನ ಕಕ್ಷಿದಾರನ ಹಣವೇ ಕಾರಣ; ಎಂಥಾ ಕೆಲಸ ಮಾಡಿಬಿಟ್ಟೆ " ಎಂದರಂತೆ ವಕೀಲ ತಾತ.

2. ರುದ್ರಭೂಮಿಯಲ್ಲಿ ತಗ್ಗು ತೋಡುವವನು ಶವವನ್ನು ಕಂಡು ಹೇಳಿದ "ಏನು ಸ್ವಾಮಿ, ಸತ್ತು ನಾಲ್ಕು ದಿನದ ಮೇಲಾ ಸಮಾಧಿ ಮಾಡೋದು! ಯಾಕ ಹೀಗೆ ಮಾಡಿದಿರಿ.? ಯಾರಿಗಾದ್ರೂ ಕಾಯ್ತಾ ಇದ್ರಾ ?" ಕೇಳಿ ಶವದ ವಾರಸುದಾರರಿಗೆ ಗಾಬರಿ - ಆಘಾತವಾಯಿತು. ಖಾಸಗಿ ನರ್ಸಿಂಗ್ ಹೋಂ ದವರು ನಿನ್ನೆ ತಾನೇ ಸಾವಾಯಿತು ಎಂದು ತಿಳಿಸಿ, ಸಹಸ್ರಾರು ರೂಗಳ ಬಿಲ್ ಕಟ್ಟಿಸಿಕೊಂಡು ಶವವನ್ನು ಕೊಟ್ಟಿದ್ದರು. ಆಗ ಅವರಲ್ಲಿ ಓರ್ವ ನರ್ಸಿಂಗ್ ಹೋಂಗೆ ಹೋಗಿ ಮೇಲ್ವಿಚಾರಕರ ಬಳಿ ತಗಾದೆ ಮಾಡಿದ. ಅವರು ಶಾಂತರಾಗಿ ಹೇಳಿದರು : "ಐ.ಸಿ. ಯೂನಿಟ್ ಬಹಳ ಕಾಸ್ಟ್ಲಿ. ಅದನ್ನು ಹಾಗೆಯೇ ಇಟ್ಟುಕೊಳ್ಳಲಾಗುವುದೆ? ಬೇರೆ ಪೇಷಂಟ್ ಸಿಕ್ಕ ಮೇಲೆ ನಿಮ್ಮ ಪೇಷಂಟ್ ಶವ ಕೊಡಲಾಗಿದೆ." ಶವದ ವಾರಸುದಾರ ಸುಸ್ತೋ ಸುಸ್ತು.

ವಚನ ವಿಶ್ಲೇಷಣೆ

ಲಿಂಗದೇವನ ಶರಣ

- ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ

ಗೀತವ ಬಲ್ಲಾತ ಜಾಣನಲ್ಲ, ಮಾತ ಬಲ್ಲಾತ ಜಾಣನಲ್ಲ
ಜಾಣನು ಜಾಣನು
ಆತ ಜಾಣನು, ಲಿಂಗವ ನೆರೆ ನಂಬಿದಾತ
ಆತ ಜಾಣನು, ಜಂಗಮಕ್ಕೆ ಧನವ ಸವೆಸುವಾತ
ಆತ ಜಾಣನು, ಜವನ ಬಾಯಲು ಬಾಲವ ಕೊಯ್ದು ಹೋದಾತ
ಆತ ಜಾಣನು ನಮ್ಮ ಲಿಂಗದೇವನ ಶರಣನು

(ಬ.ವ.ದೀ- 154)

ಅಬ್ಬಾ!! ಧರ್ಮಪಿತರ ಅಸಾಮಾನ್ಯವಾದ ಈ , ವಾಣಿ ತಾನೂ ಮೌನವಾಗಿರುವುದಿಲ್ಲ! ಅಂತೆಯೇ ವಚನಾಭ್ಯಾಸಿಯನ್ನು ಸುಮ್ಮನಿರಲು ಬಿಡುವುದಿಲ್ಲ!! ನೋಡಲು ಪುಟ್ಟದಾದರೂ ತನ್ನ ಎರಡು-ಮೂರು ಮಾತುಗಳಿಂದಲೇ ಅದೆಷ್ಟೊಂದು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ. ಏಕೆಂದರೆ ಇದರ ಮೊಟ್ಟ ಮೊದಲ ಸಾಹಸವೇನೆಂದರೆ ಜಾಣರು ಅಂದುಕೊಂಡವರನ್ನೆಲ್ಲ ಕೋಣರು(ದಡ್ಡರು)ಎಂದು ಧೈರ್ಯವಾಗಿ ಕರೆಯುತ್ತಾ, ಬೆರಳುಮಾಡಿ ತೋರಿಸುತ್ತಾ ಮೂದಲಿಸುತ್ತಿರುವುದು. ನಂತರ ಅವರನ್ನು ಜಿಜ್ಞಾಸೆಗೆ ಒಳಗು ಮಾಡುವುದು. ಸುಪ್ತವಾಗಿರುವ ಅಹಂಪ್ರಜ್ಞೆಯನ್ನು ಚುಚ್ಚುವುದು. ಬುದ್ಧಿಶಕ್ತಿಗೆ ಪೆಟ್ಟುಕೊಡುವುದು. ಜಾಣತನವನ್ನು ಒರೆಗೆ ಹಚ್ಚಿನೋಡುವುದು. ಆತ್ಮಾವಲೋಕನ ಮಾಡಿಕೊಳ್ಳಲು-ಅಂತರಂಗವನ್ನು ಕೆದಕಿ ನೋಡಿಕೊಳ್ಳಲು ಪ್ರಚೋದಿಸುವುದು. ಮಾತ್ರವಲ್ಲ ಬದುಕನ್ನು ಪರೀಕ್ಷೆಗೆ ಒಡ್ಡುವುದು. ಈ ವಚನಜ್ಞಾನದಂತೆ ಬುದ್ಧಿವಂತರು, ಜಾಣರು ಆಗಲಿಕ್ಕೆ ಯಾರಿಗೆ ತಾನೇ ಇಷ್ಟವಿಲ್ಲ?! ಹಾಗಿದ್ದರೆ ಜಾಣತನವನ್ನು ಅಳೆಯುವ ಸಾಧನ ಯಾವುದು? ಶಾಲಾ ಕಾಲೇಜುಗಳಲ್ಲಿ ಅಂಕಗಳ ಮೂಲಕ ಅಳೆಯುತ್ತಾರೆ. ಹೆಚ್ಚು ಅಂಕ ಬಂದರೆ ಬುದ್ಧಿವಂತ, ಕಡಿಮೆ ಬಂದರೆ ದಡ್ಡ ಎಂದು. ಇನ್ನು ಲೌಕಿಕ ಪ್ರಪಂಚದಲ್ಲಿ ವ್ಯವಹಾರಿಕ ಪ್ರಜ್ಞೆ ಮತ್ತು ಸ್ವಾರ್ಥದಿಂದ ಬದುಕುವವರನ್ನು ಬುದ್ಧಿವಂತರು ಎಂದು ತಿಳಿಯುತ್ತಾರೆ.

ಅಷ್ಟೇ ಅಲ್ಲ, ಲಿಂಗಾಯತ ಸಮಾಜದಲ್ಲಿ ಮಠಾಧೀಶರನ್ನು ಭಕ್ತರು ಭಯಭಕ್ತಿಯಿಂದ ಬುದ್ಧಿ...ಬುದ್ಧಿ... ಎಂದು ಸಂಬೋಧಿಸುವುದನ್ನು ಕಾಣುತ್ತೇವೆ. ಇಲ್ಲಿ ಚಿಂತಿಸಬೇಕಾದ ವಿಷಯವೇನೆಂದರೆ ಬುದ್ಧಿಯಲ್ಲಿ ಮೂರು ವಿಧ. ಒಂದು ಸುಬುದ್ಧಿ, ಇನ್ನೊಂದು ದುರ್ಬುದ್ಧಿ ಮತ್ತೊಂದು ನಿರ್ಬುದ್ಧಿ. ಇವುಗಳಲ್ಲಿ ಯಾವುದನ್ನು ಅನ್ವಯಿಸಿ ಕಾವಿಧಾರಿಗಳನ್ನು ಕರೆಯುತ್ತಾರೆ ಎಂಬುದು ಸಂದೇಹಾಸ್ಪದ; ಇರಲಿ, ಇದರ ಬಗ್ಗೆ ಹೆಚ್ಚಿಗೆ ತಲೆಕೆಡಿಸಿಕೊಳ್ಳುವುದು ಬೇಡ. ಏಕೆಂದರೆ ಹೀಗೆ ಕರೆಯುವ ಭಕ್ತರನ್ನು ಅತಿಬುದ್ಧಿವಂತರೆಂದೇ ಪರಿಗಣಿಸಬೇಕಾಗುತ್ತದೆ. ಕಾರಣವೇನೆಂದರೆ ... ಬುದ್ಧಿ ... ಬುದ್ಧಿ ಎಂದು ಸಂಬೋಧಿಸಿದರೆ ತಮ್ಮ ಗುರುಗಳ

ನಡೆನುಡಿಗಳಿಗನುಗುಣವಾಗಿ ಸಂಬಂಧಪಟ್ಟ ಬಿರುದು ಖಾಲಿ ಜಾಗದಲ್ಲಿ ತಾನೇ ಸೇರ್ಪಡೆಯಾಗುತ್ತದೆ ಎಂಬ ಚಾಣಾಕ್ಷತೆಯಿಂದ ಹೀಗೆ ಕರೆಯುತ್ತಿರಬಹುದು!! ಭಲೇ ಲಿಂಗಾಯತರೇ, ಈ ವಿಷಯದಲ್ಲಿ ನಿಜಕ್ಕೂ ನೀವು ಬುದ್ಧಿ-ವಂತರೇ ಸರಿ.

ಈಗಿನ ಸ್ಪರ್ಧಾತ್ಮಕ ಯುಗದಲ್ಲಿ, ಆಧುನಿಕ, ಶೈಕ್ಷಣಿಕ, ವೈಜ್ಞಾನಿಕ ರಂಗದಲ್ಲಿ ಜನರನ್ನು ಜಡಮತಿಗಳನ್ನಾಗಿ ಇಹಲೋಕ ವೀರರನ್ನಾಗಿ ಮಾಡಲು, ಎಲ್ಲಾ ರಂಗದಲ್ಲೂ ಮುಂದೆ ಬರಲು ಏನೆಲ್ಲ ಕಸರತ್ತುಗಳು ನಡೆಯುತ್ತಿವೆ. ಈ ದೆಸೆಯಲ್ಲಿ ಎಲ್ಲಾ ರೀತಿಯ ಪ್ರಚಾರ ಮಾಧ್ಯಮಗಳು ಎಷ್ಟೆಲ್ಲಾ ಶ್ರಮ ವಹಿಸುತ್ತಿವೆ-ಆಮಿಷ ಒಡ್ಡುತ್ತಿವೆ. ಬದುಕಿನಲ್ಲಿ ಅತ್ಯುತ್ತಮ ಭವಿಷ್ಯ ರೂಪಿಸಿಕೊಳ್ಳಬೇಕೆಂಬ ಮಹದಾಸೆಯಿಂದ ನವ ತರುಣ ತರುಣಿಯರು ಹೊಸ ಹೊಸ ತಾಂತ್ರಿಕ ವಿಷಯಗಳಿಗೆ ಮುಗಿಬೀಳುತ್ತಿದ್ದಾರೆ. ಇದಕ್ಕಾಗಿ ದಿನ ನಿತ್ಯವೂ ಹೋರಾಟ ನಡೆಸುತ್ತಿದ್ದಾರೆ. ಆದರೆ ಈ ವಚನ ಇಂಥ ಲೌಕಿಕ ಪರಿಶ್ರಮಗಳನ್ನೆಲ್ಲ ಒಪ್ಪದೆ, ಮನ್ನಿಸದೆ ಅದೆಷ್ಟು ಸಾರಾಸಗಟಾಗಿ ಅಲ್ಲಗಳೆಯುತ್ತಿದೆ ಸವಾಲು ಹಾಕುತ್ತಿದೆ. ನೋಡಿರಿ!!! ಅಷ್ಟೇ ಅಲ್ಲ, ಈ ರೀತಿ ನಮ್ಮನ್ನು ಕೃತಕವಾಗಿ ನಕಲಿ ಬುದ್ಧಿವಂತರನ್ನಾಗಿ ಮಾಡಲು ಈ ವಚನಕ್ಕೆ ಇಷ್ಟವಿದ್ದಂತೆ ಕಾಣುತ್ತಿಲ್ಲ. ಏಕೆಂದರೆ ಅದಕ್ಕೂ ಗೊತ್ತು. ಒಂದು ಸೂಕ್ತಿಯ ಪ್ರಕಾರ ಅವಿದ್ಯಾವಂತರು, ಅನಕ್ಷರಸ್ಥರು ಕತ್ತಲಲ್ಲಿ ನಡೆಯುತ್ತಾ ಹೋದರೆ, ವಿದ್ಯಾವಂತರು, ಅಕ್ಷರಸ್ಥರು ಕಗ್ಗತ್ತಲಲ್ಲಿ ನುಗ್ಗುತ್ತಾರೆ ಎಂದು ಕೇವಲ. ಬುದ್ಧಿಶಕ್ತಿಯು ಮಾತ್ರ ಬಲಿಷ್ಠವಾಗಿ ಬೆಳೆಯಲು ಬೇಕಾದ ಆಹಾರವನ್ನು ಒದಗಿಸುತ್ತಾ, ಮನಸ್ಸು ಹೃದಯಗಳನ್ನು ಜಡವಾಗಿಸುವ-ಬರಡಾಗಿಸುವ ಇಂಥ ಕೃತಕ ಕ್ಷಣಿಕ ಪ್ರಯತ್ನಗಳೆಲ್ಲ ಬಹಳ ಕಾಲ ಉಳಿಯುವಂಥವಲ್ಲ ಎಂದು.

ಜೀವನಾಸಕ್ತಿಯನ್ನು ಬಿತ್ತದ, ಸಾರ್ಥಕವಾಗಿ ಬದುಕಲು ಬೇಕಾದ ಶಕ್ತಿ - ಸಾಮರ್ಥ್ಯಗಳನ್ನು ತುಂಬಲು ಅಶಕ್ತವಾದ, ಚಿಂತನ ಶಕ್ತಿಯನ್ನು ಬೆಳೆಸದ, ಆಧ್ಯಾತ್ಮಿಕ ಚಟುವಟಿಕೆಗಳಿಂದ ಬುದ್ಧಿಗೆ ಸಂಸ್ಕಾರ ಕೊಡದ ಮತ್ತು ಸುಲಭವಾಗಿ ಸೋಲನ್ನು ಒಪ್ಪಿಕೊಂಡು, ಅಪ್ಪಿಕೊಂಡು, ಅಪ್ಪಿಕೊಳ್ಳುವ ಮನೋಭಾವ ಬೆಳೆಸದ ಇಂಥ ಅವಿದ್ಯೆಯಿಂದ ದುರ್ಬಲ ಶಿಕ್ಷಣ ಪದ್ಧತಿಯಿಂದ ಏನು ಪ್ರಯೋಜನ! ಹೆಚ್ಚೆಂದರೆ ಪದವೀಧರ ನಿರುದ್ಯೋಗಿಗಳನ್ನು ಸೃಷ್ಟಿಸಬಹುದು ಮಾತ್ರ. ಹಾಗಾದರೆ ಈ ವಚನದ ಮೂಲ ಉದ್ದೇಶ ಮತ್ತು ಸಂಕಲ್ಪ ಏನಿರಬಹುದು ಎಂದು ಕೇಳಿದಾಗ ಅದು ಹೇಳುತ್ತದೆ ಸಾಹಸಪ್ರಿಯರು, ಸಹೃದಯರೂ, ಸೃಜನಶೀಲರ ಸದ್ವೃಥರು ಆದ ಒಂದು ಆದರ್ಶ ಜನಾಂಗ ನಿರ್ಮಾಣದ ಪ್ರಯತ್ನವಿದು ಎಂದು.

ಅವರಲ್ಲೂ ವಿವೇಕಿಗಳು,ಜ್ಞಾನಿಗಳು,ಸತ್ಯಶೀಲರೂ ಆದವರಿಂದ ಜಾಣರು ಎಂದು ಕರೆಸಿಕೊಳ್ಳುವುದು ಅಷ್ಟೇನೂ ಸುಲಭದ ಮಾತಲ್ಲ. ಅದಕ್ಕೆ ಅಲ್ಲವೇ ಒಂದು ಕಡೆ ಧರ್ಮಪಿತರು ಕೇಳುವುದು ಲಿಂಗದೇವನ ಶರಣರ ವಚನದಲ್ಲಿ ಲೇಸೆನಿಸಿಕೊಂಡು ಒಂದು ದಿನ ಬದುಕಿದರೆ ಸಾಲದೆ ? ಎಂದು. ಇದನ್ನರಿತೇ ಅಲ್ಲವೆ ಜಗನ್ಮಾತಾ ಅಕ್ಕಮಹಾದೇವಿ "ಬಸವಣ್ಣ ಮೆಚ್ಚುವಂತೆ ಒಗೆತನವ ಮಾಡುವೆ"ಎಂದು ಸಂಕಲ್ಪಿಸಿದ್ದು. ಅದರಂತೆ ಬಾಳನ್ನು

ರೂಪಿಸಿಕೊಂಡು ಇಹ ಪರಕ್ಕೂ ಬೆಳಕಾಗುವಂತೆ ಬದುಕಿದ್ದು. ತನ್ನನ್ನು ಹಿಂಬಾಲಿಸುವ ಮುಂದಿನ ಜನಾಂಗಕ್ಕೆ ಸ್ಪಷ್ಟವಾದ ದಾರಿಯನ್ನು ಹಾಕಿಕೊಟ್ಟಿದ್ದು.

ಇಷ್ಟೆಲ್ಲ ಪೀಠಿಕೆಯೊಡನೆ ಇನ್ನು ಮುಂದೆ ಬಸವದೃಷ್ಟಿಯಲ್ಲಿ ಜಾಣರ-ದಡ್ಡರ ಸಾಲಿನಲ್ಲಿ ಯಾರ್‍ಯಾರು ನಿಂತಿದ್ದಾರೆ ಎಂದು ನೋಡೋಣ. ವಚನ ಸಾಹಿತ್ಯ ಸಾರ್ವಭೌಮರಾದ ಬಸವಣ್ಣನವರು ಮೊದಲು ಹೇಳುತ್ತಾರೆ ಗೀತವ ಬಲ್ಲಾತ ಜಾಣನಲ್ಲ; ಮಾತುಬಲ್ಲಾತ ಜಾಣನಲ್ಲ ಎಂದು. ಸಂಗೀತ ಒಂದು ಕಲೆ ಎಂಬುದು ನಿಜ. ಆದರೇ ಅದೇ ಸರ್ವಸ್ವವಲ್ಲ. ಆದ್ದರಿಂದಲೇ ದೇವರಿಗೆ ನಾದಪ್ರಿಯನಲ್ಲ; ನಾದಾತೀತ ಎಂದು ಸ್ತುತಿಸುವುದು. ಅಭಿರುಚಿಯಿದ್ದವರಿಗೆ ಮಾತ್ರ ಇದೊಂದು ಮನರಂಜನೆಯ ಸಾಧನವಾಗಿ, ಅಲಂಕಾರ ಸಾಹಿತ್ಯವಾಗಿ ಬಳಕೆಯಲ್ಲಿ ಉಳಿದು ಬಂದಿದೆ. ಜನಸಾಮಾನ್ಯರ ಬದುಕಿಗೆ ಅದರಲ್ಲೂ ಶಾಸ್ತ್ರೀಯ ಸಂಗೀತ ಎಂದೂ ಉಸಿರಾಗಲಿಲ್ಲ ಎಂಬುದು ಕಹಿಸತ್ಯ. ಈ ಮಾತುಗಳಿಗೆ ನಿದರ್ಶನವಾಗಿ ಒಂದು ಅನುಭವವನ್ನು ನಿಮ್ಮ ಮುಂದಿಡುತ್ತೇನೆ.

ಒಂದು ದಿನ ವಾಙ್ಮಯ ತಪಸ್ವಿಗಳೆಂದು ಹೆಸರಾಗಿದ್ದ ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರ ಪ್ರವಚನ ಕಾರ್ಯಕ್ರಮ ನಡೆಯುತ್ತಿತ್ತು. ಪ್ರಾರ್ಥನೆ ಮುಗಿದ ನಂತರ, ಕಾರ್ಯಕರ್ತರು ಅಂದಿನ ಸಭೆಗೆ ಆಗಮಿಸಿದ ಒಬ್ಬ ಪ್ರಸಿದ್ಧ ನಾದಯೋಗಿಗಳನ್ನು ಪರಿಚಯಿಸುತ್ತಾ ಪೂಜ್ಯ ಶ್ರೀಗಳು ನಿಜಗುಣ ಶಿವಯೋಗಿಗಳ ಪರಮಭಕ್ತರು. ಈಗ ನಿಜಗುಣರ ಕೆಲವು ಭಕ್ತಿಗೀತೆಗಳನ್ನು ಹಾಡಿ ನಿಮ್ಮನ್ನೆಲ್ಲ ರಂಜಿಸುತ್ತಾರೆ ಎಂದು ಪರಿಚಯಿಸಿದರು. ಅದರಂತೆ ನಾದಯೋಗಿಗಳು ಹಾಡಲು ತೊಡಗಿದರು. ಯಾವುದೋ ಅನುಭಾವ (ಭಕ್ತಿ) ಗೀತೆಯ ಚರಣವಿಡಿದು ಆಲಾಪನೆ ಶುರುಮಾಡಿದರು. ಕಣ್ಣುಮುಚ್ಚಿಕೊಂಡು ತಲೆನಡುಗಿಸುತ್ತಾ ರಾಗ ತೆಗೆದು ಹಾಡಿದ್ದೂ.... ಹಾಡಿದ್ದೇ.... ಅಲ್ಲಿದ್ದ ನಮಗೆಲ್ಲ ಇದು ಯಾವ ಗೀತೆ ? ಏನೆಂದು ಹಾಡುತ್ತಿದ್ದಾರೆ ? ಅದರ ಅರ್ಥವೇನಿರಬಹುದು ? ಒಂದೂ ತಿಳಿಯಲಿಲ್ಲ. ಎಷ್ಟು ತಲೆ ಕೆಡಿಸಿಕೊಂಡರೂ, ಕಟ್ಟುಗ್ರದಿಂದ ಮನಸ್ಸನ್ನು ಏಕಾಗ್ರ ಮಾಡಿ ಆಲಿಸಿದರೂ ಸ್ಪಷ್ಟವಾಗಿ ಮನವರಿಕೆಯಾಗಲಿಲ್ಲ. ಶ್ರೋತೃಗಳು ಮಾತ್ರ ಯಾವಾಗ ಸಂಗೀತ ಮುಗಿದು ಪ್ರವಚನ ಪ್ರಾರಂಭವಾಗುತ್ತದೋ ಎಂದು ಕಾತುರರಾಗಿದ್ದರು. ಅಷ್ಟೇ ಅಲ್ಲ "ಇಲ್ಲಿ ಸಂಗೀತವೇ ಚನ್ನಾಗಿಲ್ಲವೋ ಅಥವ ಅದರ ಆನಂದವನ್ನು(?!) ಸವಿಯುವ ರಸಗ್ರಹಣ ಶಕ್ತಿ ನಮಗಿಲ್ಲವೋ " ಎಂಬ ಸಂದಿಗ್ಧತೆಗೂ ಒಳಗಾಗಬೇಕಾಯಿತು. ಅಂತೂ ಕೊನೆಗೂ ಹಾಗೂ ಹೀಗೂ ಅದೇ ಶೈಲಿಯಲ್ಲಿಯೇ ಹಾಡಿ ಮುಗಿಸಿದರು. ಚನ್ನಾಗಿತ್ತು ಎಂದಲ್ಲ; ಸದ್ಯ ಮುಗಿಯಿತಲ್ಲ ಎಂದು ನಾವೂ ಜೋರಾಗಿ ಚಪ್ಪಾಳೆ ತಟ್ಟಿ ಸಂತೋಷ ವ್ಯಕ್ತಪಡಿಸಿದೆವು. ಪೂಜ್ಯರನ್ನು ಗೌರವಪೂರ್ವಕವಾಗಿ ಬೀಳ್ಕೊಟ್ಟ ನಂತರ ಪ್ರವಚನ ಪಿತಾಮಹರು ನಮ್ಮ ನೆರವಿಗೆ ಬಂದಿದ್ದು ಹೀಗೆ "ಶರಣ ಬಂಧುಗಳೇ, ಇದುವರೆಗೂ ನೀವೆಲ್ಲ ಅನುಭವಿಸಿದ್ದು ಶ್ರವಣಾನಂದ ಮಾತ್ರ. ಇದರಿಂದ ನಿಮಗೆ ಬೌದ್ಧಿಕಾನಂದವಾಗಲಿ, ಆತ್ಮಾನಂದವಾಗಲಿ ಸಿಗಲಿಲ್ಲ. ಏಕೆಂದರೆ ಸಂಗೀತಗಾರರಿಗೆ ಮತ್ತು ಸಂಗೀತ ಪ್ರಿಯರಿಗೆ ಅದು ಮುಖ್ಯವಲ್ಲ. ಜೀವನದ ಕಲೆಯನ್ನು, ಬದುಕಿನ ರಹಸ್ಯವನ್ನು, ದಿವ್ಯ ಸಂದೇಶಗಳನ್ನು ಅಡಗಿಸಿಟ್ಟುಕೊಂಡಿರುವ

ಶಾಸ್ತ್ರಗಳು, ಪುರಾಣ, ಕಾವ್ಯ, ಉಪನಿಷತ್ ಎಲ್ಲವೂ ಇರುವುದು ಗೀತ ಪ್ರಕಾರದಲ್ಲಿಯೆ. ಸಂಗೀತವು ಒಂದು ಅದ್ಭುತ ಕಲೆಯೆನಿಸಿದರೂ ಶ್ಲೋಕಗಳನ್ನು ಸ್ತುತಿ, ಗೀತೆಗಳನ್ನು ಅತಿಯಾದ ಶಾಸ್ತ್ರದ ಬಳಕೆಯಿಂದಾಗಿ ಸಂಗೀತ ವಿದ್ವಾಂಸರು ಜನಸಾಮಾನ್ಯರ ಹೃದಯ-ಬುದ್ಧಿ-ಮನಸ್ಸುಗಳಿಗೆ ತಲುಪಿಸಲಾರದೆ ಸೋತಿದ್ದಾರೆ. ಈ ಕಾರಣಕ್ಕಾಗಿಯೇ ಹನ್ನೆರಡನೆ ಶತಮಾನದಲ್ಲಿ ಸೋಲನ್ನರಿಯದ ಬದುಕಿನ ರಹಸ್ಯವನ್ನು ಬಿಚ್ಚಿಟ್ಟ ಗೀತ ಮಾತುಗಳೆಂಬ ಅಚ್ಚಕನ್ನಡದ ಸರಳ ಸುಂದರವಾದ ವಚನಗಳು ಜನಪದರ ಹೃದಯವನ್ನು ಗೆದ್ದು, ಮನಮತಿಗಳನ್ನು ಆವರಿಸಿ, ಅಪಾರ ಸಂಖ್ಯೆಯಲ್ಲಿ ಆಕರ್ಷಿಸಿದ್ದು " ಎಂದು ಹೇಳಿ ಪ್ರವಚನವನ್ನು ಪ್ರಾರಂಭಿಸಿದರು.

ಇನ್ನು 'ಮಾತು ಬಲ್ಲಾತ ಜಾಣನಲ್ಲ' ವಂತೆ. ಜಗತ್ತಿನಲ್ಲಿ ಮಾತಾಡುವ ಏಕೈಕ ಪ್ರಾಣಿಯೆಂದರೆ ಮಾನವ ಮಾತ್ರ. ಅವನನ್ನೇ ಹೀಗನ್ನಬಹುದೆ ?! ಮಾತನ್ನೇ ವ್ಯವಹಾರ ಜಗತ್ತಿನಲ್ಲಿ ಒಂದು ಅಸ್ತ್ರವನ್ನಾಗಿ, ಕಲೆಯನ್ನಾಗಿ, ಬಂಡವಾಳವನ್ನಾಗಿ ಮಾಡಿಕೊಂಡು ಎಷ್ಟು ಜನ ಬದುಕುತ್ತಿಲ್ಲ ·?! ಗೀತೆ ಪ್ರಕಾರದಲ್ಲಿರುವ ಸದ್ಗ್ರಂಥಗಳ ಸುಜ್ಞಾನ-ಸದ್ಭಕ್ತಿಯನ್ನು ಮೂಲಸತ್ವಕ್ಕೆ ಚ್ಯುತಿಬರದಂತೆ ಆಡುಮಾತುಗಳಿಗೆ ಪರಿವರ್ತಿಸಿ , ಜನರಿಗೆ ಸುಲಭವಾಗಿ ಅರ್ಥವಾಗುವಂತೆ, ಪರಿಣಾಮಕಾರಿಯಾಗಿ ಹೇಳಬೇಕಲ್ಲ. ಇದು ಎಲ್ಲರಿಗೂ ಸಾಧ್ಯವಾಗುವಂಥದ್ದಲ್ಲ. ಏಕೆಂದರೆ ಈ ರೀತಿ ಹೇಳಲು ಸಚ್ಚಿಂತನೆ, ಸಾಧನೆ ವಾಕ್‌ಸಿದ್ಧಿ ಎಲ್ಲವೂ ಬೇಕು. ಇಲ್ಲದಿದ್ದರೆ ಸಾಧನೆಯಿಲ್ಲದ ಬೋಧನೆ ಕೇಳುಗರಿಗೆ ಬರೀ ವೇದನೆಯಾಗಿ, ಇದರಿಂದ ಸಮಾಜ ಸಂಘಟನೆ ಸುಧಾರಣೆ ಸಂಸ್ಕರಣೆ ಸಾಧ್ಯವಾಗುವುದಿಲ್ಲ. ಆದರೂ ಒಂದು ವೇಳೆ ಶೂರರಾಗಿಯೋ, ತಿಪ್ಪೇಸಾರಿಸಿದಂತೆಯೋ ಅಥವ ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆಯೋ ಮಾತಾಡಿದರು ಎಂದಿಟ್ಟುಕೊಳ್ಳಿರಿ ಅದರಂತೆ ಸನ್ಮಾರ್ಗದಲ್ಲಿ ನಡೆಯದಿದ್ದರೆ ಪ್ರಯೋಜನವಿಲ್ಲ. ಇಂಥ ಪೊಳ್ಳು ಹುಸಿಯಿಂದ ಕೂಡಿದ, ಹೊಟ್ಟೆಪಾಡಿನ, ಕೀರ್ತಿಲಾಲಸೆಯ ಸವಿ ಮಾತುಗಳಿಂದ ಲೋಕ ಕಲ್ಯಾಣವಾಗಲಿ, ಆತ್ಮ ಕಲ್ಯಾಣವಾಗಲಿ ಆಗುವುದಿಲ್ಲ ಎನ್ನುತ್ತಾರೆ ಶರಣರು. ಆದ್ದರಿಂದ ನಾವಾಡುವ ಮಾತು ಹೇಗಿರಬೇಕು ಎಂದರೆ ಅಪ್ಪ ಬಸವಣ್ಣನವರು ಹೇಳುತ್ತಾರೆ, "ನುಡಿದರೆ ಮುತ್ತಿನ ಹಾರದಂತೆ, ಮಾಣಿಕ್ಯದ ದೀಪ್ತಿಯಂತೆ, ಸ್ಫಟಿಕದ ಸಲಾಕೆಯಂತೆ, ಲಿಂಗ ಮೆಚ್ಚುವಂತೆ" ಮಾತಾಡುವುದನ್ನು ಕಲಿಯಬೇಕು. ಹರಳು ಹುರಿದಂತೆ, ಚುರುಕಾಗಿ ಇರುವುದನ್ನು ಇದ್ದಂತೆ, ವಿವೇಚನೆಯಿಲ್ಲದ ಮಾತುಗಳಿಂದ ದೊಡ್ಡತನ ಬರುವುದಿಲ್ಲ. ಅಲ್ಲದೆ ಕ್ಷಣಿಕವಾದ ನಶ್ವರ ಮೌಲ್ಯಗಳನ್ನು ನೆಚ್ಚಿಕೊಂಡು ಮನೋರೋಗಿಗಳಾಗಿ ಸದಾ ಒದರುವವರನ್ನು ಈ ವಚನ ಜಾಣರೆಂದು ಕರೆದಿಲ್ಲ. ಏಕೆಂದರೆ ಅಂಥವರ ಮಾತುಗಳಲ್ಲಿ ಸತ್ಯದ ಪ್ರಕಾಶವಿರುವುದಿಲ್ಲ. ಆದ ಕಾರಣ ಇಂಥವರ ಮಾತುಗಳು ಲೋಕದಲ್ಲಿ ಶಾಶ್ವತವಾಗಿ ಉಳಿಯುದಿಲ್ಲ ಎಂದರಿತೇ ಬಸವಾದಿ ಪ್ರಮಥರು ಅತ್ತ ಒಣಗೀತೆಯೂ ಅಲ್ಲದ ಇತ್ತ ಜಡಮಾತುಗಳೂ ಅಲ್ಲದ ಗೀತಮಾತುಗಳೆಂಬ ಜ್ಯೋತಿಯ ಸಮನ್ವಯ ರೂಪದ ವಚನಗಳು ಎಂಬ ಹೊಸ ಪ್ರಕಾರವನ್ನು ಸೃಷ್ಟಿಸಿದ್ದು, ಜನಮಾನಸದ ಮೇಲೆ ಪ್ರಯೋಗಿಸಿದ್ದು. ಇದರಿಂದ ಅದ್ಭುತ ಯಶಸ್ಸು ಕಂಡ ವಚನಗಳು

ಸಮಾಜ ಶುದ್ಧೀಕರಣ ಕಾರ್ಯದಲ್ಲಿ ಪ್ರಮುಖ ಪಾತ್ರ ವಹಿಸಿದವು. ತನ್ಮೂಲಕ ರಾಜಶಾಹಿ-ಪುರೋಹಿತಶಾಹಿ-ಬಂಡವಾಳಶಾಹಿಗಳ ಕೆಂಗಣ್ಣಿಗೂ ತುತ್ತಾಗಿ, ಪಾರಾದವು.

ಇದುವರೆಗೂ ಯಾರು ಜಾಣರಲ್ಲ, ಏಕೆ ಜಾಣರಲ್ಲ ಎಂಬುದನ್ನು ನೋಡಿದ್ದಾಯಿತು. ಈಗ ಯಾರು ಜಾಣರು ಎಂಬುದನ್ನು ನೋಡೋಣ. ಮುಂದೆ ಹೇಳುತ್ತಾರೆ. "ಆತ ಜಾಣನು, ಲಿಂಗವ ನೆರೆ ನಂಬಿದಾತ" ಎಂದು. ಇಲ್ಲಿ ಲಿಂಗವ ನೆರೆ ನಂಬುವುದು ಅಂದರೆ ಏನು ? ಮತ್ತು ಹೇಗೆ ? ಲಿಂಗ ಅಂದರೆ ನಿರಾಕಾರನೂ, ನಿರ್ಗುಣನೂ, ಅಗೋಚರನೂ, ಅಯೋನಿಸಂಭವನೂ, ಅನುಭವವೇದ್ಯನೂ ಆದ ದೇವನು ! ಮುಟ್ಟಲು ಕೈಗೆ ಸಿಗದ, ನೋಡಲು ಕಣ್ಣಿಗೆ ಕಾಣದ ಇಂಥ ಚತುರನನ್ನು ಮೂಢತ್ವದಿಂದ, ಮನಸ್ಸಿಗೆ ಬಂದಂತೆ, ಏನೇನೋ ಹುಚ್ಚುಹುಚ್ಚಾಗಿ ಕಲ್ಪನೆ ಮಾಡಿಕೊಂಡು ಆರಾಧಿಸುವುದನ್ನು, ಬರೀ ನಂಬುವುದು ಬಹು ಸುಲಭ, ಆದರೆ ಇದೇ ದೇವರನ್ನು ದೃಢಭಕ್ತಿ ಸಂಪೂರ್ಣ ಶರಣಾಗತಿಯಿಂದ ನೆರೆನಂಬುವುದು ಅಷ್ಟೇ ಕಷ್ಟ. ಏಕೆಂದರೆ ನಂಬಿಕೆಯಲ್ಲಿ ಎರಡು ವಿಧ. ಒಂದು ದೃಡನಂಬಿಕೆ ಇನ್ನೊಂದು ಮೂಢನಂಬಿಕೆ. ಜಗತ್ಕರ್ತ ಪರಮಾತ್ಮನನ್ನು ಅರಿಯುವುದು ನಂಬುವುದು ನಂಬಿದ ಬಳಿಕ ಪ್ರಾರ್ಥಿಸುವುದು, ಪೂಜಿಸುವುದು, ಅನುಭವಿಸುವುದು, ಆನಂದಿಸುವುದನ್ನು ದೇವಸುತ ಬಸವಣ್ಣನವರಿಂದಲೇ ಕಲಿಯಬೇಕು. ಹೀಗೆ ಕಲಿತು ಜೀವನದಲ್ಲಿ ಯಶಸ್ಸಿನ ಮೆಟ್ಟಲನ್ನು ಹತ್ತಬೇಕು. ಅದಕ್ಕಾಗಿಯೇ ಬಸವಣ್ಣನವರು ಸತ್ಯದ ಹಾದಿಯಲ್ಲಿ ತಾವೂ ನಡೆದು, ಸ್ವಾರ್ಥಿಗಳಾಗದೇ ನಮಗೂ ಆ ದಾರಿಯನ್ನು ತೋರಿಸಿಕೊಟ್ಟಿದ್ದಾರೆ. ನೋಡಿ ಅವರು ಈ ಬಗ್ಗೆ ಹೇಗೆ ಒತ್ತಿ ಒತ್ತಿ ಹೇಳುತ್ತಿದ್ದಾರೆ.

★ ಸದಾಶಿವನೆಂಬ ಲಿಂಗವ ನೆರೆನಂಬುವುದು
ನಂಬಲೊಡನೆ ನೀ ವಿಜಯಿ ಕಂಡಣ್ಣಾ!

★ ನಂಬಬಲ್ಲ ಭಕ್ತಂಗೆ ದೇವನೊಬ್ಬ ಕಾಣಿರೋ

★ ಇಬ್ಬರು-ಮೂವರು ದೇವರೆಂದು ಉಬ್ಬುಬ್ಬಿ ಮಾತನಾಡಬೇಡ

★ ನಂಬಿ ಕರೆದಡೆ ಓ ಎನ್ನನೇ ಶಿವನು ?

★ ದೇವನೊಬ್ಬ ನಾಮಹಲವು

ಇಂಥ ಏಕದೇವನಿಷ್ಠೆ ಕುರಿತ ಹಲವಾರು ವಚನಗಳು ಸಿಗುತ್ತವೆ. ಪರಮ ಪತಿವ್ರತೆಯಾದ ಹೆಂಡತಿಯೊಬ್ಬಳು ತನ್ನ ಪಾಲಿಗೆ ಸರ್ವಸ್ವವೂ ಆಗಿರುವ ಗಂಡನನ್ನು ನಂಬಿದಂತೆ ಸದ್ಭಕ್ತನು ಸರ್ವಶಕ್ತನಾದ ದೇವನನ್ನು ದೃಢವಾಗಿ ನಂಬಿ ಆರಾಧಿಸಬೇಕು ಎನುತ್ತಾರೆ ಅಪ್ಪನವರು. ಹೀಗೆ ನಂಬುವುದರಿಂದ ಆಗುವ ಪ್ರಯೋಜನವೇನು ಎಂದು ಕೇಳಿದರೆ ಅದಕ್ಕೂ ಧರ್ಮಪಿತರ ಬಳಿ ಉತ್ತರವಿದೆ. ಅಂಥ ಭಕ್ತನು ಹೇಗಿರುತ್ತಾನೆಂದರೆ :

ನಿಷ್ಠೆಯಿಂದ ಲಿಂಗವ ಪೂಜಿಸಿ
ಮತ್ತೊಂದು ಪಥವನರಿಯದ ಶರಣರು
ಸರ್ಪನ ಹೆಡೆಯ ಮಾಣಿಕ್ಯದಂತಿಪ್ಪರು ಭೂಷಣರಾಗಿ !

ಸರ್ವವ್ಯಾಪಿಯೂ, ಆಪದ್ಬಾಂಧವ ಆದ ದೇವರು ದೂರದಲ್ಲಿ ಬೇರೆ ಯಾವುದೋ

ಲೋಕದಲ್ಲಿ, ಗುಡಿಗುಂಡಾರಗಳಲ್ಲಿ, ತೀರ್ಥ ಕ್ಷೇತ್ರಗಳಲ್ಲಿ ಇಲ್ಲ. ನನ್ನ ಸಮೀಪವೇ ಇದ್ದಾನೆ ಎಂದರಿತು ನಂಬಿದ ಶರಣನು ಅಸತ್ಯ, ಅಂಧಕಾರ, ಅಜ್ಞಾನದ ಪರಿಸರವೆಂಬ ವಿಷವೃತ್ತದ ನಡುವೆಯೂ ಮಾಣಿಕ್ಯದಂತೆ ತನ್ನತನವನ್ನು ಕಳೆದುಕೊಳ್ಳದೇ ಬೆಳಕಾಗುವಂತೆ ಬದುಕಿ ಕೀರ್ತಿಶಾಲಿಯಾಗುತ್ತಾನೆ. ಬದಲಿಗೆ ಇಂಥ ದೇವನನ್ನು ಅರಿಯದ, ನಂಬಲು ಅಶಕ್ತನಾದ ಭಕ್ತನೂ ತನ್ನ ಆಯುಷ್ಯ, ಹಣ, ಶಕ್ತಿ, ಶ್ರಮ, ಸಮಯ, ಎಲ್ಲವನ್ನು ವ್ಯರ್ಥಗೊಳಿಸುತ್ತಾ ದೇವರು, ಮನಶ್ಶಾಂತಿಯ ಹುಡುಕಾಟದಲ್ಲಿ, ಬಳಲುತ್ತಾ ಬದುಕುವ ಮೂಢಭಕ್ತ ಹೇಗಿರುತ್ತಾನೆ ಎಂದು ಇಲ್ಲಿ ನೋಡಿರಿ. ಅಯ್ಯೋ ಪಾಪ !!

ಕಪ್ಪೆ ಸರ್ಪನ ನೆರಳಲ್ಲಿಪ್ಪಂತೆನಗಾಯಿತ್ತಯ್ಯ
ಅಕಟಕಟಾ! ಸಂಸಾರ ವೃಥಾ ಹೋಯಿತ್ತಲ್ಲಾ

ಎಂಬಂತಿರುತ್ತಾನೆ. ಸರ್ಪದ ಹೆಡೆಯ ನೆರಳಲ್ಲಿ ದಣಿವಾರಿಸಿ ಕೊಳ್ಳುತ್ತಿರುವ ಪೆದ್ದುಕಪ್ಪೆಯಂತೆ ಯಾವ ಕ್ಷಣದಲ್ಲಾದರೂ ಮೃತ್ಯುವಶನಾಗುತ್ತಾನೆ - ನಾಮವಶೇಷವಾಗುತ್ತಾನೆ. ಶರಣರೇ ಈಗ ನೀವೇ ಹೇಳಿರಿ, ಸರ್ಪನ ಹೆಡೆಯ ಮಾಣಿಕ್ಯದಂತೆ ಶೋಭಿಸುತ್ತಿರುವ ಶರಣ ಶ್ರೇಷ್ಠನೋ?! ಅಥವಾ ಸರ್ಪನ ಬಾಯ ಕಪ್ಪೆಯಂತೆ ಶೋಕಿಸುತ್ತಿರುವ ಮೂಢ ಭಕ್ತ ಶ್ರೇಷ್ಠನೋ? ಎಂದು.

ಮುಂದೆ ಹೇಳುತ್ತಾರೆ 'ಜಂಗಮಕ್ಕೆ ಧನವ ಸವೆಸುವಾತ ಜಾಣ' ಎಂದು ಹೀಗೆ ಹೇಳಿದಾಗ, ಶ್ರೀಮಂತ-ಬಡವ ಎಂಬ ತಾರತಮ್ಯ ಇಲ್ಲಿ ಕಂಡುಬರದೆ ಇಬ್ಬರಿಗೂ ಹಿತೋಪದೇಶವಿದೆ. ಏಕೆಂದರೆ ಇಬ್ಬರ ಬಳಿಯೂ ಹಣವಿರುತ್ತದೆ. ಬಡವ ಕಷ್ಟಪಟ್ಟು ಬೆವರು ಸುರಿಸಿ ದುಡಿದರೆ, ಶ್ರೀಮಂತ ಬುದ್ಧಿ - ಪ್ರತಿಭೆಗಳಿಂದ ಸಂಪಾದಿಸಿರುತ್ತಾನೆ. ಇಲ್ಲಿ ಜಂಗಮಕ್ಕೆ ಧನವನ್ನು ಸವೆಸಬೇಕು ಎನ್ನುವಾಗ ಸಮಾಜ ಸೇವೆಗಾಗಿ ಹಣವನ್ನು ವ್ಯಯಿಸುವುದು ಎಂದು ಅರ್ಥೈಸಿದರೆ ಸಾಕಷ್ಟು ಎದ್ದು ನಿಂತಾರು. ಏಕೆಂದರೆ ಎಷ್ಟೋ ಜನ ಪ್ರಚಾರಪ್ರಿಯರು, ಕೀರ್ತಿಶನಿಯ ಬೆನ್ನು ಹತ್ತಿದವರು, ಮುಗ್ಧ ಜನರನ್ನು ಶೋಷಿಸುತ್ತಾ, ಮಾನವೀಯ ಮುಖವಾಡ ಹಾಕಿಕೊಂಡು, ಸಮಾಜದ ಮೆಚ್ಚುಗೆಗಾಗಿ ನಾನಾ ರೀತಿಯ ಸೇವೆಗಳನ್ನು ಪ್ರದರ್ಶಿಸುತ್ತಾ, ತೆರಿಗೆಗಳ್ಳರಾಗಿ ಜನಾರ್ಧನ ಸೇವೆ ಮಾಡುತ್ತಿರುವ ಸಾಕಷ್ಟು ಜನ ಸಮಾಜದಲ್ಲಿ ಕಂಡು ಬರುತ್ತಾರೆ. ಆದರೆ ಈ ವಚನ ಇಂಥವರನ್ನು ಒಪ್ಪುವುದಿಲ್ಲ. ಸತ್ಯಶುದ್ಧ ಕಾಯಕದಿಂದ ದುಡಿದು, ಸಮಾಜದ ನಡುವೆ ಬದುಕುತ್ತಿರುವ ಪ್ರತಿಯೊಬ್ಬರು ತಮ್ಮ ದುಡಿಮೆಯ ಒಂದು ಪಾಲನ್ನು ಸಮಾಜದ ಋಣ ತೀರಿಸಬೇಕೆಂಬ ಕರ್ತವ್ಯದಿಂದ ಕಡ್ಡಾಯವಾಗಿ ಜನಹಿತ ಕಾರ್ಯಗಳಿಗೆ, ಧರ್ಮಪ್ರಚಾರಕ್ಕೆ ಮೀಸಲಿಡಬೇಕು ಎನ್ನುತ್ತಿದೆ ಬಸವಶಾಸನ.

ಸಮಷ್ಟಿಯ ಹಿತದಲ್ಲಿ ಸಹಜವಾಗಿ ವ್ಯಕ್ತಿಯ ಸುಖ ಅಡಗಿರುತ್ತದೆ. ಆದರೆ ವ್ಯಕ್ತಿಯ ಸುಖದಲ್ಲಿ ಸಮಷ್ಟಿಯ ಹಿತ ಇರುವುದಿಲ್ಲ ಎಂಬುದನ್ನು ಅರಿತು ಆಚರಿಸಬೇಕು. ಗಳಿಕೆಯಷ್ಟೇ ಬಳಕೆಯೂ ಮುಖ್ಯ. ಇಲ್ಲದಿದ್ದರೆ ರಾಷ್ಟ್ರದ ಆರ್ಥಿಕ ಸಮತೋಲನ ತಪ್ಪುತ್ತದೆ. ಅರ್ಥಶಾಸ್ತ್ರದ ಒಂದು ಸೂಕ್ತಿ ಹೇಳುತ್ತದೆ. ಮಾನವನಿಗೆ ಚೆನ್ನಾಗಿ ಸಂಪಾದಿಸುವುದು

ಗೊತ್ತಿದೆ. ಆದರೆ ಬಳಸುವುದು ಗೊತ್ತಿಲ್ಲ ಎಂದು. ಆಡಂಬರ, ವೈಭವ ಪ್ರದರ್ಶನ, ಸ್ವಾರ್ಥಲಾಲಸೆ, ದುಶ್ಚಟ, ಅನಗತ್ಯ ವೆಚ್ಚಗಳಿಗೆ ಹಣವನ್ನು ವ್ಯರ್ಥಗೊಳಿಸದೆ, ಸಂಗ್ರಹಿಸಿ ಜಡವಾಗಿಸದೆ, ಬಚ್ಚಿಟ್ಟು ಪರರ ಪಾಲು ಮಾಡದೆ ಸತ್ಕಾರ್ಯಕ್ಕೆ ಸತ್ಪಾತ್ರಕ್ಕೆ ಸಲ್ಲಿಸುವ ದಾಸೋಹ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು. ಆದ್ದರಿಂದ ಜ್ಞಾನಿಯಾದವನ ಬಳಿ ಹಣವಿದ್ದರೆ ಮಾತ್ರ ಅದು ಸತ್ಕಾರ್ಯಕ್ಕೆ ಸಲ್ಲುತ್ತದೆ. ಇಲ್ಲದಿದ್ದರೆ ಪಾಪಿಯ ಧನ ಪ್ರಾಯಶ್ಚಿತ್ತಕ್ಕೆ ಎಂಬಂತೆ ಕಳ್ಳಕಾಕರಿಗೆ, ಲಂಚಕ್ಕೆ, ತಪ್ಪುದಂಡ ಕೊಡಲು, ಬಂಧುಬಳಗದವರ ತೃಪ್ತಿಗೆ ವಿನಿಯೋಗವಾಗುತ್ತದೆ. ಇದನ್ನರಿತೇ ಪೂಜ್ಯ ಶ್ರೀ ಲಿಂಗಾನಂದ ಅಪ್ಪಾಜಿಯವರು ಭಕ್ತರಿಗೆ ಬೋಧಿಸುತ್ತಿದ್ದರು. "ಜ್ಞಾನ ಸಂಪನ್ನತೆಯಿಲ್ಲದೆ ಬೇರೆ ಯಾವ ಸಂಪತ್ತೇ ಇದ್ದರೂ ಅಂಥವರು ಬೇರೆ ಬೇರೆಯದಕ್ಕೆ ಈಡಾಗುತ್ತಾರೆಯೇ ವಿನಾ ದೇವನಿಗಲ್ಲ. ಅಥವ ದೇವನ ಮುಖವಾದ ಸಮಾಜಕ್ಕಲ್ಲ. ಜ್ಞಾನವಿಲ್ಲದೆ ಗಳಿಸಿದ ಸಂಪತ್ತಿನಿಂದ ಅಹಂಕಾರ ಬರುತ್ತದೆ. ಅದು ವಿನಾಶಕ್ಕೆ ಕಾರಣವಾಗುತ್ತದೆ. ಜ್ಞಾನಿಯಾದವನ ಬಳಿ ಹಣವಿದ್ದರೆ ಅದು ರಾಜರ ಸರಕಾರದ ಸೊತ್ತಾಗದೆ ಸಮಾಜಕ್ಕೆ ಜನ ಸಾಮಾನ್ಯರಿಗೆ ಜನಹಿತ ಕಾರ್ಯಗಳಿಗೆ ಸಂಪೂರ್ಣವಾಗಿ ಉಪಯೋಗವಾಗುತ್ತದೆ. ಇದರಿಂದ ಇಹದಲ್ಲಿ ಸತ್ಕೀರ್ತಿ, ಪರದಲ್ಲಿ ಮುಕ್ತಿ ಲಭಿಸಿ ಜೀವನ ಸಾರ್ಥಕವಾಗುತ್ತದೆ" ಎಂದು. ಈ ಕಾರಣಕ್ಕಾಗಿಯೇ ಪೂಜ್ಯ ಶ್ರೀ ಬಸವಾತ್ಮಜೆಯವರು ಬೋಧಿಸುತ್ತಾರೆ. ನೀವು ಲಕ್ಷ್ಮೀಪತಿಯರಾಗಬೇಡಿರಿ, ಲಕ್ಷ್ಮೀಪುತ್ರರಾಗಿರಿ ಎಂದು. ಹೀಗೆ ಗಳಿಕೆ - ಬಳಕೆ ಎರಡೂ ಶುದ್ಧವಾಗಿರಬೇಕು ಎಂದು ಬೋಧಿಸಿ ಬಸವಣ್ಣನವರು ಹಣಕ್ಕೂ ಗೌರವ ತಂದುಕೊಟ್ಟರು.

ಈಗ ಧನದಾಸೋಹಿಯ ಹಿಂದೆ ಯಾರು ನಿಂತಿದ್ದಾರೆ ಎಂದು ನೋಡೋಣ. 'ಜವನ ಬಾಯಲು ಬಾಲವ ಕೊಯ್ದು ಹೋದಾತ' ಎಂಬ ಜಾಣ ನಿಂತಿದ್ದಾನೆ. ಶರಣರೇ ಇಲ್ಲಿ ಇವನನ್ನು ಅರಿತುಕೊಳ್ಳುವ ಮೊದಲು ನಿಮಗೊಂದು ವಿಷಯ ಹೇಳಬೇಕು. ಅದೇನೆಂದರೆ ಶಾಲಾಕಾಲೇಜುಗಳಲ್ಲಿ ಓದುವಾಗ, ನಮಗೆಂದೇ ಮೀಸಲಾಗಿರುವ ಪಠ್ಯಪುಸ್ತಕಗಳನ್ನು ಓದಿ, ಅರ್ಥವಾಗದಿರುವುದನ್ನು ಶಿಕ್ಷಕರಿಂದ ಕೇಳಿ ತಿಳಿದುಕೊಂಡು, ಪರೀಕ್ಷೆಗಳಲ್ಲಿ ಚನ್ನಾಗಿ ಬರೆದು ಹೆಚ್ಚು ಅಂಕ ಗಳಿಸಿ, ಪ್ರಥಮ ಶ್ರೇಣಿಗಳಲ್ಲಿ ಪಾಸಾಗುವುದು ಬಹು ಸುಲಭ. ಆದರೆ ಜೀವನವೆಂಬ ಹೋರಾಟದ ಬದುಕಿನಲ್ಲಿ ಯಾವ ಕ್ಷಣದಲ್ಲಾದರು ಬಂದೆರಗುವ ಕಷ್ಟನಷ್ಟಗಳು, ದೈಹಿಕ ಮಾನಸಿಕ ಆಘಾತಗಳು, ನಮ್ಮನ್ನು ಮೇಲೇಳಲಾರದಂತೆ ತುಳಿಯಲು ಸದಾ ಹವಣಿಸುತ್ತಿರುವ ಒಳ ಹೊರಗಿನ ದುಷ್ಟಶಕ್ತಿಗಳು, ದುರ್ಬಲತೆಗಳಿಂದ ಪಾರಾಗಲು, ಧೈರ್ಯದಿಂದ ಎದುರಿಸುವುದನ್ನು ಹೇಳಿಕೊಡುವ ಪಠ್ಯಪುಸ್ತಕಗಳು ಇವೆಯೇ ? ಕಲಿಸುವ ಶಿಕ್ಷಕರು ಇದ್ದಾರೆಯೇ ? ಇಲ್ಲ! ಈ ಕೊರತೆಯನ್ನರಿತೇ ಈ ವಚನ ನಮಗೆ ಧೈರ್ಯ ತುಂಬುತ್ತದೆ. ಸತ್ತ ಮೀನಾಗಿ ಕಾಲನೊಂದಿಗೆ ರಾಜಿ ಮಾಡಿಕೊಂಡು, ಪ್ರವಾಹದ ಗುಂಟ ತೇಲಿಕೊಂಡು ಹೋಗಿ ದಡ ಸೇರುವುದು ಅದಕ್ಕೆ ಬೇಕಾಗಿಲ್ಲ. ಬದಲಿಗೆ ಜೀವಂತ ಮೀನಾಗಿ ಪ್ರವಾಹದ ವಿರುದ್ಧ ಈಜಿಕೊಂಡು ಗುರಿ ಮುಟ್ಟಲು ಇಷ್ಟಪಡುತ್ತಿದೆ. ನಮಗೂ ಅದನ್ನೇ ಕಲಿಸುತ್ತದೆ. ಶರಣರೇ, ತಮಗೊಂದು ವಿಷಯ ಗೊತ್ತಿದೆಯೆ ?! ಅದೇನೆಂದರೆ ದೊಡ್ಡದೊಡ್ಡ ಸಮಾರಂಭಗಳಲ್ಲಿ ಕಾರ್ಯಕ್ರಮಗಳನ್ನು ಉದ್ಘಾಟಿಸಲೆಂದು ಟೇಪು ಕತ್ತರಿಸುತ್ತಾರಲ್ಲ, ಬಾಲವ ಕೊಯ್ವ ಅಂಥ

ಗಣ್ಯವ್ಯಕ್ತಿಗಳನ್ನು ಜಾಣರು ಎಂದು ಇದು ಭಾವಿಸಿಲ್ಲ. ಹಾಗಾದರೆ ಇಲ್ಲಿ ಯಾರು ಜಾಣರು?! ಜವ ಎಂದರೆ ಯಮ, ಕಾಲ, ಸಾವು - ಯಾವ ಹೆಸರಿನಿಂದ ಬೇಕಾದರೂ ಕರೆಯಿರಿ. ಬಾಯಲು ಬಾಲವ ಕೊಯ್ದು ಹೋಗುವುದು ಎಂದರೆ ಸಾವನ್ನು ಗೆಲ್ಲುವುದು, ಸಾವಿಗೆ ಹೆದರದಿರುವುದು ಎಂದರ್ಥ. ಹುಟ್ಟಿದ ಪ್ರತಿಯೊಂದು ಜೀವಿಗೂ ಸಾವು ಖಚಿತ. ಎಂಬುದು ನಿತ್ಯಸತ್ಯ-ಅನುಭವ ವೇದ್ಯ. ಸಾವು ಬೇಡ ಎಂದು ಪ್ರಾಣಕ್ಕೆ ಹೆದರಿ ಜೀವಗಳ್ಳರಾಗಿ ತಪ್ಪಿಸಿಕೊಳ್ಳಲು ಬರುವುದಿಲ್ಲ. ಹಾಗೆಂದು ಸಾವಿಗೂ ಅಂಜಬೇಕಾಗಿಲ್ಲ. ಬರುವುದೆಲ್ಲ ಬರಲಿ ಪರಮಾತ್ಮನ ದಯೆ ಒಂದಿರಲಿ ಎಂದು ಕಾಲನಿಗೆ ಹೆದರದೆ ಬದುಕಲು ಕಲಿಯಬೇಕು. ಮಿತ್ರನಾದ ಸಾವು ಸಹಜವಾಗಿ ತಾನಾಗಿ ಬಂದರೆ ಸ್ವೀಕರಿಸಲು ಸದಾ ಸಿದ್ಧನಾಗಿರಬೇಕು. ಸಂತೋಷದಿಂದ ಸ್ವಾಗತಿಸುವ ನಿರ್ಭೀತ ಮನಸ್ಥಿತಿ ಪಡೆದಿರಬೇಕು.

ಆದರೆ ಇತ್ತೀಚೆಗೆ ನಾವು ದಿನ ಪತ್ರಿಕೆಗಳಲ್ಲಿ ಓದುತ್ತೇವೆ, ಕೇಳುತ್ತೇವೆ. ಮುಂದಿನ ಭವಿಷ್ಯವನ್ನು ಎದುರಿಸಲಾರದೆ ದುರ್ಬಲ ಮನಸ್ಸಿನವರು, ಮಹಿಳೆಯರು, ಯುವಕರು, ರೈತರು ವಿದ್ಯಾರ್ಥಿಗಳು, ಪ್ರೇಮಿಗಳು ಆತ್ಮಹತ್ಯೆ (ದೇಹಹತ್ಯೆ ?) ಮಾಡಿಕೊಳ್ಳುತ್ತಿದ್ದಾರೆ ಎಂದು, ಇತ್ತೀಚಿನ ವರದಿಯೊಂದರ ಪ್ರಕಾರ ಮಹಾನಗರ ಎಂದು ಹೆಸರಾಗಿರುವ ಬೆಂಗಳೂರು ಆತ್ಮಹತ್ಯೆಗಳ ರಾಜಧಾನಿ ಎಂದು ಖ್ಯಾತಿವೆತ್ತಿದೆಯಂತೆ. ಅದರಲ್ಲೂ ಯುವಕರದೇ ಮೇಲುಗೈ ಯಂತೆ. ಈ ಬಗ್ಗೆ ಸಮಾಜ ಸುಧಾರಕರು ಕಳವಳಗೊಂಡಿದ್ದಾರಂತೆ. ಏಕೆ ಹೀಗಾಗುತ್ತಿದೆ ? ಮುಂದೆ ಬರಲಿರುವ, ಬರದೇ ಇರಬಹುದಾದ ದುಃಸ್ಥಿತಿಗಳನ್ನು ಕಡುಕಷ್ಟಗಳನ್ನು, ಅವಮಾನವನ್ನು ಸಹಿಸಲಾರದೆ, ಮಾನಸಿಕವಾಗಿ ಚಿತ್ರಹಿಂಸೆ ಅನುಭವಿಸುತ್ತಾ ಹೆದರಿಕೊಂಡು ನಾನಾ ರೀತಿಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವುದು ಆರೋಗ್ಯಕರ ಬೆಳವಣಿಗೆಯಲ್ಲ. ಸತ್ಸಂಗ, ಆಧ್ಯಾತ್ಮಿಕ ಶಿಕ್ಷಣ ಮತ್ತು ತರಬೇತಿಯ ಕೊರತೆಯೇ ಇಂಥ ದುರಂತಗಳನ್ನು ಸೃಷ್ಟಿಸುತ್ತವೆ ಎಂಬುದು ಗಮನಾರ್ಹ. ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರ ವೀರವಾಣಿಯನ್ನು ನೆನೆಯೋಣ "ಮೃತ್ಯುಪ್ರೇಮ ಎಂದರೆ ಕೊಂದು ಕೊಳ್ಳುವುದಲ್ಲ; ಕೊಂದು ಕೊಳ್ಳುವವನು ಮೃತ್ಯುಪ್ರೇಮಿಯಲ್ಲ. ಅವನು ಜೀವನ ದ್ವೇಷಿ, ಅದೂ ಕೂಡ ತಾತ್ಕಾಲಿಕವಾದುದು. ಎಂದಿದ್ದರೂ ಸಾಯುತ್ತೇವೆ, ಮಹಾಕಾರ್ಯದಲ್ಲಿ ಸತ್ತರೆ ಲೇಸು "

ಹೀಗೆ ಸಾವಿನ ಬಗ್ಗೆ ಧೈರ್ಯ - ಪ್ರೇಮ ತುಂಬುವ ಬದಲು ಭೀತಿ-ಭ್ರಾಂತಿ ತುಂಬುವ ಗುರುಗಳು ಇದ್ದಾರೆ ಎಂಬುದನ್ನು ನಿಮಗೆ ತೋರಿಸುತ್ತೇನೆ ಇಲ್ಲಿನೋಡಿ.

ಒಮ್ಮೆ ಶ್ರೀಮಂತ ಭಕ್ತನೊಬ್ಬ, ಗುರುಗಳನ್ನು ಪಾದಪೂಜೆಗೆಂದು ತನ್ನ ಬಂಗಲೆಗೆ ಆಹ್ವಾನಿಸಿದ. ಪಾದ ಪೂಜೆಯ ನಂತರ ಆ ಭಕ್ತ ಅತ್ಯಂತ ಭಯಭಕ್ತಿಗಳಿಂದ ತನ್ನಲ್ಲಿದ್ದ ಆಟೋಗ್ರಾಫನ್ನು ನೀಡಿ ಆಶೀರ್ವಾದ ಬರೆದುಕೊಡಬೇಕೆಂದು ವಿನಂತಿಸಿದ. ಸರಿ, ಅದರಂತೆ ಗುರುಗಳು ಬರೆದು ಸಹಿ ಮಾಡಿ ಹಿಂದಿರುಗಿಸಿದರು. ಭಕ್ತ ಅದನ್ನು ನೋಡಿ ಹೌಹಾರಿಬಿಟ್ಟ!! ಏಕೆಂದರೆ ಗುರುಗಳು ಅದರಲ್ಲಿ ಹೀಗೆ ಬರೆದಿದ್ದರು.

ಮೊದಲು ನಿಮ್ಮ ಅಪ್ಪ ಸಾಯುತ್ತಾನೆ

ಆಮೇಲೆ ನೀನು ಸಾಯುವೆ
ನಂತರ ನಿನ್ನ ಮಗ ಸಾಯುತ್ತಾನೆ
ತದನಂತರ ನಿನ್ನ ಮೊಮ್ಮಗ ಸಾಯುತ್ತಾನೆ.

ಎಂದಿತ್ತು. ಇದೇನು ವರವೋ, ಶಾಪವೋ, ಭವಿಷ್ಯವೋ, ಆಶೀರ್ವಾದವೋ ಅರ್ಥವಾಗದೆ ನಡುಗುತ್ತಾ ಪ್ರಶ್ನಿಸಿದ ಇದೇನು ಪೂಜ್ಯರೇ! ನಾವೆಲ್ಲರು ಸಾಯುತ್ತೇವೆಯೆ? ಗುರುಗಳೆಂದರು "ಹೌದು, ಎಲ್ಲರೂ ಒಂದಲ್ಲ ಒಂದು ದಿನ ಸಾಯಲೇಬೇಕು ಆದರೆ ಯಾರ ಮನೆಯಲ್ಲಿ ಧರ್ಮ ನೆಲೆಸಿರುತ್ತದೋ, ಆ ಮನೆಯಲ್ಲಿ ಮಾತ್ರ ಕ್ರಮಬದ್ಧವಾದ ಸಾವುಗಳು ಉಂಟಾಗುತ್ತವೆ ಎಂದು ಶಾಸ್ತ್ರಗಳು ಹೇಳುತ್ತವೆ" ಈ ಮಾತಿಗೆ ಚಕಿತನಾದ ಭಕ್ತ ಮತ್ತೆ ಕೇಳಿದ "ಗುರುಗಳೇ, ಹಾಗಾದರೆ ನನ್ನ ಮಗನೋರ್ವ ಕಳೆದ ಯುದ್ಧ ಕಾಲದಲ್ಲಿ ವೀರಮರಣವನ್ನಪ್ಪಿದನಲ್ಲ. ಅದು ಹೇಗೆ ?" ಗುರುಗಳೆಂದರು, "ಅದು ಅಮಂಗಲ, ಎಲ್ಲೋ ಧರ್ಮದಲ್ಲಿ ಆಚರಣೆಯಲ್ಲಿ ಲೋಪವಾಗಿದೆ. ಇಲ್ಲದಿದ್ದರೆ ಅವನು ಹೇಗಾದರೂ ಪಾರಾಗುತ್ತಿದ್ದ. ಆಗಲಿ ಚಿಂತೆಯಿಲ್ಲ. ನೀವೀಗ ಸತ್ತಮಗನ ಹೆಸರಿನಲ್ಲಿ ಶಾಂತಿ ಮಾಡಿಸಿ, ಆತನ ಪ್ರತಿರೂಪವಾಗಿ 3 ಇಂಚಿನ ಚಿನ್ನದ ಪ್ರತಿಮೆಯನ್ನು (ಸನ್ನೆ ಮಾಡಿ ತಮ್ಮ ಕಡೆಗೆ ತೋರಿಸುತ್ತಾ) ದಾನ ಕೊಡಬೇಕು. ಆನಂತರ ಮುಂದೆ ಎಲ್ಲವೂ ಒಳ್ಳೆಯದಾಗುತ್ತದೆ." ಎಂದು ಹೇಳಿ ಭಕ್ಷ್ಯಭೋಜನಗಳನ್ನು ಸವಿದು, ಫಲ ಪುಷ್ಪಕಾಣಿಕೆಗಳನ್ನು ಪಡೆದು, ಇನ್ನು 2-3 ತಲೆಮಾರಿನವರೆಗೂ ಚಿಂತೆಯಿಲ್ಲ ಎಂದು ಮನಸ್ಸಿನಲ್ಲೇ ಲೆಕ್ಕಮಾಡುತ್ತಾ ಆ ಪೂಜ್ಯರು ನಿರ್ಗಮಿಸಿದರು.

ಆದರೆ ಬಸವಧರ್ಮವು ತಮ್ಮ ಅನುಯಾಯಿಗಳಿಗೆ ಎಲ್ಲಿಯೂ ಜೀವನವನ್ನು ಭೀತಿಯಿಂದ ನೋಡಲು, ದ್ವೇಷಿಸಲು ಹೇಳಿಲ್ಲ, ಕಲಿಸಿಲ್ಲ, ಬೋಧಿಸಿಲ್ಲ, ಬದಲಿಗೆ ಪ್ರೀತಿಸಲು ಧೈರ್ಯವಾಗಿ ಎದುರಿಸಲು ಕಲಿಸುತ್ತದೆ. ಬೋಧಿಸುತ್ತದೆ. ಮಹತ್ತಾದುದನ್ನು ಸಾಧಿಸಿ ತೋರಿಸುವಂತೆ ಶಕ್ತಿ ತುಂಬುತ್ತದೆ. ಈ ಕಾರಣಕ್ಕಾಗಿಯೇ ಪ್ರಭುದೇವರು, "ಗುಹೇಶ್ವರಾ, ನಿಮ್ಮ ಶರಣ ಸಂಗನ ಬಸವಣ್ಣನ ಮೊರೆಯ ಹೊಕ್ಕು ನಾನು ಬದುಕಿದೆನು" ಎಂದು ಕೃತಜ್ಞತೆಯಿಂದ ತಲೆಬಾಗುತ್ತಾರೆ. ಸತ್ಯಪಥದಲ್ಲಿ ನಡೆಯಬೇಕೆನ್ನುವವರಿಗೆ ಅದು ಹೇಳುತ್ತದೆ.

"ಹೆದರದಿರು ಮನವೇ, ಬೆದರದಿರು ತನುವೇ
ನಿಜವನರಿದು ನಿಶ್ಚಿಂತವಾಗಿರು" ಎಂದು

ಮನುಷ್ಯನಿಗೆ ಬರದೆ, ಮರಕ್ಕೆ ಬರುವುದೇ ? ಎಂಬುದು ಗಾದೆ ಮಾತು. ಅದರಂತೆ ಕಷ್ಟಗಳಿಗೆ ಹೆದರಿಕೊಂಡು ಪಲಾಯನವಾದಿಗಳಾಗಿ ಹೇಡಿಗಳಾಗಬಾರದು. ಸವಾಲುಗಳನ್ನು ಸ್ವೀಕರಿಸುವ ಎದೆಗಾರಿಕೆ ಬೆಳೆಸಿಕೊಳ್ಳಬೇಕು. ಅಲ್ಲದೆ ನಮ್ಮ ಬಸವಣ್ಣನವರ ದೇವರು ಹೇಗಿದ್ದಾನೆ ಎಂದು ನೋಡಿರಿ.

ಹಾವು ಕಿಚ್ಚ ಮುಟ್ಟಿಹ ಶಿಶುವೆಂದು
ಹೆತ್ತ ತಾಯಿ ಮಗನ ಬೆಂಬತ್ತಿ ಬಪ್ಪಂತೆ
ಇಪ್ಪೆಯಯ್ಯಾ ಎನ್ನೊಡನೆ ಲಿಂಗದೇವ.

ಇಷ್ಟೆಲ್ಲ ಧನಾತ್ಮಕ ಅಂಶಗಳು ಇದ್ದರೆ ಮಾತ್ರ ಅವನು ಸೃಷ್ಟಿಕರ್ತ ಲಿಂಗದೇವನ ಶರಣನಾಗಲು ಯೋಗ್ಯನಾಗುತ್ತಾನೆ. ತನ್ಮೂಲಕ ಧರ್ಮಕರ್ತ ಬಸವಣ್ಣನವರ ಮೆಚ್ಚುಗೆಗೂ ಪಾತ್ರನಾಗುತ್ತಾನೆ. ಜಾಣನೂ ಆಗುತ್ತಾನೆ ಎಂಬ ಗುಟ್ಟು ಈ ವಚನದಲ್ಲಿದೆ. ಹೀಗಾಗಲಿ ಎಂದೇ ಪೂಜ್ಯ ಶ್ರೀ ಮಾತೆ ಮಹಾದೇವಿ ತಾಯಿಯವರು ತಮ್ಮ ಬಳಿಗೆ ಬರುವ ಬಸವ ಭಕ್ತರಿಗೆ ಹೀಗೆ ಹೇಳುತ್ತಾರೆ. "ನೀವು ನಿಮ್ಮ ಮಕ್ಕಳನ್ನು ಚೆನ್ನಾಗಿ ಓದಿಸಿ, ಇಲ್ಲಿಗೂ (ಅನುಭವ ಗೋಷ್ಠಿಗೆ) ಕರೆತನ್ನಿರಿ. ನಾವು ಅವರ ವ್ಯಕ್ತಿತ್ವ ವಿಕಾಸಕ್ಕೆ ಬೇಕಾದ ಅಂತಿಮ ಸ್ಪರ್ಶ (Final touch)ವನ್ನು ನೀಡುತ್ತೇವೆ ಎಂದು. "ಶರಣ ಬಂಧುಗಳೇ, ಈಗ ನಿಮಗೆ ಬುದ್ಧಿವಂತಿಕೆಗೂ, ಅರಿವಿಗೂ ಇರುವ ಸೂಕ್ಷ್ಮ ವ್ಯತ್ಯಾಸ ಗೊತ್ತಾಗಿರಬೇಕಲ್ಲವೆ ? ಹಾಗಿದ್ದರೆ ಇನ್ನು ಮುಂದೆ ನೀವು ಜಾಣರೋ ? ದಡ್ಡರೋ ? ಅರಿವುಳ್ಳವರೋ ಎಂದು ತಿಳಿಯಲು ಈ ವಚನಗನ್ನಡಿಯ ಮುಂದೆ ನಿಂತು ನೋಡಿಕೊಳ್ಳಿರಿ, ಪರೀಕ್ಷಿಸಿ ಕೊಳ್ಳಿರಿ, ನಿರ್ಧರಿಸಿ ಕೊಳ್ಳಿರಿ, ಓರೆ ಕೋರೆಗಳನ್ನು ತಿದ್ದಿ ಸರಿ ಪಡಿಸಿಕೊಳ್ಳಿರಿ.

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳವರ ಜಯಂತಿ ಉತ್ಸವ ಮತ್ತು ರಾಷ್ಟ್ರೀಯ ಬಸವದಳದ ಹುಟ್ಟುಹಬ್ಬ

ಅಪೂರ್ವ ವಾಗ್ಮಿ, ಪ್ರವಚನ ಪಿತಾಮಹ, ಕ್ರಾಂತಿಕಾರಿ ಧರ್ಮ ಪ್ರಚಾರಕ ಕೂಡಲಸಂಗಮದ ಬಸವಧರ್ಮಪೀಠದ ಪ್ರಥಮ ಪೀಠಾಧ್ಯಕ್ಷರಾದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳವರ 72ನೆಯ ಜಯಂತಿ ಉತ್ಸವವನ್ನು ಗಣೇಶ ಚೌತಿ ದಿ. 10-9-2002 ರಂದು ಆಚರಿಸಲಾಗುತ್ತದೆ. ಅಂದು ಕೂಡಲ ಸಂಗಮದ ಮಹಾಮನೆ ಮಹಾಮಠ, ಬಸವಕಲ್ಯಾಣದ ಬಸವ ಮಹಾಮನೆ, ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ವಿಶೇಷವಾಗಿ ಆಚರಿಸಲಾಗುತ್ತಿದೆ. ಬೆಂಗಳೂರಿನ ರಾಜಾಜಿನಗರದಲ್ಲಿರುವ ಬಸವ ಮಂಟಪದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಪೂಜ್ಯ ಗುರುಗಳ ಜಯಂತಿ ಉತ್ಸವವು ಸಂಜೆ 5 ಗಂಟೆಗೆ ನಡೆಯಲಿದೆ. ಅನೇಕ ಗಣ್ಯರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ

ಧರ್ಮಶ್ರದ್ಧೆ-ರಾಷ್ಟ್ರನಿಷ್ಠೆ ಎರಡೂ ಅತ್ಯವಶ್ಯಕ ಎಂಬ ವಿಚಾರವನ್ನು ಜನರಲ್ಲಿ ಬಿತ್ತುವುದೇ ಅಲ್ಲದೆ ಅಂಥ ಧೈರ್ಯವನ್ನುಳ್ಳ ಜನರನ್ನು ತರಬೇತಿಗೊಳಿಸಲು ರಾಷ್ಟ್ರೀಯ ಬಸವ ದಳ ಎಂಬ ಆದರ್ಶ ಸಂಘಟನೆಯ ಪರಿಕಲ್ಪನೆಯನ್ನು ಪೂಜ್ಯ ಗುರುಗಳು ನೀಡಿದರು. ತಮ್ಮ ಜಯಂತಿಯನ್ನು ವ್ಯಕ್ತಿಪೂಜೆಗಾಗಿ ಇಡದೆ ತತ್ತ್ವಪ್ರಚಾರಕ್ಕಾಗಿ ಬಳಸಿಕೊಳ್ಳಬೇಕೆಂದು ಕರೆ ನೀಡಿದರು. ಆದ್ದರಿಂದ ಗಣೇಶ ಚೌತಿಯಂದು ಎಲ್ಲಾ ರಾಷ್ಟ್ರೀಯ ಬಸವದಳದವರು ಸಂಘಟನೆಯ ಹುಟ್ಟುಹಬ್ಬವನ್ನು ಪೂಜ್ಯ ಅಪ್ಪಾಜಿಯವರ ಜಯಂತಿಯೊಡನೆ ವಿಶೇಷವಾಗಿ ಆಚರಿಸಬೇಕೆಂದು ಕೋರುತ್ತೇವೆ.

ಶರಣ. ವೀರಣ್ಣ ಕೊಲ್ಹಾಳ್ಳಿ
ಅಧ್ಯಕ್ಷರು, ಕರ್ನಾಟಕ ರಾಜ್ಯ ರಾಷ್ಟ್ರೀಯ ಬಸವ ದಳ

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

86666

ಲಿಂಗಾಯತ ಸಮಾಜದ ಭವಿಷ್ಯವೇನು ?

ಪುಣೆ-44

ದಿನಾಂಕ 25-7-2002

ಪರಮ ಪೂಜ್ಯ ಮಾತಾಜಿಯವರ ಕಮಲ ಚರಣಗಳಿಗೆ ಶಿರ ಸಾಷ್ಟಾಂಗ ವಂದನೆಗಳು.

ವಿಷಯ : ಸಮಸ್ಯೆ ? ಸಮಾಧಾನ : ಲಿಂಗಾಯತ ಧರ್ಮದಲ್ಲಿಯ ಒಳಪಂಗಡಗಳ ದ್ವಂದ್ವ

ಪ್ರತಿ ವರುಷ ಆಷಾಡ ಮಾಸದಲ್ಲಿ ದೇಹುಗಾಂವದಿಂದ ಸಂತ ತುಕಾರಾಮ ಮಹಾರಾಜರ ಹಾಗೂ ಆಳಂದಿಯಿಂದ ಸಂತ ಜ್ಞಾನೇಶ್ವರ ಮಹಾರಾಜರ ಪಾಲಕಿಗಳು ದಿನಾಂಕ 02-07-2002 ರಂದು ಹೊರಟು ದಿನಾಂಕ 19-07-2002 ರಂದು ಪಂಢರಾಪುರಕ್ಕೆ ತಲುಪಿದವು. ಪಾಲಕಿಗಳೊಂದಿಗಿನ ವಾರಕರಿ ಸಂಪ್ರದಾಯದ ಜನ ಸಮುದಾಯ ಕಂಡರೆ ಮನಸ್ಸಿಗೆ ಹರುಷ ಹಾಗೂ ನೆಮ್ಮದಿಯಾಗುತ್ತದೆ. ಇದರಿಂದಾಗಿ, ನಮ್ಮಂತಹವರಿಗೂ ಕೂಡಾ ಈ ಮಹಾತ್ಮರ ಬಗ್ಗೆ ಭಕ್ತಿ ಗೌರವ ಬೆಳೆದು ಬರುತ್ತದೆ. ಪಾಲಕಿಗಳು ದಾರಿಯಲ್ಲಿ ವಿಶಿಷ್ಟ ಸ್ಥಳಗಳಲ್ಲಿ ಇಳಿದುಕೊಳ್ಳಲು ನಿರ್ಧರಿಸಲಾಗುತ್ತದೆ. ಆಯಾ ಭಾಗದ ಭಕ್ತಾದಿಗಳು ಈ ಜನರಿಗೆ ಊಟದ ವ್ಯವಸ್ಥೆ ಮಾಡುತ್ತಾರೆ. ಇದರಲ್ಲಿ ಎಷ್ಟೊಂದು ಭಕ್ತಿಯು ಕಾಣಲು ಸಿಗುತ್ತದೆ. ಅಷ್ಟೇ ಅಲ್ಲದೆ, ಮಹಾರಾಷ್ಟ್ರದ ಮುಖ್ಯಮಂತ್ರಿಗಳಿಂದ ವಿಠಲ - ರುಕುಮಾಯಿ ಪೂಜೆ ನೆರವೇರುತ್ತದೆ. ಅಲ್ಲಿ ಭಕ್ತಿ ಹಾಗೂ ಸಮಾಜದಲ್ಲಿ ಏಕತೆ ಎದ್ದು ಕಾಣುತ್ತದೆ.

ಇನ್ನು ನಮ್ಮ ಲಿಂಗಾಯತ ಸಮಾಜದತ್ತ (ಕೆಲವರು ವೀರಶೈವ ಎಂದು ಕರೆಯುತ್ತಾರೆ) ನೋಡಿದರೆ ಜಿಗುಪ್ಸೆ ಮೂಡುತ್ತದೆ. ಯಾವುದೆ ಧಾರ್ಮಿಕ ಕಾರ್ಯಕ್ರಮವಿರಲಿ ಜನರಲ್ಲಿ ಆಸಕ್ತಿ ಇರುವುದಿಲ್ಲ. ಸಮಾಜದ ಜನರಲ್ಲಿ ಮತ್ಸರ, ಅಸೂಯೆ ಹಾಗೂ ದ್ವೇಷ ಹೆಚ್ಚಾಗಿ ಕಂಡು ಬರುತ್ತದೆ. ತಾವುಗಳು ಕಲ್ಯಾಣ ಪರ್ವ ಕಾರ್ಯಕ್ರಮ ದಿನಾಂಕ 1-5-2002 ರಿಂದ 3-5-2002 ಬಸವ ಕಲ್ಯಾಣದಲ್ಲಿ ಹಮ್ಮಿಕೊಂಡಿದ್ದಿರಿ. ಸಮಾಜದಲ್ಲಿ ಗಣ್ಯರೆನಿಸಿಕೊಂಡವರ ಸಹಕಾರ ದೂರವಿರಲಿ, 144 ನೆಯ ಕಲಮ್ ಜಾರಿಗೆ ತಂದು ಬಸವ ಕಲ್ಯಾಣಕ್ಕೆ ಜನ ಬರಬಾರದಂತೆ ಪ್ರಯತ್ನಿಸಿದರು. ಬಸವ ವಚನ ದೀಪ್ತಿಯನ್ನು ಮುಂದೆ ಮಾಡಿಕೊಂಡು ಇಲ್ಲದ ತ್ರಾಸು ಕೊಟ್ಟರು. ಹೊಡೀತೇವೆ ಬಡಿಯುತ್ತೇವೆ, ಮುಗಿಸುತ್ತೇವೆ ಎಂಬ ಇವರ ಭಾಷೆಯನ್ನು ನೋಡಿದರೆ ಇವರಿಗೆ ಶರಣ ಸಂಸ್ಕೃತಿಯ ಅರಿವು ಎಳ್ಳಷ್ಟೂ ಇಲ್ಲ ಅಂತಾ ಕಾಣುತ್ತದೆ. ಶರಣ ದಿ॥ ರಾಮ ಜಾಧವ ಹೇಳುವಂತೆ ನಿಲ್ಲಿ ವೀರಶೈವವೋ ಅಲ್ಲಿ ಗೊಂದಲವೆ ಗೊಂದಲ. ಇಂಥ ಗೊಂದಲಗಳಿಗೆ ಕೆಳಗಿನ ಅಂಶಗಳನ್ನು ತಮ್ಮ ಮುಂದೆ ಇಡಬಯಸುತ್ತೇನೆ :-

1. ಅಖಿಲ ಭಾರತ ವೀರಶೈವ ಸಜ್ಜನ ಸಮಾಜದ 10 ನೆಯ ಅಧಿವೇಶನ ದಿನಾಂಕ 14-7-02 ರಂದು ಬೆಂಗಳೂರಿನ ಶ್ರೀ ಶಿವಾನಂದ ಸ್ಮಾರಕ ಆರ್.ವ್ಹಿ. ದಂತ ಮಹಾವಿದ್ಯಾಲಯದ ಸಭಾಂಗಣದಲ್ಲಿ ಜರುಗಿರುವುದು. ದಿನಾಂಕ 15-7-2002 ರ ಸಂಯುಕ್ತ ಕರ್ನಾಟಕ (ಗುಲಬರ್ಗಾ) ಪತ್ರಿಕೆಯ ವರದಿ.

2. ವೀರಶೈವ ಮಾಳಿ ಸಮಾಜದಲ್ಲಿ ನಿರುದ್ಯೋಗಿ ಪದವೀಧರರ ಸಂಖ್ಯೆಯನ್ನು ಸರ್ವೇ ಮಾಡಬೇಕೆಂದು ತೀರಗುಳ ಪ.ಪಂ. ಸದಸ್ಯ ಬಸವರಾಜ ಬಾಳಕಾಯಿ ಹೇಳಿದರು. ನ್ಯಾಯವಾದಿ ಎಚ್.ಎ. ಕಡದಿಟಿ ಮಾತನಾಡಿ ಸಮಾಜ ಬಾಂಧವರು ಶಾಲೆಗೆ ತಮ್ಮ ಮಕ್ಕಳ ಹೆಸರು ನೋಂದಾಯಿಸುವಾಗ ಹಿಂದು ಮಾಳಿ ಅಥವಾ ಮಾಲಿಗಾರ ಎಂದು ನಮೂದಿಸಬೇಕೆಂದರು. ದಿನಾಂಕ 16-7-02 ರ ಸಂಯುಕ್ತ ಕರ್ನಾಟಕ (ಗುಲಬರ್ಗಾ) ಪತ್ರಿಕೆಯ ವರದಿ.

3. ಬಾಗಲಕೋಟೆ ಬಂದ್ : ಮಾಜಿ ಸಚಿವ ಎಸ್. ಆರ್. ಕಾಶಪ್ಪನವರನ್ನು ಪುನಃ ಸಚಿವ ಸಂಪುಟಕ್ಕೆ ಸೇರಿಸಿ ವೀರಶೈವ ಪಂಚಮಸಾಲಿ ಸಮಾಜಕ್ಕೆ ನ್ಯಾಯ ಒದಗಿಸಬೇಕೆಂದು ಒತ್ತಾಯಿಸಿ ಸುಮಾರು 20 ಸಾವಿರಕ್ಕೂ ಹೆಚ್ಚು ಜನರು ನಗರದಲ್ಲಿಂದು ಬೃಹತ್ ಮೆರವಣಿಗೆ ನಡೆಸಿದರು. ದಿನಾಂಕ 16-7-02 ರ ಪತ್ರಿಕೆ ವರದಿ.

ಮುಂಬರುವ ಜನಗಣತಿಯಲ್ಲಿ ಪಂಚಮಸಾಲಿ ಲಿಂಗಾಯತರು ತಮ್ಮ ಹೆಸರನ್ನು ನೋಂದಾಯಿಸುವಾಗ ಪಂಚಮಸಾಲಿ ಎಂದು ಬರೆಸಬೇಕು. ವೀರಶೈವ / ಲಿಂಗಾಯತರೆಂದು ಬರೆಸಬಾರದು ಇದು ಅಲ್ಲದೆ ಇತರ ಉಪಪಂಗಡಗಳು ತಮ್ಮ ತಮ್ಮ ಉಪ ಪಂಗಡಗಳ ಹೆಸರನ್ನು ನೊಂದಾಯಿಸಬೇಕು ಎಂದು ಆಗ್ರಹಿಸಲಾಯಿತು. ದಿನಾಂಕ 22-7-02 ಸಂಯುಕ್ತ ಕರ್ನಾಟಕ ಪತ್ರಿಕೆ ವರದಿ.

4. ತೋಂಟದಾರ್ಯ ಶ್ರೀಗಳು ಸಾದು ಲಿಂಗಾಯತರ ಬಗ್ಗೆ ಆಡಿದರೆನ್ನಲಾದ ಮಾತುಗಳಿಗೆ ಸಿರಿಗೆರೆ ಮಠದ ಶ್ರೀಗಳು ಅಸಂತೋಷಗೊಂಡ ವರದಿ ಪಾಟೀಲ ಪುಟ್ಟಪ್ಪನವರ ಮೇ ತಿಂಗಳ ಪ್ರಪಂಚ ಸಂಚಿಕೆಯಲ್ಲಿ ವರದಿಯಾಗಿತ್ತು. ಸಂಸದ ವಿಜಯ ಸಂಕೇಶ್ವರರು ತೋಂಟದಾರ್ಯ ಶ್ರೀಗಳ ಬಗ್ಗೆ ವ್ಯಕ್ತ ಪಡಿಸಿದ ಅಭಿಪ್ರಾಯ ಉದಯ ಟಿವ್ಹಿ ವಾರ್ತೆಗಳಲ್ಲಿ ಕೇಳಲು ದೊರೆಯಿತು.

5. ಈ ಸಲ ಬಸವ ಜಯಂತಿಯ ಶುಭಾಶಯಗಳಿಂದ ತುಂಬಿ ಕೊಂಡು ಬಂದಿದ್ದ ಸಂಯುಕ್ತ ಕರ್ನಾಟಕ (ಗುಲಬರ್ಗಾ) ಪತ್ರಿಕೆ ನೋಡಲು ಎಷ್ಟೊಂದು ಸಂತೋಷವೆನಿಸಿತು. ಆದರೆ ಸಮಾಜದಲ್ಲಿಯ ದ್ವಂದ್ವ ಕಂಡರೆ ಸಾಕು ಸಾಕಾಗುತ್ತದೆ. ಪ್ರತಿಯೊಬ್ಬರಿಗೂ ಬಸವಣ್ಣನವರು ಹಾಗೂ ವಚನ ಸಾಹಿತ್ಯ ಬೇಕು. ಆದರೆ ಅವರು ತಿಳಿ ಹೇಳಿದ ಮಾರ್ಗದಲ್ಲಿ ಯಾರು ನಡೆಯಲಿಕ್ಕೆ ಬೇಡ.!!

ಇದು ಹೀಗೇಕೆ ಎಂಬುದಕ್ಕೆ ಸಮಾಧಾನ ನೀಡುವಿರೆಂದು ಪ್ರಾರ್ಥಿಸುವೆ.

ಭಕ್ತಿಪೂರ್ವಕ ಶರಣು ಶರಣಾರ್ಥಿಗಳೊಂದಿಗೆ

ಬಸವ ಭಕ್ತ ಬಸಗೌಡಾ ಪಾಟೀಲ

ನಿರಾಸೆ ಬೇಡ - ಪತ್ರಕ್ಕೆ ಉತ್ತರ

- ಮಾತಾಜಿ

ಶರಣ ಬಸಗೌಡ ಪಾಟೀಲ್, ಪೂನಾ ಇವರ ಪತ್ರ ಇಂದಿನ ಲಿಂಗಾಯತ ಸಮಾಜದ ಸ್ಥಿತಿಗೆ ಕನ್ನಡಿ ಹಿಡಿದಿದೆ. ಇಂಥ ದುಃಸ್ಥಿತಿಗೆ ಕಾರಣಗಳು ಎರಡು 1. ಧರ್ಮಗುರು ಬಸವಣ್ಣನವರನ್ನು ಕಡೆಗಣಿಸಿದುದು 2. ವಚನ ಸಾಹಿತ್ಯದ ಸಂಪರ್ಕ ತೊರೆದುದು. ಈ ಸ್ಥಿತಿಗೆ ಕಾರಣರಾರು ಎಂದರೆ ಅಲ್ಪಾಕಾಂಕ್ಷೆಯ ರಾಜಕಾರಣಿಗಳು, ಮಠಾಧೀಶರು, ವ್ಯಾಪಾರಸ್ಥರು ಮತ್ತು ಧೂರ್ತಬುದ್ಧಿಯ ಸಾಹಿತಿಗಳು. ಮುಸ್ಲಿಂ, ಕ್ರೈಸ್ತ, ಬೌದ್ಧ ಸಿಖ್ ಸಮಾಜಗಳು ಹಲವಾರು ಜಾತಿ, ಉದ್ಯೋಗಗಳವರು ಸೇರಿದ್ದರಿಂದಲೇ ಆದ ಧಾರ್ಮಿಕ ಒಕ್ಕೂಟಗಳು. ಆದರೆ ಅವರುಗಳು ಧರ್ಮಗುರು-ಧರ್ಮಗ್ರಂಥ-ಧರ್ಮ ಮಂದಿರಗಳ ಸೂತ್ರವಿಡಿದು ಒಂದಾಗಿದ್ದಾರೆ. ಒಳಗಿನ ಜಾತಿ ವಾಹಿನಿಗಳನ್ನು ಗುರುತಿಸಲು ಹೋಗುವುದಿಲ್ಲ. ಹೀಗಾಗಿಯೇ ಅವರದ್ದು ಅಖಂಡ ಸಮಾಜವಾಗಿ ನಿಲ್ಲುವುದರಿಂದ ಯಾವುದೇ ಸರ್ಕಾರಗಳು ಬಂದರೂ ಅವರಿಗೆ ಹೆದರುತ್ತವೆ ; ಎಲ್ಲ ಪಕ್ಷಗಳವರೂ ಮುಸ್ಲಿಂ ಓಟಿಗಾಗಿ ಹಾತೊರೆಯುತ್ತವೆ. ಲಿಂಗಾಯತ ಸಮಾಜವು ಸಂಖ್ಯಾ ದೃಷ್ಟಿಯಿಂದ ಕರ್ನಾಟಕದಲ್ಲಿ ದೊಡ್ಡದಾಗಿದ್ದರೂ ಸಂಘಟನಾ ದೃಷ್ಟಿಯಿಂದ ಬಹು ದುರ್ಬಲ ಸಮಾಜ. ಇಲ್ಲಿ ಕಟ್ಟುವ ಕೆಲಸಕ್ಕಿಂತಲೂ ಕೆಡಿಸುವ ಕೆಲಸವೇ ಬಹಳ. ತತ್ತ್ವವನ್ನು ಹೇಳಿ ತನ್ನ ವ್ಯಕ್ತಿತ್ವ, ವಾಗ್ಮಿತ್ವಗಳಿಂದ ಜನ ಮನ್ನಣೆ ಪಡೆಯುವುದಕ್ಕಿಂತ ಜಾತಿ ಸೂತ್ರಕ್ಕೆ ಕಟ್ಟು ಬಿದ್ದು ಮಠಾಧೀಶರು ಭಕ್ತರನ್ನು ಹಿಡಿದಿಟ್ಟುಕೊಳ್ಳಲು ನೋಡುತ್ತಾರೆ. ತಮ್ಮ ಮಠಗಳ ಗುರುಗಳನ್ನು ನಿಂದಿಸಿದರೆ ಅಥವಾ ವಿಮರ್ಶಿಸಿದರೆ ಆ ಗುರುಗಳ ಭಕ್ತರು ವಿಮರ್ಶಿಸಿದವರೊಡನೆ ಹೋರಾಟಕ್ಕೆ ನಿಲ್ಲುತ್ತಾರೆ. ಅದೇ ಧರ್ಮಗುರುವಿನ ನಿಂದನೆ, ಶರಣರ ನಿಂದನೆ ನಡೆದರೆ ಎಳ್ಳಷ್ಟೂ ತಲೆ ಕೆಡಿಸಿಕೊಳ್ಳುವುದಿಲ್ಲ. ಇದರರ್ಥವೇನು ? ಧರ್ಮಗುರುವಿಗಿಂತಲೂ ಅವರವರ ಜಾತಿಯ ಗುರುಗಳೇ ಮುಖ್ಯರೆಂದಲ್ಲವೆ ? ಸ್ಥಾನಿಕ ಪಂಥ (Lococults)ಗಳ ಹಾವಳಿಯಂತೂ ವಿಪರೀತ. ಗಿಡದ ಸುತ್ತಲೂ ಕಳೆ ಬೆಳೆದಾಗ ಆ ಕಳೆ ಗಿಡದ ಬೆಳವಣಿಗೆಗೆ ಆತಂಕಕಾರಿಯಾಗುವಂತೆ, ಸತ್ವವನ್ನು ಹೀರಿಕೊಂಡು ಗಿಡವನ್ನು ಬೆಳೆಯಗೊಡದಂತೆ ಸ್ಥಾನಿಕ ಪಂಥಗಳು ಬಸವ ನಿಷ್ಠೆಯನ್ನು ಬೆಳೆಯಗೊಡುತ್ತಿಲ್ಲ. ಇನ್ನು ವೈಯಕ್ತಿಕ ಪ್ರತಿಷ್ಠೆ-ದ್ವೇಷಗಳು ಬೇರೆ. ಜನ ಸಾಮಾನ್ಯರಿಗಿಂತಲೂ ಮಿಗಿಲಾಗಿ ರಾಗ-ದ್ವೇಷಗಳು ಮಠಾಧೀಶರನ್ನು ಕಾಡುತ್ತವೆ. ವೈಯಕ್ತಿಕ ದ್ವೇಷದಿಂದ ಯಾವ ಮಟ್ಟಕ್ಕೆ ಇಳಿಯಲೂ ಹೇಸುವುದಿಲ್ಲ.

ಇಂಥ ಗುರು ವೃಂದಕ್ಕೆ ರಾಜಕಾರಣಿಗಳ ಶ್ರೀರಕ್ಷೆ ಬೇರೆ. ಲಿಂಗಾಯತ ಸಮಾಜದೊಳಗಣ ಒಳಜಾತಿ, ಪಂಗಡಗಳನ್ನು ಪ್ರತ್ಯೇಕಿಸುವಲ್ಲಿ ಇವರದ್ದು ಪ್ರಮುಖ ಪಾತ್ರ. ಗಿಡದ ನಾಲ್ಕಾರು ಎಲೆಗಳು ಮೈಮೇಲೆ ಬಿದ್ದ ತಕ್ಷಣ ಬಿರುಗಾಳಿ ಬೀಸುತ್ತಿದೆ, ಪ್ರಳಯವಾಗುತ್ತಿದೆ, ಗಿಡ ಮರ ಬೀಳುತ್ತಿವೆ ಎಂದು ಬೊಬ್ಬೆಯಿಟ್ಟು ಓಡುವ ಮೊಲದಂತೆ ತಮಗೆ ಅಧಿಕಾರ ದೊರೆಯದಿದ್ದರೆ, ದೊರೆತದ್ದು ಕೈಬಿಟ್ಟು ಹೋದರೆ ತಮ್ಮ ಸಮಾಜಕ್ಕೆ

ಅನ್ಯಾಯವಾಯಿತೆಂದು ಕೂಗಾಡುತ್ತಾರೆ. ಅಧಿಕಾರದಲ್ಲಿದ್ದಾಗ ಇಡೀ ದೇಶ-ಸಮಾಜಗಳ ವಿಷಯ ಒತ್ತಟ್ಟಿಗಿರಲಿ ತಮ್ಮ ಒಳಜಾತಿಯ ಬಡಜನರನ್ನೇ ಕಣ್ಣೆತ್ತಿ ನೋಡಿರುವುದಿಲ್ಲ. ದೆಹಲಿಯ ಸಮ್ಮೇಳನದ ಸಿದ್ಧತೆಯಲ್ಲಿದ್ದಾಗ ನಮ್ಮ ಕಾರ್ಯಕರ್ತರೊಬ್ಬರು ರೇಲ್ವೆ ರಿಯಾಯಿತಿ ಬಗ್ಗೆ ಶಿಫಾರಸಿಗಾಗಿ ರಾಮವಿಲಾಸ ಪಾಸ್ವಾನ್ ಅವರ ಮನೆಗೆ ಹೋಗಿದ್ದರು. ಅವರ ಮನೆ ತುಂಬಾ ಸಂದರ್ಶನಕ್ಕಾಗಿ ಬಂದ ಅವರ ಮತ ಕ್ಷೇತ್ರದ ಜನರು ಇದ್ದರಂತೆ. ತಾಳ್ಮೆಯಿಂದ ಅವರು ಎಲ್ಲರೊಡನೆ ಮಾತನಾಡುತ್ತಿದ್ದರಂತೆ. ಓರ್ವ ಲಿಂಗಾಯತ ಮಂತ್ರಿಗಳ ಮನೆಗೆ ಆಹ್ವಾನಿಸಲು ಹೋಗಿದ್ದಾಗ ಕಾಗೆ ಗೂಗೆ ಸಹ ಇರಲಿಲ್ಲವಂತೆ. ಹೋದವರು ಕಾಯುತ್ತ ಕುಳಿತಿದ್ದಾಗ ಕರ್ನಾಟಕದಿಂದ ಹೋಗಿ ಅವರಲ್ಲಿ ಕೆಲಸ ಮಾಡುತ್ತಿದ್ದ ಹುಡುಗರ ಪರಿಚಯವಾಯಿತಂತೆ. ಅವರು ಹೇಳಿದರಂತೆ, "ಇವರು ಯಾರ್ಯಾರನ್ನೂ ಹತ್ತಿರ ಸೇರಿಸುವುದಿಲ್ಲ. ಮತ ಕ್ಷೇತ್ರದ ಜನರ ಕಷ್ಟ-ಸುಖ ವಿಚಾರಿಸುವುದಿಲ್ಲ. ಲಿಂಗಾಯತರು ಬಂದರೆ ಹಾವು ತುಳಿದವರಂತೆ ಬೆಚ್ಚಿ ಬೀಳುತ್ತಾರೆ. ಲಿಂಗಾಯತ ಧರ್ಮೀಯರ ಕಾರ್ಯಕ್ರಮ ಎಂದರೆ ಹೋಗಲು ಹೆದರುತ್ತಾರೆ."

ಈ ಅನುಭವ ಬಹಳ ಜನಕ್ಕೆ ಆಗಿರಲೂ ಸಾಕು. ಅಧಿಕಾರ ವಂಚಿತರಾಗುತ್ತಲೇ ಇವರಿಗೆ ತಮ್ಮ ಸಮಾಜದ ನೆನಪಾಗುತ್ತದೆ. "ಈ ಸರಕಾರ ಲಿಂಗಾಯತರಿಗೆ ಬಹಳ ಅನ್ಯಾಯ ಮಾಡುತ್ತಿದೆ." ಎನ್ನುತ್ತಾರೆ. ಇಂಥ ರಾಜಕಾರಣಿಗಳು ಒಳಪಂಗಡಗಳನ್ನು ಗಟ್ಟಿಗೊಳಿಸಲು ಬಹಳ ಪ್ರಯತ್ನ ಮಾಡುತ್ತಾರೆ.

ಇನ್ನು ಮೂರನೆಯ ವರ್ಗ ವ್ಯಾಪಾರಸ್ಥರು. ಬಂಡವಾಳವಿಲ್ಲದೆ ವ್ಯಾಪಾರ ಮಾಡಬಯಸುವ ಜಾಣತನ ಇವರದು. ಧಾರ್ಮಿಕ ಉತ್ಸವ, ಅಡ್ಡಪಲ್ಲಕ್ಕಿ ಮಹೋತ್ಸವ, ಮುಂತಾದುವುಗಳನ್ನು ಏರ್ಪಡಿಸುವುದರಲ್ಲಿ, ಗುಡಿ ನಿರ್ಮಾಣ ಮಾಡುವುದರಲ್ಲಿ ಇವರು ಮುಂದು. ಒಂದು ಮೀಟಿಂಗ್ ಕರೆಯುತ್ತಾರೆ. ಗಣ್ಯರು ಸೇರಿದಾಗ ಪ್ರಸು344ವಕ್ಕೆ-ತಾವು ಒಂದು ಲಕ್ಷ, ಎರಡು ಲಕ್ಷ, ಐವತ್ತು ಸಾವಿರ ಹೀಗೆಲ್ಲ ಕೊಡುತ್ತೇವೆ ಎನ್ನುವರು. ನಿಜವಾದ ಭಕ್ತಿವಂತರು ತಾವೂ ಕೊಡುವರು. ಅದ್ದೂರಿಯಾದ ಕಾರ್ಯಕ್ರಮ ಮಾಡಿ ಧಾರ್ಮಿಕ ದೃಷ್ಟಿಯಿಂದ ಅದು ಉಪಯುಕ್ತವಿಲ್ಲದಿದ್ದರೂ ಮೂಢ ಭಕ್ತರ ಕಣ್ಣಿಗೆ ಹಬ್ಬ ಮಾಡಿ, ತಾವು ಕೊಡುವುದಿರಲಿ, ಸಂಗ್ರಹಿಸಿದ್ದರಲ್ಲಿ ಖರ್ಚಾಗಿ ಉಳಿದುದನ್ನು ನುಂಗಿ ನೀರು ಕುಡಿಯುವ ಪ್ರವೃತ್ತಿ ಈ ಜನರದ್ದು. ಇವರು ಭಕ್ತಿ-ಶ್ರದ್ಧೆಗಳಿಂದ ಉತ್ಸವ ಮಾಡಿಸುವುದಕ್ಕಿಂತ ವ್ಯಾವಹಾರಿಕ ದೃಷ್ಟಿಕೋನದಿಂದ ತಮ್ಮನ್ನು ತಾವು ತೊಡಗಿಸಿಕೊಳ್ಳುವುದುಂಟು ಮತ್ತು ಇವರಿಗೆ ಇಂಥದೇ ಉತ್ಸವ ಎಂದೇನೂ ಇಲ್ಲ. ಯಾವುದಾದರೂ ಸರಿ, ಯಾರದಾದರೂ ಸರಿ. ಒಟ್ಟು ಅವರಿಗೆ ಹಣ ಮತ್ತು ಕೀರ್ತಿ ಸಿಕ್ಕರೆ ಸಾಕು.

ನಾಲ್ಕನೆಯ ವರ್ಗ ಸಾಹಿತಿಗಳು. ವಿಮರ್ಶೆ ಮಾಡುವ ಶಕ್ತಿ ಇಲ್ಲದ ಜನರು ಏನು ಮುದ್ರಣಗೊಳ್ಳುತ್ತದೋ ಅದನ್ನು ನಂಬುತ್ತಾರೆ. ನಿನ್ನೆ ಒಂದು ಲೇಖನ ಓದಿದೆ. ಅದರಲ್ಲಿ ಲೇಖಕ ಬರೆಯುತ್ತಾನೆ ಆತನ ಮಿತ್ರರೊಬ್ಬರು ಹಿಮಾಲಯದಲ್ಲಿ ಓರ್ವ ತಪಸ್ವಿಯನ್ನು ಕಂಡರಂತೆ, ನೋಡಲು 25-30 ವರ್ಷಗಳ ಯುವಕರಂತೆ ಕಾಣುತ್ತಾರಂತೆ, ಆತನಿಗೆ ವಯಸ್ಸು

ಎರಡು ಸಾವಿರಕ್ಕೂ ಮಿಕ್ಕಿದೆಯಂತೆ, ಏಸು ಕ್ರಿಸ್ತ ಇವರ ಜೊತೆಗೆ ಕೆಲವು ಕಾಲ ಇದ್ದರಂತೆ ; ಶಂಕರಾಚಾರ್ಯರಿಗೆ ಯೋಗವನ್ನು ಈತನೇ ಕಲಿಸಿದ್ದಂತೆ ! ಇಂಥ ಅನವಶ್ಯಕ ಮಾತುಗಳನ್ನಾಡಿ ಜನರನ್ನು ದಾರಿ ತಪ್ಪಿಸಿ ಸಾಧಿಸುವುದಾದರೂ ಏನು ? ಅಂಥ ತಪಸ್ವಿಗಳ ಸಿದ್ಧಿಯ ಉಪಯೋಗವೇನು ? ಎರಡು ಸಾವಿರವಲ್ಲ ಹತ್ತು ಸಾವಿರ ವರ್ಷ ಬದುಕಿದರೂ ಅದರ ಲಾಭ ಏನಿದೆ ? ಅದಕ್ಕೇ ಚನ್ನಬಸವಣ್ಣನವರು ಹೀಗೆ ಹೇಳುವುದು :

"ಅಜಕಲ್ಪ ಕೋಟಿ ವರುಷದವರೆಲ್ಲರೂ ಹಿರಿಯರೆ ?
ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೆ ?
ನಡುಮುರಿದು, ಗುಡುಗೂರಿ, ತಲೆನಡುಗಿ ನೆರೆತೆರೆಹೆಚ್ಚಿ,
ಮತಿಗೆಟ್ಟು, ಒಂದನಾಡ ಹೋಗಿ ಒಂಭತ್ತನಾಡುವ ಅಜ್ಞಾನಿಗಳೆಲ್ಲರೂ
ಹಿರಿಯರೆ ? ಅನುವನರಿದು, ಘನವ ಬೆರಸಿ, ಹಿರಿದು ಕಿರಿದೆಂಬ
ಭೇದವ ಮರೆದು ಕೂಡಲಚನ್ನಸಂಗಯ್ಯನಲ್ಲಿ ಬೆರಸಿ
ಬೇರಿಲ್ಲದಿಪ್ಪ ಹಿರಿಯತನ ನಮ್ಮ ಮಹಾದೇವಿಯಕ್ಕಂಗಾಯಿತ್ತು."

- ಚ.ಬ.ವ. 340

"ಅನಂತಕಾಲ ತರು ಗಿರಿಗಳ ಹೊಕ್ಕು ತಪವ ಮಾಡುವುದರಿಂದ
ಒಂದು ದಿನ ಲಿಂಗಪೂಜೆ ಸಾಲದೆ ?
ಅನಂತಕಾಲ ಲಿಂಗಪೂಜೆಯ ಮಾಡುವುದರಿಂದ
ಒಂದು ದಿನ ಗುರುಚರಣದ ಸೇವೆ ಸಾಲದೆ ?
ಅನಂತಕಾಲ ಕಾಲ ಗುರುಚರಣದ ಸೇವೆಯ ಮಾಡುವುದರಿಂದ
ಒಂದು ದಿನ ಜಂಗಮಕ್ಕೆ ತೃಪ್ತಿಯ ಮಾಡುವುದು ?
ಅನಂತಕಾಲ ಜಂಗಮಕ್ಕೆ ತೃಪ್ತಿಯ ಮಾಡುವುದರಿಂದ
ಒಂದು ನಿಮಿಷ ನಿಮ್ಮ ಶರಣರನುಭಾವ ಸಾಲದೆ
ಲಿಂಗದೇವಾ.

- ಬ.ವ.ದೀ. 1383

ಕಾಗದದಲ್ಲಿ ಮುದ್ರಣವಾದ ಎಲ್ಲ ವಿಷಯಗಳನ್ನು ನಂಬುವಂತಹ ಜನರು ಇಲ್ಲಿರುವುದರಿಂದ ವಿಜ್ಞಾನಕ್ಕೆ ವಿರುದ್ಧವಾಗಿ, ಇತಿಹಾಸಕ್ಕೆ ಅಪಚಾರ ಮಾಡುವಂತೆ ಪಂಚಾಚಾರ್ಯರು ಶಿಲಾ ಲಿಂಗೋದ್ಭವರು, ಆ ಯುಗದಲ್ಲಿ ಈ ಧರ್ಮ ಇತ್ತು ಎಂದೆಲ್ಲ ಹೇಳುವ ಕೃತ್ರಿಮ ಸಾಹಿತ್ಯವನ್ನು ಸೃಷ್ಟಿಸಿ ಕೆಲವರು ಬರೆದರೆ, ಇನ್ನು ಕೆಲವರು ಧರ್ಮಪಿತ ಬಸವಣ್ಣನವರ ಮತ್ತು ಅವರ ಸಮಕಾಲೀನ ಶರಣರ ಮಹತ್ವವನ್ನು ಕಡಿಮೆ ಮಾಡಲು ಲಿಂಗಾಯತ ಧರ್ಮಕ್ಕೆ ಸ್ಥಾಪಕರೇ ಇಲ್ಲ ಎಂದು (ಡಾ|| ಚಿದಾನಂದ ಮೂರ್ತಿ) ಕೆಲವು ಸಾಹಿತಿಗಳು ಬರೆದು ಜನರಲ್ಲಿ ಗೊಂದಲ ಉಂಟು ಮಾಡುತ್ತಾರೆ. ಹೀಗಾಗಿ ಲಿಂಗಾಯತ ಸಮಾಜವು ಸಂಘಟನೆಯಾಗಲು, ತತ್ತ್ವನಿಷ್ಠವಾಗಲು ಅವಕಾಶವೇ ದೊರೆಯುತ್ತಿಲ್ಲ.

ಆಶಾ ಕಿರಣ

ಇಂಥ ಕಗ್ಗತ್ತಲೆಯ ನಡುವೆಯೂ ಆಶೆಯ ಕಿರಣಗಳು ಮೂಡುತ್ತಿವೆ. ಏಕೆಂದರೆ, ಲಿಂಗಾಯತ ಸಮಾಜದ ರೋಗ ಏನು ? ಏಕೆ ಬಂದಿದೆ ? ಎಂಬ ಕಾರಣವನ್ನು ಈವರೆಗೂ ಅರಿಯಲಾಗಿರಲಿಲ್ಲ. ರೋಗ ಕಾರಣ ಪತ್ತೆಯಾದರೆ ಚಿಕಿತ್ಸೆ ಬಲು ಸುಲಭ. ಬಣಜಿಗ, ಜಂಗಮ, ಪಂಚಮ ಸಾಲಿ, ಸಾದ, ನೊಳಂಬ, ಗಾಣಿಗ, ರೆಡ್ಡಿ, ಮಾಳಿ, ಜವಳಿ ಇತ್ಯಾದಿ ಇತ್ಯಾದಿ ಉಪಪಂಗಡಗಳ ಪ್ರಜ್ಞೆಯನ್ನು ನಾಲ್ವರು ಪಾತಕಿಗಳು ಎಷ್ಟೇ ಪ್ರಚೋದಿಸಲು ಹೋದರೂ ಈ ನಾಲ್ವರ ತಂತ್ರಗಳಿಂದ ಬೇಸತ್ತಿರುವ ಪ್ರಜ್ಞಾವಂತಿಕೆಯಿಂದ ಕೂಡಿದ ಜನಸಾಮಾನ್ಯ ಲಿಂಗಾಯತರ ಸಂಖ್ಯೆ ಸಾಕಷ್ಟಿದೆ. ಲಿಂಗಾಯತರ ಅಂತರಂಗದಲ್ಲಿ ಗುರು ಬಸವಣ್ಣನವರ ಬಗ್ಗೆ ಅಪೂರ್ವವಾದ ಭಕ್ತಿ, ಮೆಚ್ಚುಗೆ ಇದೆ. ತಾವು ಶರಣ ಪರಂಪರೆಯ ಕರುಳ ಬಳ್ಳಿಗಳು ಎಂಬ ಭಾವನಾತ್ಮಕ ಸಂಬಂಧವಿದೆ. ಪಂಚ ಪೀಠಾಧೀಶರಿಂದ ಹಿಡಿದು ಇನ್ನು ಕೆಲವು ಸ್ವಾಮಿಗಳು ಎಷ್ಟೇ ಆ ಋಣಾನುಬಂಧವನ್ನು ಕತ್ತರಿಸಬೇಕು ಎಂದು ಪ್ರಯತ್ನಿಸಿದರೂ ಅದು ಸಾಧ್ಯವಾಗಿಲ್ಲ. ಗುರು ಬಸವಣ್ಣನವರ ಹೆಸರಿನಲ್ಲಿ ಮಾತ್ರ ಅಂಥ ಶಕ್ತಿ ಇದೆ. ಆದ್ದರಿಂದ ನಾವು ಬಸವ ಭಕ್ತಿಯ ಬಳ್ಳಿಯನ್ನು ಬೆಳೆಸಲು ಶ್ರಮಿಸಿದರೆ, ಲಿಂಗಭಕ್ತಿಯ ಗೊಂಚಲು ಬಿಡುವುದು ತಡವೇನಾಗದು.

ಆದ್ದರಿಂದ ಶರಣ. ಬಸಗೌಡರೇ ನಿರಾಶರಾಗಬೇಡಿರಿ, ಚಿಂತಿಸಬೇಡಿರಿ; ಅಂದು ಧರ್ಮಪಿತರು 0 ಗಳಿಕೆಯಿಂದ ಶರಣ ಸಮಾಜ ರಚನೆಗೆ ಯತ್ನಿಸಿ ತಮ್ಮ ಜೀವಿತಾವಧಿಯಲ್ಲಿ ಒಂದು ಲಕ್ಷ ತೊಂಭತ್ತಾರು ಸಾವಿರ ಅನುಯಾಯಿಗಳನ್ನು ಪಡೆದರು. ಈಗಿರುವ ಮೂರೂವರೆ-ನಾಲ್ಕು ಕೋಟಿ ಲಿಂಗಾಯತರಲ್ಲಿ 'ಶನಿ ಸಂತಾನ' ವಾಗುತ್ತೇವೆ ಎಂದು ಜಾತೀಯತೆ, ಮೂಢತ್ವಕ್ಕೆ ಹೋಗುವವರು ಹೋದರೂ 'ಶರಣ ಸಂತಾನ' ದ ಪ್ರಮಾಣ ಚಿಕ್ಕದೇನಾಗದು. ಆದ್ದರಿಂದ ತನು-ಮನ-ಧನ-ಅಭಿಮಾನ-ಸಮಯ-ಪ್ರಾಣಗಳನ್ನು ಸಮರ್ಪಿಸಿ ದುಡಿಯುವ ಭಕ್ತರು (ಗೃಹಸ್ಥರು) ಮತ್ತು ಜಂಗಮರು (ವಿರಕ್ತರಾದ ಧರ್ಮ ಬೋಧಕರು) ತಯಾರಾಗಬೇಕು ಅಷ್ಟೇ. ನಿಮ್ಮ ಪತ್ರದಲ್ಲಿ ಉಲ್ಲೇಖಿಸಿರುವ ಪಂಢರಾಪುರದ ದಿಂಡಿ ಉತ್ಸವ, ವಾರಕರಿ ಆಚರಣೆಗಳೇ ನಮ್ಮ ಕೂಡಲ ಸಂಗಮದ ಶರಣ ಮೇಳಕ್ಕೆ ಪ್ರೇರಣೆ ನೀಡಿವೆ. 1987 ರ ಜುಲೈದಲ್ಲಿ ಈ ಬಗ್ಗೆ ತಿಳಿದ ನಾನು 1988 ರಲ್ಲಿ ಶರಣ ಮೇಳ ಆರಂಭಿಸಿದೆ. ನಮ್ಮ ಎಣಿಕೆಯಂತೆ ಯಶಸ್ಸು ಸಿಕ್ಕಿದೆ. ವಾರಕರಿಯವರು ವರ್ಷಕ್ಕೆ ಎರಡು ಬಾರಿ ಪಂಢರಾಪುರದಲ್ಲಿ ಸಮಾವೇಶವಾಗುತ್ತಾರೆ. ಬಸವ ಭಕ್ತರು ಜನವರಿ 11 ರಿಂದ 15 ರವರೆಗೆ ಕೂಡಲ ಸಂಗಮದಲ್ಲಿ, ಮೇ 1 ರಿಂದ 3 ರವರೆಗೆ ಬಸವ ಕಲ್ಯಾಣದಲ್ಲಿ ಹೀಗೆ ಎರಡು ಬಾರಿ ಸೇರುವರು. ಶರಣ ಮೇಳ, ಕಲ್ಯಾಣ ಪರ್ವಗಳು ಬಹು ದೊಡ್ಡ ಆಶಾ ಕಿರಣಗಳು ಎಂಬುದನ್ನರಿಯಿರಿ. ವಾರಕರಿಯವರು ಹೇಗೆ ಪ್ರತಿ ವರ್ಷ ಭಜನೆ - ಸತ್ಸಂಗ ಮಾಡುತ್ತ ಪಂಢರಾಪುರಕ್ಕೆ ಬರುವರೋ ಅದೇ ರೀತಿ ಪ್ರತಿ ವರ್ಷವೂ 6 ಜ್ಯೋತಿಗಳು ಕಲ್ಯಾಣಕ್ಕೆ ಬರುವ ಪದ್ಧತಿ ರೂಢಿಸಿದರೆ ಲಿಂಗಾಯತರಲ್ಲೂ ಶರಣ ಧರ್ಮ - ಸಂಸ್ಕೃತಿಗಳ ಬಗ್ಗೆ ಜಾಗೃತಿ - ಭಕ್ತಿ - ಅಭಿಮಾನ ಮೂಡದೆ ಇರುವುದಿಲ್ಲ.

-ಮಾತಾಜಿ

ನೀವೇ ಹೇಳಿ

ಲಿಂಗಾಯತರು ಮತ್ತು ವೀರಶೈವರು - ಒಂದೇ ಏನು ?

ಅಂದು ಮಾತ್ರ(ಶುಕ್ರ)ವಾರ ತಾರೀಖು 1-3-2002. ಸುಮಾರು ಮಧ್ಯಾನ್ಹದ ಸಮಯ. ಗೋಧ್ರ ಗಲಾಟೆಯಿಂದಾಗಿ ಆಫೀಸನ್ನು ಮುಚ್ಚಲಾಯಿತು. 3 ಜನ ಆಗಂತುಕರು ನನ್ನ ಕೋಣೆ (Chamber) ಪ್ರವೇಶಿಸಿ ತಮ್ಮ ಪರಿಚಯ ಮಾಡಿಕೊಂಡರು. ಅವರು ಸುಮಾರು ಒಂದು ತಿಂಗಳ ಹಿಂದೆಯೇ ನಮ್ಮ ಕಡಪಾ ವಿಭಾಗೀಯ ಕಛೇರಿ ನಿರ್ಧರಿಸಿದ ಕಾರ್ಯಕ್ರಮದಂತೆ ಬಂದಿದ್ದರು. ದೊಡ್ಡವರು ಶ್ರೀ ಕೊಂಡಪಲ್ಲಿ ಉಮಾಕಾಂತ, ಅವರ ತಮ್ಮ ಶ್ರೀ ಕೊಂಡಪಲ್ಲಿ ಜಯಶಂಕರ ಮತ್ತು ಅವರ ಸಂಬಂಧಿ ಶ್ರೀ ಜಯಕೃಷ್ಣ. ಆಂಧ್ರದಲ್ಲಿ ಹೆಚ್ಚು ಪ್ರಚಲಿತವಿರುವ ಬುರ್ರ ಕಥ ಎಂಬ ಒಂದು ದಿನದ ಕಾರ್ಯಕ್ರಮಕ್ಕಾಗಿ ಅವರು ಬಂದಿದ್ದರು. ಸಂಜೆ 7 ಕ್ಕೆ ಒಂದು ಗ್ರಾಮ ತರಂಗ ಡೋಣಾ ದಲ್ಲಿ ಬುರ್ರ ಕಥೆ ನಡೆಸಲಾಗುವುದೆಂದು ಅಲ್ಲಿಗೆ ಹೋಗಲು ನಿರ್ಧರಿಸಲಾಯಿತ್ತು.

ಸಂಜೆ ಗ್ರಾಮಕ್ಕೆ ಹೋಗುವ ಸಮಯ, ಆಫೀಸಿನ ಹಿಂದೆಯೇ ಇರುವ ನಮ್ಮ Quarters (ಮನೆ)ಗೆ ಬಂದರು. ಸ್ವಲ್ಪ ಹೊತ್ತು ಮಾತನಾಡಿ ನನ್ನ ಕಾರಿನಲ್ಲಿ ಪ್ರಯಾಣ ಬೆಳಸಿದೆವು. ನೀವು ವೀರಶೈವರೇ ಲಿಂಗಾಯತರೇ ? ಎಂದು ನನ್ನನ್ನು ಶ್ರೀ ಜಯಶಂಕರ ಕೇಳಿದಾಗ ಆಶ್ಚರ್ಯ ಚಕಿತನಾದೆ! ಇವರಿಗೆ ಹೇಗೆ ಕರ್ನಾಟಕದಲ್ಲಿ ಈಗ ಜಿಜ್ಞಾಸೆ ಹುಟ್ಟಿಸಿರುವ ಲಿಂಗಾಯತ - ವೀರಶೈವ ಬೇರೆ, ಬೇರೆ ಎನ್ನುವುದು ತಿಳಿದದ್ದು?!! ಎಂದೆನ್ನಿಸಿತು. ವಿಚಾರಿಸಿದೆ ; ತಾವು ವೀರಶೈವ-ಜಂಗಮ ರೆಂದು ಹೇಳಿದರು. ನಾನು ಇನ್ನೂ ಅಚ್ಚರಿಯಿಂದ ಕೇಳಿದೆ 'ತಾವು ಇಷ್ಟಲಿಂಗಧಾರಿಗಳೇ?' ಸ್ಪಷ್ಟವಾಗಿ ಇಲ್ಲ ಎಂದರು. ಜನಿವಾರವನ್ನು ಧರಿಸಿರುವುದಾಗಿ ತೋರಿಸಿದರು. ನಾನು ಕುತೂಹಲದಿಂದ 'ನೀವು ಮಾಂಸಾಹಾರಿಗಳೇ' ಎಂದೆ. 'ಹೌದು ನಾವು ಮಾಂಸಹಾರಿಗಳೇ ?' ಎಂದರು! ಅವರ ಆಚಾರ, ವಿಚಾರ, ಸಂಸ್ಕೃತಿಗಳ ಬಗ್ಗೆ ವಿಚಾರಿಸಿದೆ. ಮೈದುಕೂರು ಎಂಬ ಪಟ್ಟಣದವರೆಂದು, ಅದು ಕಡಪಾ ಜಿಲ್ಲೆಯಲ್ಲಿದೆ. ಅಲ್ಲಿ ಸುಮಾರು 40, 50 ತಮ್ಮ ಮನೆಗಳಿರುವುದಾಗಿ ತಿಳಿಸಿದರು. ವಿಶ್ವಗುರು ಬಸವಣ್ಣನವರ ಬಗ್ಗೆ ಕೇಳಲಾಗಿ, ಅವರು ಬಸವಣ್ಣನವರ ಕ್ರಾಂತಿಯ ಬಗ್ಗೆ ಸ್ವಲ್ಪ ತಿಳಿದಿರುವುದಾಗಿ ತಿಳಿಸಿದರು. ಬಸವ ಗುರುವಿನ ವಿಚಾರ ಕೇಳಲು ತಾವು ಉತ್ಸುಕರಾಗಿರುವುದಾಗಿಯೂ ಹೇಳಿದರು.

ಆಗ ನನಗೆ ಕಳೆದ ವರ್ಷದ ಘಟನೆ ಮರುಕಳಿಸಿತು. ಬಸವ ಧರ್ಮ ಪೀಠದ ಪೂಜ್ಯ ಚನ್ನಬಸವರಾಜ ಸ್ವಾಮಿಗಳ ನೇತೃತ್ವದಲ್ಲಿ ಲಿಂಗಾಯತ ಎಂದು ಜನಗಣತಿಯಲ್ಲಿ ಬರೆಸಲು ಜನಾಂದೋಲನ ಕಾರ್ಯಕ್ರಮದ ಅಂಗವಾಗಿ ಆದೋನಿಯಲ್ಲಿ ನಡೆದ ಕಾರ್ಯಕ್ರಮಕ್ಕೆ ನಮ್ಮ ಕಡಪಾ ವಿಭಾಗೀಯ ಆಫೀಸಿನಿಂದ ಧಾರವಾಡದವರೇ ಆದ ಶ್ರೀ K.M ಅಂಗಡಿಯವರು ಕಾರ್ಯನಿಮಿತ್ತ ಬಂದವರು, ಅಲ್ಲಿನ ಕಾರ್ಯಕ್ರಮಕ್ಕೆ ನನ್ನ ಆಹ್ವಾನದ ಮೇರೆಗೆ ಅವರೂ ಭಾಗವಹಿಸಿದ್ದರು. ಪೂಜ್ಯರ ಲಿಂಗಾಯತ, ವೀರಶೈವ ಬೇರೆ, ಬೇರೆಂಬ ವಿವರಣೆ ಮನದಟ್ಟಾಗುವಂತಿತ್ತು. ಈ ಆದವಾನಿ ಭಾಗದಲ್ಲಿರುವ ಇಷ್ಟಲಿಂಗಧಾರಿಗಳೆಲ್ಲರೂ ಲಿಂಗಾಯತರು ವೀರಶೈವರಲ್ಲಾ. ವೀರಶೈವರ ವಿಧಿ, ವಿಧಾನಗಳು; ಆಚಾರ, ವಿಚಾರಗಳು ಬೇರೆ ಎಂಬ ಸತ್ಯವನ್ನು ಮುಂದಿಟ್ಟಾಗ ಶ್ರೀ ಅಂಗಡಿಯವರಿಗೂ ಆಶ್ಚರ್ಯ. ಹೌದು, ಕಡಪಾದಲ್ಲಿ ಈ ವೀರಶೈವರು ಇದ್ದಾರೆ, ಮಾಂಸಾಹಾರಿ ಹೋಟೆಲ್ ನಡೆಸುತ್ತಾರೆ! ಎಂದರು. ನಾನು ಅಂದು ಹೌದೇ ಎಂದು ಆಶ್ಚರ್ಯ ವ್ಯಕ್ತಪಡಿಸಿದೆ!

ಇಂದು ಅದೇ ವಿಚಾರ! ಕಾರಿನಲ್ಲಿ ಬಸವ ಲಿಂಗ ಸ್ತವನ ಕೇಳುತ್ತಿದ್ದಂತೆ ಅವರಿಗೆ ತುಂಬಾ ಮೆಚ್ಚುಗೆ ಎನ್ನಿಸಿತು.

ಮರುದಿನ ತಾ. 2-3-02 ನಮ್ಮ ಮನೆಯಲ್ಲಿ ಉಪಾಹಾರಕ್ಕಾಗಿ ಬಂದಾಗ ವಿಶ್ವಗುರು ಬಸವ ತಂದೆಯನ್ನು ಪರಿಚಯಿಸುವ ಪೂಜ್ಯ ಮಾತಾಜಿ ಬರೆದ

1. "LORD BASAVA", The Light of the world
2. LINGAYATISM
3. ಬಸವ ವಚನಾಮೃತಮು (ತೆಲುಗಿನದು) ಮತ್ತು ಎರಡು ಧ್ವನಿ ಸುರಳಿ ತೆಲುಗಿನಲ್ಲಿರುವ 'ಬಸವ ಜ್ಯೋತಿ' 'ಬಸವ ವಚನಾಮೃತಮು' ಬಹುಕರಿಸಿದೆ.

ತದನಂತರ ಅವರ ತಂದೆಯ ವಿಳಾಸವನ್ನು ಪಡೆದು ಸಂಪರ್ಕಿಸಿದೆ. ಅವರಿಂದ ಇನ್ನೂ ಹೆಚ್ಚಿನ ವಿಷಯಗಳನ್ನು ತಿಳಿದುಕೊಂಡು ತಮ್ಮೆಲ್ಲರ ಮುಂದೆ ಇಡುತ್ತಿದ್ದೇನೆ.

ಶ್ರೀ ಕೊಂಡಪಲ್ಲಿ ವೀರಭದ್ರಯ್ಯ (ಭಾಗವತರ್)

ಅವರ ತಂದೆ : ಕೊಂಡಪಲ್ಲಿ ಭಿಕ್ಷಾಪತಿ

ವಿಳಾಸ : ಪಾರ್ವತಿ ನಗರ, ಮೈದಕೂರು-516172

ಮನೆ ದೂರವಾಣಿ ಸಂಖ್ಯೆ : 08564-31431

ಮತ ಜಾತಿ : ವೀರಶೈವಮು-ಜಂಗಮದೇವರ ಅಥವಾ ಗಣಾಯಿತಿ ಜಂಗಮ

ಮೂಲ ಗುರುವು : ಆದಿ ಶಂಕರುಲು

ಗೋತ್ರಂ : ರುದ್ರ

ಇನ್ನಿತರ ಜಾತಿಗಳು : ಗಣಾಯಿತಿ, ಲಿಂಗ ಬಲಿಜ, ತಂಬುಳ್ಳ, ಕುಮ್ಮರಿ ವೀರಶೈವ ಶೆಟ್ಟಿಗಳೂ ಇದ್ದಾರೆ, ವೀರಶೈವ ಬ್ರಾಹ್ಮಣರೆಂದರೆ ಆರಾಧ್ಯ ಬ್ರಾಹ್ಮಣರು - ಗಾಯಕ S.P. ಬಾಲಸುಬ್ರಮಣ್ಯಂ. ಇವರು ಜಂಧ್ಯಾ ಅಂದರೆ ಜನ್ನಿವಾರ ಧರಿಸುವರು.

ಇವರ ಸಂಬಂಧಿ : ಶ್ರೀ ಯಡವಳ್ಳಿ ಜಯಕೃಷ್ಣ

ತಂದೆ : ಶ್ರೀ ಯಡವಳ್ಳಿ ನಾಗಲಿಂಗಯ್ಯ

ಜಾತಿ : ವೀರಶೈವ-ಗಣಾಯಿತಿ ಜಂಗಮ

ಗೋತ್ರಂ : ಭಾರಧ್ವಾಜ

ಮಹಿಳೆಯರು ಬಹಿಷ್ಠೆಯರಾದಾಗ - ಮೂರುದಿನ ನಿಷಿದ್ಧ

ಮದುವೆಗಳು : 5, 9, 16 ದಿನಗಳ ಕಾರ್ಯಕ್ರಮ!

ಆಗ ಅಗ್ನಿ, ಧೂಪ, ದೀಪ, ಖಡ್ಗ (ಪಡಪು) ಹೇಳುತ್ತಾ ವೀರಭದ್ರೇಶ್ವರ ಗುಡಿಗೆ ಹೋಗುವುದು. ಬ್ರಾಹ್ಮಣರ ಪೌರೋಹಿತ್ಯದಲ್ಲಿ ಮದುವೆ ನೆರವೇರುವುದು. ಅವರು ಇವರಲ್ಲಿ ಊಟ ಮಾಡುವುದಿಲ್ಲ. ಅಕ್ಕಿ, ಬೇಳೆ, ಬೆಲ್ಲ ಮುಂತಾದ ಧಾನ್ಯಗಳನ್ನು ಪಡೆದು ಹೋಗುವರು.

ಸಾತ್ತಾಗ : ಸಸ್ಯಹಾರಿ ಜಂಗಮಯ್ಯನ ನೇತೃತ್ವದಲ್ಲಿ ಕಾರ್ಯ ನೇರವೇರುವುದು.

ಮೈದುಕೂರಿನಲ್ಲಿ : 40, 50 ಮನೆಗಳಿವೆ

ಕಡಪಾದಲ್ಲಿ : 10, 15 ಮನೆಗಳಿವೆ

ನೆಲ್ಲೂರಿನಲ್ಲಿ : 20, 30 ಮನೆಗಳಿವೆ

ಅವರೊಟ್ಟಿಗೆ ವಿಚಾರ ವಿನಿಮಯ ಮಾಡಿಕೊಳ್ಳುತ್ತಿರುವಾಗ, ನನಗೆ ಇನ್ನೂ ಸ್ಪಷ್ಟವಾದದ್ದು - ನಮ್ಮ ಕೆಲವು ಸಾಂಪ್ರದಾಯಕ ಆಚರಣೆಗಳು. ಸಂಪ್ರದಾಯದಂತೆ ಮದುವೆಗಳಲ್ಲಿ ಗುಗ್ಗಳ (ಅಗ್ನಿ) ವನ್ನು ಹೊತ್ತು ಶ್ರೀ ವೀರಭದ್ರೇಶ್ವರ ಗುಡಿಗೆ ಖಡ್ಗ, ಧೂಪ ಹೇಳುತ್ತಾ (ಪುರವಂತಿಕೆ ಎಂದು ಕೆಲವು ಭಾಗಗಳಲ್ಲಿ ಹೇಳುವರು) ಹೋಗುತ್ತಾರೆ. ನಾನು ಚಿಕ್ಕವನಿದ್ದಾಗ ಕಂಡ ದೃಶ್ಯಗಳೆಂದರೆ ಮಹಿಳೆಯರು ಬಹಿಷ್ಠೆಯಾದಾಗ- ಮೂರು ದಿನವೂ (ದೇವರ) ಪೂಜೆ ಕೋಣೆಗೆ ಪ್ರವೇಶವಿರುತ್ತಿರಲಿಲ್ಲ.

ಆಂಧ್ರದ ಕೆಲವು ಭಾಗಗಳಲ್ಲಿದ್ದಂತೆಯೇ ತಮಿಳುನಾಡಿನ ಚಿದಂಬರಂ, ಮೈಲಾಮ್, ಪಾಂಡಿಚೇರಿಯಲ್ಲೂ ವೀರಶೈವ ಸಂಪ್ರದಾಯಸ್ತರು ಇದ್ದಾರೆ.

ಅಂದರೆ, ಮೂಲದಲ್ಲಿ ವೀರಶೈವರಿದ್ದು- ಆಗ ಮಾಂಸಾಹಾರಿಗಳೇ ಇರಬಹುದು-ತಮ್ಮ ಆಚಾರ ವಿಚಾರಗಳ ಬಗ್ಗೆ ಆದರಣೆ ಕಡಿಮೆ ಎನ್ನಿಸಿ ಪ್ರಗತಿಪರ, ಮಾನವೀಯ ಮಿಡಿತದ ಬಸವಾದಿ ಪ್ರಮಥರ ಚಿಂತನೆ, ತ್ಯಾಗದ ಫಲವಾಗಿ ನಮ್ಮ ಪೂರ್ವಿಕರು, (ವೀರಶೈವವನ್ನು ಬಿಟ್ಟು) ಇಷ್ಟಲಿಂಗ ಧರಿಸಿ ಲಿಂಗಾಯತರಾದರೆಂದು ತಿಳಿದುಬರುತ್ತದೆ. ಅಂಥ ವೀರಶೈವ ಮೂಲದಿಂದ ಬಂದವರು ವೀರಶೈವ ಲಿಂಗಾಯತ ಎಂದು ಕರೆದುಕೊಳ್ಳುತ್ತ. ಅದೇ ರೀತಿ ಪಂಚಮಶಾಲಿ ಲಿಂಗಾಯತರು, ರೆಡ್ಡಿ ಲಿಂಗಾಯತರು, ಬಣಜಿಗ ಲಿಂಗಾಯತರು, ಸಾದು ಲಿಂಗಾಯತರು. ಆದರೆ ವಾಸ್ತವವಾಗಿ ತಮ್ಮ ಮೂಲವನ್ನೇ ತೊರೆದು ಲಿಂಗಾಯತರಾದ ಮೇಲೆ ಎಲ್ಲರೂ ಧರ್ಮದ ಹೆಸರು "ಲಿಂಗಾಯತ" ಮಾತ್ರ ಹೇಳಬೇಕೇ ವಿನಾ ಒಳಜಾತಿಗಳ ಹೆಸರು ಹೇಳಬಾರದು, ಬರೆಸಬಾರದು ಮತ್ತು ಲಿಂಗಾಯತರೆಲ್ಲರೂ ಒಂದೇ ಎಂಬ ಭಾವನೆ ಮೂಡಬೇಕು. ಅದಕ್ಕಾಗಿ ಲಿಂಗಾಯತ ಜನಾಂದೋಲನ ಕಾರ್ಯಕ್ರಮದ ಅಂಗವಾಗಿ ಜನಜಾಗೃತಿ ಮೂಡಿ ನಾವು ಯಾರಿರಬೇಕೆಂಬ ಚರ್ಚೆಗೆ ಈ ಮೈದಕೂರಿನ ವೀರಶೈವರ ಪ್ರಸಂಗ ಒಂದು ಸ್ಪಷ್ಟ ನಿರ್ದೇಶನ ನೀಡುತ್ತಿದೆ.

ಈಗ ನೀವೆ ಹೇಳಿ ಬಸವ ಪ್ರಣೀತ ಲಿಂಗಾಯತದಲ್ಲಿರುವ ಆಚಾರ, ವಿಚಾರಗಳು, ದೇವರ ಕಲ್ಪನೆ, ಭೇದ ರಹಿತ ಜೀವನ ಶೈಲಿ, ಸಮೃದ್ಧ ಸಂತೃಪ್ತ, ಸರಳ, ಸುಂದರ ಸಹಜ ದಿವ್ಯ ನವ ಸಮಾಜದ ಸಮಗ್ರತೆ ಮತ್ತು ಇದಕ್ಕೆ ಭಿನ್ನವಾಗಿ ವೀರಶೈವರಲ್ಲಿರುವ ಮಾಂಸಾಹಾರಿಗಳಾಗಿ ದೇವತಾ ಆರಾಧನೆ, ಶ್ರೇಣೀಕೃತ ಸಮಾಜಕ್ಕೆ (ladder type) ಒತ್ತು ಕೊಡುವ ಭಾವನೆಗಳು ಒಂದೇ ಏನು ?

ಪ್ರಗತಿಪರ, ವಿಶ್ವವಿನೂತನ, ಉದಾತ್ತ, ಮಮತೆಯೇ ಮೈವೆತ್ತಂಥ ಸಹೃದತೆಯ, ಮನ ಮಿಡಿಯುವ ಹೆಮ್ಮೆಯಿಂದ ಮನನ ಮಾಡುವ, ಮಾನವೀಯ ಲಿಂಗಾಯತ ಧರ್ಮವನ್ನು ಬಸವಾದಿ ಶರಣರು ಪ್ರಪಂಚದ ಪ್ರಥಮ ಪಾರ್ಲಿಮೆಂಟ್ ಆದ ಅನುಭವ ಮಂಟಪದಲ್ಲಿ ಚರ್ಚಿಸಿ, ಆಚರಿಸಿ, ಸೂತ್ರೀಕರಿಸಿ ಕೊಟ್ಟಿರುವಾಗ ಇದರ ತದ್ವಿರುದ್ಧವಾದ ಆಚಾರ, ವಿಚಾರಗಳ ವೀರಶೈವ ಅದ್ವೇಗೆ ಒಂದೇ ಎನ್ನಲು ಸಾಧ್ಯ ?

ಮಠಾಧೀಶರು, ಸಾಹಿತಿಗಳು, ಬಸವಪ್ರಣೀತ ಇಷ್ಟಲಿಂಗಧರಿಸಿಯೂ ವೀರಶೈವರೆಂದು ತಪ್ಪಾಗಿ ತಾವೇ ಕರೆದುಕೊಳ್ಳುವವರು ಉತ್ತರಿಸಲಿ ಎಂದು ನಮ್ರವಾಗಿ ಕೇಳಿಕೊಳ್ಳುವೆ.

ಕೆ. ಬಸವರಾಜ

ಬ್ರಾಂಚ್ ಮ್ಯಾನೇಜರ್, (L.I.C. Adoni)

ಲಿಂಗಾಯತ ಒಳಪಂಗಡಗಳ ಪ್ರಚೋದನೆ ನಿಜಾರ್ಥದಲ್ಲಿ ಸಂಘಟನೆ ಅಲ್ಲ

- ಡಾ॥ ಶಿ.ಬಾ. ಪಾಟೀಲ್., ಸಂಕೇಶ್ವರ

ಪಂಚಮಸಾಲಿ ಲಿಂಗಾಯತರ ಸಂಘಟನೆ ಕುರಿತು ಬೆಳಗಾವಿಯಲ್ಲಿ ಸಭೆ ಸೇರಿ ಕೆಲವು ನಿರ್ಣಯ ಕೈಗೊಂಡದ್ದಕ್ಕೆ ಇವರಲ್ಲಿರುವ ಸಮಾಜದ ಕಾಳಜಿಗಾಗಿ ಅಭಿನಂದನೆಗಳು. ಇದರಲ್ಲಿ ಕೂಡಿದ ಪ್ರಮುಖರಲ್ಲಿ ಸಾಮಾನ್ಯವಾಗಿ ಅಧಿಕಾರದಿಂದ ವಂಚಿತರಾದವರು. ಇವರಿಗೆಲ್ಲ ಅಧಿಕಾರವಿದ್ದಾಗ ತಮ್ಮವರ ಬಗ್ಗೆ ನೆನಪು ಬರುವುದು ಒತ್ತಟ್ಟಿಗೆ ಇರಲಿ ಹತ್ತಿರಕ್ಕೆ ಕೂಡ ಸೇರಿಸಿಕೊಳ್ಳುವುದಿಲ್ಲ. ಇವರೆಲ್ಲ ಅಧಿಕಾರದಲ್ಲಿದ್ದಾಗ ಯಾವ ಪಂಚಮಸಾಲಿ ಲಿಂಗಾಯತನನ್ನು ಅವನ ಪ್ರತಿಭೆ ಗುರುತಿಸಿ ಕಂಡುಹಿಡಿದು ಮೇಲೆತ್ತಿದಂತಹ ಒಂದಾದರೂ ಉದಾಹರಣೆ ಇದೆಯೆ ? ತಮ್ಮಲ್ಲಿ ಎದೆಗಾರಿಕೆ ಇದ್ದರೆ ಅದನ್ನು ಎದೆ ತಟ್ಟಿ ಹೇಳಲಿ.

ನಿರ್ದಿಷ್ಟವಾದ ಸಿದ್ಧಾಂತವಿರುವ ವಿಶ್ವದ ಪ್ರಮುಖ ಧರ್ಮಗಳಲ್ಲಿ 1. ಧರ್ಮಗುರು 2. ಧರ್ಮ ಸಂಹಿತೆ 3. ಧರ್ಮ ಧ್ವಜ 4. ಧರ್ಮ ಕ್ಷೇತ್ರ 5. ಧರ್ಮದ ಸಂಕೇತ 6. ಧರ್ಮದ ಧ್ಯೇಯ ಗಳಿರುತ್ತವೆ. ಆದರೆ ಪಂಚಮಸಾಲಿ ಲಿಂಗಾಯತರಿಗೆ ಇವು ಇವೆಯೇ ? ಹೆಗ್ಗಣವನ್ನು ಬಿಲದಲ್ಲಿ ಇಟ್ಟು ಬಿಲದ ಮೇಲೆ ಸಾರಿಸಿದಂತೆ ಇವರ ಉದ್ದೇಶ. ಇಂಥವರು ಮಠಾಧೀಶರ ತಲೆಯ ಮೇಲೆ ಗೂಬೆ ಕೂಡ್ರಿಸುವ ಕಾರ್ಯ ಮಾಡಿದರೆ ಯಾರಿಗೆ ತಿಳಿಯುವದಿಲ್ಲ ? ಇದು ಪಂಚ ಪೀಠದವರ ಕೃಪಾಪೋಷಿತ ಸಂಘಟನೆ ಎಂಬುದು ಯಾರಿಗೆ ಗೊತ್ತಿಲ್ಲ ?

ಸಮಾಜದ ಹಿರಿಯರೇ, ಪಂಚಮ ಸಾಲಿ, ಬಣಜಿಗ, ಸಾದರ, ನೊಳಂಬ, ಚತುರ್ಥ, ಒಕ್ಕಲಿಗ, ಕುಂಬಾರ, ಕಂಬಾರ, ಹಡಪದ, ತೋಟಿಗ, ಮಾಳಿ ಮುಂತಾದವರೆಲ್ಲಾ ಲಿಂಗಾಯತರೆ! ಈ ಎಲ್ಲ ಒಳ ಪಂಗಡದವರೆಲ್ಲಾ ಒಡೆದು ಸಂಘಟನೆ ಮಾಡುತ್ತ ಹೋದಲ್ಲಿ ಲಿಂಗಾಯತ ಧರ್ಮದ ಗತಿ ಅಧೋಗತಿ! ಇಂಥ ಸಣ್ಣ ಬುದ್ಧಿಯನ್ನು ಬಿಟ್ಟು ಲಿಂಗ ಉಳ್ಳವರೆಲ್ಲಾ ಲಿಂಗಾಯತರು ಎಂದು ತಿಳಿದು ತಮ್ಮ ಒಳಪಂಗಡಗಳನ್ನು ತೊರೆದು ವಚನ ಸಾಹಿತ್ಯವನ್ನು ಧರ್ಮ ಸಂಹಿತೆಯನ್ನಾಗಿ ಮಾಡಿಕೊಂಡು, ಇವ ಪಂಚಮ ಸಾಲಿ, ಇವ ಬಣಜಿಗ, ಇವ ನೊಣಬ, ಇವ ಚತುರ್ಥ ಎಂದು ಭೇದ ಕಲ್ಪಿಸದೇ ಇವ ನಮ್ಮವ, ಇವ ನಮ್ಮವ, ಇವ ನಮ್ಮವ ಎಂದು ವಿಶ್ವಗುರುವನ್ನು ಆಧಾರ ಕಂಬವನ್ನಾಗಿರಿಸಿಕೊಂಡು ಜಾತಿ ವರ್ಣ ವರ್ಗರಹಿತವಾದ ಧರ್ಮ ಸಹಿತವಾದ ಶರಣ ಸಮಾಜವನ್ನು ಕಟ್ಟಲು ಮುಂದಾಗಿರಿ. ಎಲ್ಲರೂ ನಿಮ್ಮನ್ನು ಹಿಂಬಾಲಿಸುತ್ತಾರೆ. ಒಳ ಪಂಗಡಗಳನ್ನು ಪ್ರಚೋದಿಸುತ್ತ ಹೋದಲ್ಲಿ ಸಮಾಜದ ನಾಶವನ್ನು ತಾವೇ ತಂದುಕೊಂಡಂತೆ ಎಂದು ಹೇಳದೆ ಗತ್ಯಂತರವಿಲ್ಲ.

ಈ ಹೇಳಿಕೆಗೆ ಸಹಿ ಹಾಕಿದವರು.-

ಡಾ॥ ಶಿ.ಬಾ. ಪಾಟೀಲ, ಎಸ್.ಬಿ. ಜೋಡಳ್ಳಿ., ಹುಕ್ಕೇರಿ, ಎಸ್.ಡಿ. ಬಂಗಾರಿ, ಅಣ್ಣಪ್ಪ ವಾಲಿ, ಬೈಲಹೊಂಗಲ, ಬಿಜಲಿ., ಗೋಕಾಕ, ಎ.ಸಿ. ಬೆಂಡಿಗೇರಿ., ಬೆಳಗಾಂವ, ಸೌ॥ ಮಾಲುತಾಯಿ ಲಿಂಗಾಯತ., ಇಚಲಕರಂಜಿ, ಕೃಷ್ಣಪ್ಪ ಮುಸಳೆ., ಗಡಹಿಂಗ್ಲಾಡ, ಶಂಕರಗೌಡ ದೇಸಾಯಿ., ಸಂಕೇಶ್ವರ ಅಲ್ಲದೇ ಲಿಂಗಾಯತ ಧರ್ಮ ಮಹಾಸಭೆಯ ಜಿಲ್ಲಾ ಘಟಕದ ಸದಸ್ಯರು.

ಮತ್ತೀಪುರದಲ್ಲಿ ಬಸವ ಜಯಂತಿ

- ರಾಜಮಣಿ ಮಲ್ಲಿಕಾರ್ಜುನಪ್ಪ

ಚಾಮರಾಜನಗರ ಜಿಲ್ಲೆ.ಕೊಳ್ಳೆಗಾಲ ತಾಲ್ಲೂಕು.ಮತ್ತೀಪುರ ಗ್ರಾಮದ ಶರಣ ಸು.ಮಲ್ಲಿಕಾರ್ಜುನಪ್ಪ ಅವರ ಸ್ವಗೃಹದಲ್ಲಿ ವಿಶ್ವಗುರು ಬಸವಣ್ಣನವರ ಜಯಂತ್ಯುತ್ಸವ, ರಾಷ್ಟ್ರೀಯ ಬಸವ ದಳದ ಪ್ರಾರಂಭೋತ್ಸವ ಗೃಹ ಪ್ರವೇಶೋತ್ಸವ, ಕು.ಬಸವೇಶನ ಜಾವಳ ಕಾರ್ಯಕ್ರಮಗಳ ಸಮಾರಂಭವನ್ನು 14-7-2002 ರಂದು ಏರ್ಪಡಿಸಲಾಗಿತ್ತು.

ದಿವ್ಯ ಸಾನ್ನಿಧ್ಯವನ್ನು ಕರ್ನಾಟಕ ರಾಜ್ಯಾದ್ಯಂತ ಮತ್ತು ನೆರೆಯ ರಾಜ್ಯಗಳಲ್ಲಿ ಅಭೂತಪೂರ್ವ ಪ್ರವಚನಗಳನ್ನು ನಡೆಸಿ, ಕೂಡಲಸಂಗಮದಲ್ಲಿ ಶರಣ ಮೇಳ ಪ್ರಾರಂಭಿಸಿ, ಜನರಲ್ಲಿ ಅಪೂರ್ವ ಜಾಗೃತಿಯನ್ನು ಉಂಟು ಮಾಡಿ, ಕಾಟೇರಿ ಅಣೆಕಟ್ಟು ಪ್ರದೇಶ ನೀಲಗಿರಿ, ಹೈದರಾಬಾದ್, ಬೆಂಗಳೂರು, ಧಾರವಾಡ, ಮುಂಬಯಿ, ನವದೆಹಲಿಗಳಲ್ಲಿ ಅಖಿಲ ಭಾರತ ಬಸವ ಧರ್ಮ ಸಮ್ಮೇಳನಗಳನ್ನು ಸಂಘಟಿಸಿ, ಬಸವ ಧ್ವಜವನ್ನು ಏರಿಸಿ, ಇಂಗ್ಲೆಂಡ್, ಅಮೆರಿಕ, ಕೆನಡಾ ದೇಶಗಳಲ್ಲಿ ಸಂಚರಿಸಿ, ಬಸವ ಲಿಂಗಾಯತ ಧರ್ಮ ತತ್ವದ ವೈಶಿಷ್ಟ್ಯಗಳನ್ನು ಸಾರಿ ಬಂದಿರುವ ಮಹಾಮಾತೆ, ಜನತಾ ಜಗದ್ಗುರು, ವಿಶ್ವಧರ್ಮ ಪ್ರಸಾರಕಿ, ಪ್ರವಚನ ಚಕ್ರವರ್ತಿನಿ, ವಚನವಾಙ್ಮಯ ವಿಶಾರದೆ, ಅಪೂರ್ವ ವಾಗ್ಮಿ, ದೇಶಪ್ರೇಮಿ, ಕನ್ನಡ ನಾಡು ನುಡಿಗೆ ಅಪಾರ ಕೊಡುಗೆ ನೀಡಿರುವವರು, ಸಂಶೋಧಕರು, ಕವಿಗಳು, ಶ್ರೇಷ್ಠ ಪ್ರವಚನಕಾರರು, ಸಂಪಾದಕರು, ಕಾದಂಬರಿಕಾರರು, ಪ್ರಬಂಧಕಾರರು, ಜ್ಞಾನದಾನದಲ್ಲಿ ಅಗ್ರಗಣ್ಯರು, ಜಗತ್ತಿನ ಪ್ರಥಮ ಮಹಿಳಾ ಜಗದ್ಗುರುಗಳು, ಕೂಡಲಸಂಗಮದ ಬಸವಧರ್ಮದ ಮಹಾಜಗದ್ಗುರು ಪೀಠಾಧ್ಯಕ್ಷರಾದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿ ಅವರು ವಹಿಸಿದ್ದರು. ಅವರು ಇಷ್ಟಲಿಂಗ ಪೂಜೆಯನ್ನು ಪ್ರಾಯೋಗಿಕವಾಗಿ ಸಭೆಯಲ್ಲಿ ಮಾಡಿತೋರಿಸಿ, ಬಸವ ಧ್ವಜಾರೋಹಣ ಮಾಡಿಸಿ, ಕು.ಬಸವೇಶನ ಜಾವಳ ಕಾರ್ಯ ನೆರವೇರಿಸಿ, ಗೃಹಪ್ರವೇಶ ಮಾಡಿ, ರಾಷ್ಟ್ರೀಯ ಬಸವದಳದ ಶಾಖೆಯನ್ನು ಉದ್ಘಾಟಿಸಿ, ಅದು ಜನರಿಗೆ ಉದಾತ್ತ ಸಂಸ್ಕಾರವನ್ನು ನೀಡುವ ಸಂಸ್ಥೆಯಾಗಲೆಂದು ಹಾರೈಸಿದಾಗ ಜನ ಮಂತ್ರಮುಗ್ಧರಾದರು. ಅವರು ಬೆಳಿಗ್ಗೆ 10 ಗಂಟೆಯಿಂದ ಸಂಜೆ 4-30 ರ ವರೆಗೆ ಸುದೀರ್ಘ ಕಾಲ ಒಂದು ನಿಮಿಷವೂ ಬಿಡುವಿಲ್ಲದೆ ಧಾರ್ಮಿಕ ವಿಷಯ ಕುರಿತು ಭಕ್ತರ ಸಂದೇಹಗಳಿಗೆ ಉತ್ತರ ನೀಡಿದಾಗ, ಅವರ ತಾಳ್ಮೆ, ಬಸವಧರ್ಮ ಪ್ರಚಾರದಲ್ಲಿ ಇರುವ ಕಳಕಳಿ ಅವರ ಬಹುಮುಖ ಪ್ರತಿಭೆಯ ಪರಿಚಯ ಮಾಡಿಕೊಟ್ಟಿತು. ಲಿಂಗಾಯತ ಮತ್ತು ವೀರಶೈವ ಬೇರೆ ಬೇರೆ ಎಂದು ಸ್ಪಷ್ಟಪಡಿಸಿ, ಲಿಂಗಾಯತವು ಪರಿಪೂರ್ಣ ಸ್ವತಂತ್ರ ಧರ್ಮ ಹೇಗೆ ಎಂದು ಸಭಿಕರುಗಳು ಕೇಳಿದ ಪ್ರಶ್ನೆಗಳಿಗೆ ಸಮಾಧಾನ ಹೇಳಿದರು.

ಮುಡಿಗುಂಡದ ಶ್ರೀ ಶ್ರೀ ಶ್ರೀಕಂಠಸ್ವಾಮಿಗಳು ಹಾಗೂ ಗುಂಡೇಗಾಲದ ಶ್ರೀ ಶ್ರೀ ವೃಷಭರಾಜೇಂದ್ರ ಸ್ವಾಮಿಗಳು ಸಮಾರಂಭದಲ್ಲಿ ಉಪಸ್ಥಿತರಿದ್ದು ಆಶೀರ್ವದಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಮಾಜಿ ಶಾಸಕರಾದ ಶರಣ ಕೆ.ಪಿ.ಶಾಂತಮೂರ್ತಿ ವಹಿಸಿದ್ದರು.

ಪ್ರಾಸ್ತಾವಿಕ ಭಾಷಣ ಮಾಡಿದ ಶರಣ ಸು.ಮಲ್ಲಿಕಾರ್ಜುನಪ್ಪ ಅವರು, ''ಇಂದು ಸಮಾಜದಲ್ಲಿ ಮಾನವೀಯ ಮೌಲ್ಯಗಳು ನಶಿಸುತ್ತಿದ್ದು, ನೈತಿಕ ನಿಯಮಗಳು ಪತನವಾಗುತ್ತಿದ್ದು, ಆಧ್ಯಾತ್ಮಿಕ ಭಾವನೆಗಳು ತಲೆಕೆಳಗಾಗಿ, ಅಶಾಂತಿ ಹೆಚ್ಚಾಗಿದೆ ಎಂದರು. ವಿಶ್ವದಲ್ಲಿ ಇಂದಿನ ಸ್ಥಿ ತಿಯಲ್ಲಿ ಧರ್ಮಜಾಗೃತಿಯೊಂದೇ ಸರ್ವರನ್ನು ಸಂರಕ್ಷಿಸುವ ಮಾರ್ಗ. ಇದರ ಮಹತ್ವವನ್ನು ಅರಿತು ಪ್ರತಿಯೊಬ್ಬ ವ್ಯಕ್ತಿಯು ನಡೆದಾಗ ಮಾತ್ರ ದೇಶದ ಕಲ್ಯಾಣ ಸಾಧ್ಯವೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ನಮ್ಮ ಜನರಿಗೆ ಬಸವಣ್ಣನವರ ಪರಿಚಯ ಮಾಡುವುದೇ ಇಂತಹ ಆಚರಣೆಯ ಉದ್ದೇಶ. ಜಯಂತ್ಯುತ್ಸವಗಳನ್ನು ಆತ್ಮಶಾಂತಿಗಾಗಿ,,. ಲೋಕ ಕಲ್ಯಾಣಕ್ಕಾಗಿ ಆಚರಿಸುವ ಅಗತ್ಯವಿದೆ. ಒಟ್ಟಿನಲ್ಲಿ ಬಸವತತ್ತ್ವವು ಇಂದಿನ ವಿಶ್ವಶಾಂತಿಗೆ ಪರಿಹಾರ'' ಎಂದರು.

''ಲಿಂಗಾಯತ ಧರ್ಮ ವೀರಶೈವ ಪಂಥ ಬೇರೆ - ಬೇರೆ ಒಂದೇ ಅಲ್ಲ''

- ಸಿ.ಬಿ. ಬೇವನೂರ, ಬಿಜಾಪುರ

ಡಾ॥ ಎಂ.ಚಿದಾನಂದಮೂರ್ತಿಯವರ ''ವೀರಶೈವ-ಲಿಂಗಾಯತ ಬೇರೆಯಲ್ಲ ; ಎರಡೂ ಒಂದೇ - ಒಂದು ಜಿಜ್ಞಾಸೆ'' ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಮಂಗಳವಾರ ದಿನಾಂಕ 25-06-2002 ರಂದು ಅನಿಸಿಕೆಯಲ್ಲಿ ಮುದ್ರಣವಾದ ಲೇಖನವನ್ನು ಓದಿ ಇಂತಹ ದೊಡ್ಡ ಸಾಹಿತಿಗಳು ಹಾಗೂ ಸಂಶೋಧಕರು ಸಮಾಜವನ್ನು ತಪ್ಪು ದಾರಿಗೆ ಎಳೆಯುವುದೇ ಎನಿಸಿತು. ಅವರದೇ ಲೇಖನದ ಸಾರಾಂಶ ಭಾಗ (4)ರಲ್ಲಿ ಅವರ (ವಿಶ್ವಗುರು ಬಸವಣ್ಣನವರ) ಕಾಲದಲ್ಲಿ ವೀರಶೈವ ಪಥವು ಒಂದು ಪಂಥವನ್ನೂ, ಆ ಪಂಥದ ಅನುಯಾಯಿಯನ್ನು ಸೂಚಿಸುತ್ತಿತ್ತು ಎಂದು ಹೇಳಿದ್ದಾರೆ. ಅಂದರೆ ವೀರಶೈವವು ಒಂದು ಧರ್ಮವಲ್ಲ ಅದು ಶೈವ ಧರ್ಮದ ಒಂದು ಪಂಥ (ಶೈವ ಧರ್ಮದ ಕಾಳಾಮುಖಿ ಶೈವ, ಶುದ್ಧ ಶೈವ, ಇತ್ಯಾದಿ ಏಳು ಪಂಥಗಳಲ್ಲಿ ವೀರಶೈವವೂ ಒಂದು)ಎಂದು ಸಿದ್ಧಪಡಿಸುತ್ತಾರೆ.

ಡಾ॥ ಎಂ.ಚಿದಾನಂದಮೂರ್ತಿಯವರ ಸದರಿ ಲೇಖನದ ಸಾರಾಂಶ (1) ರಲ್ಲಿ ಹೇಳಿರುವಂತೆ ವೀರಶೈವ ಪಂಥದ ಪ್ರಾಚೀನತೆ ಬಸವಪೂರ್ವ ಕಾಲಕ್ಕೆ ಹೋಗುತ್ತದೆ.ಇದನ್ನು ನಾವು ಒಪ್ಪುತ್ತೇವೆ.ಇದರ ಸ್ಥಾಪಕರು ಯಾರು ಎಂದು ಇವರಿಗೆ ಗೊತ್ತಿಲ್ಲ.ಇದು ಅವರ ಅಪ್ರಾಮಾಣಿಕತೆ ಅಥವಾ ಅಜ್ಞಾನವನ್ನು ತೋರಿಸುತ್ತದೆ. ಶೈವಧರ್ಮದ ಸ್ಥಾಪಕ ಭಾರತದ ಮಹಾನ್ ಯೋಗಿ ಶಿವ. ಒಂದು ಧರ್ಮದಲ್ಲಿ ಮತ್ತೊಂದು ಧರ್ಮ ಇರುವುದಿಲ್ಲ.ಆದರೆ ಕಾಲಾನಂತರದಲ್ಲಿ ಪಂಥಗಳು ಹುಟ್ಟಿಕೊಳ್ಳುತ್ತವೆ. ಶೈವ ಧರ್ಮದಲ್ಲಿ ಏಳು ಪಂಥಗಳು ಹುಟ್ಟಿಕೊಂಡವು; ವೀರಶೈವ ಅದರಲ್ಲಿ ಒಂದು. ವೀರಶೈವ ಪದವೇ ಹೇಳುವಂತೆ ವೀರ + ಶೈವ- ವೀರಶೈವ. ಶೈವ-ಇದು ನಾಮಪದ. ವೀರ-ಇದು ವಿಶೇಷಣ. ಶೈವರಲ್ಲಿ ಯಾರು ವೀರರೋ ಅವರು ವೀರಶೈವರು. ಅಂದರೆ ಶೈವರಲ್ಲಿ ಧೈರ್ಯವಾಗಿ ಯಾರು ಶಿವನೊಬ್ಬನನ್ನೇ ಶಿವಲಿಂಗರೂಪದಲ್ಲಿ ಆರಾಧಿಸುವರೋ ಅವರು ವೀರಶೈವರಾದರು. ಅತ್ಯಂತ ನಿಷ್ಠಾವಂತ ಶಿವನ ಉಪಾಸಕರು ವೀರಶೈವರು.

ಲಿಂಗಾಯತ ಧರ್ಮವನ್ನು ವಿಶ್ವಗುರು ಬಸವಣ್ಣನವರು ಸ್ಥಾಪಿಸುವ ಪೂರ್ವದಲ್ಲಿ ಅನೇಕ ಶರಣರು ವೀರಶೈವರಾಗಿದ್ದುದೇ ಮತ್ತು ಅವರು ತಮ್ಮ ವಚನಗಳಲ್ಲಿ ವೀರಶೈವದ ಆಚರಣೆಗಳ ಬಗ್ಗೆ ಪ್ರಸ್ತಾಪ ಮಾಡಿದುದರಿಂದ, ಈ ಕೆಲವರಿಗೆ ಲಿಂಗಾಯತ ಸಮಾಜದಲ್ಲಿ (confusion) ಗೊಂದಲ ಎಬ್ಬಿಸಲು ಸಾಧ್ಯವಾಗಿದೆ. ಡಾ. ಎಂ.ಚಿದಾನಂದಮೂರ್ತಿಯವರು ಲೇಖನ ಸಾರಾಂಶ (2)ರಲ್ಲಿ ಗುರುಬಸವಣ್ಣನವರ ಶೈವರಾಗಿದ್ದರು ಎಂದು ಹೇಳಿದ್ದಾರೆ.ಇದು ಸತ್ಯ.ಆಗ ಅವರು ಅನೇಕ ದೇವತೆಗಳನ್ನು (ಗುರುಬಸವಣ್ಣನವರ ತಂದೆ ಮಾದರಸರು ಶೈವ ಬ್ರಾಹ್ಮಣರು)ಪೂಜಿಸುತ್ತಿದ್ದರು-ಎಂಬುದನ್ನು ನಾವು ತಿಳಿದಿದ್ದೇವೆ. ಅದೇ ರೀತಿ ಜಗನ್ಮಾತೆ ಅಕ್ಕಮಹಾದೇವಿಯ ಹೆತ್ತವರು ಲಿಂಗಾಯತ ಧರ್ಮ ಸ್ವೀಕರಿಸುವ ಪೂರ್ವದಲ್ಲಿ ವೀರಶೈವರಾಗಿದ್ದರು. ಅವರ ತಂದೆತಾಯಿಗಳಾದ ಓಂಕಾರಶೆಟ್ಟಿ ಮತ್ತು ಲಿಂಗಮ್ಮ ಇವರುಗಳು ನಿಷ್ಠಾವಂತ ಶಿವಭಕ್ತರಾಗಿದ್ದರು. ಹಾಗೂ ಸೌಂದರ ನಂಬಿ, ತಿರುನೀಲಕಂಠ ಮುಂತಾದ 63 ಪುರಾತನರು ಸಹ ನಿಷ್ಠಾವಂತ ಶಿವಭಕ್ತರಾಗಿದ್ದರು. ಇವರು ಸ್ಥಾವರಲಿಂಗ (ಶಿವಲಿಂಗ) ಪೂಜಕರು, ಸ್ಥಾವರಲಿಂಗ (ಶಿವಲಿಂಗ)ವು ಶಿವನ ಪ್ರತೀಕ.

ಡಾ॥ ಎಂ.ಚಿದಾನಂದಮೂರ್ತಿಯವರು ತಮ್ಮ ಲೇಖನ ಇಷ್ಟಲಿಂಗ ಎಂಬ ತಲೆಬರಹ ಭಾಗದಲ್ಲಿ ಗುರುಬಸವಣ್ಣನವರಿಗೆ ಇಷ್ಟಲಿಂಗವು ಶೈವ ಗುರುವಿನಿಂದ ಪ್ರಾಪ್ತವಾಗಿದೆ ಎಂದು ಹೇಳಿದ್ದಾರೆ.ಇದು ಅತ್ಯಂತ ಹಾಸ್ಯಾಸ್ಪದ ಹೇಳಿಕೆಯಾಗುತ್ತದೆ. ಯಾಕೆಂದರೆ ಈ ಶೈವಗುರುಗಳು ಇಷ್ಟಲಿಂಗ ಧರಿಸಿ ಪೂಜಿಸುತ್ತಿದ್ದರು ಎಂದಾಗುತ್ತದೆ. ಅಂದರೆ ಶೈವರು ಇಷ್ಟಲಿಂಗ ಪೂಜಕರು ಎಂದು ಈ ಜಗತ್ತಿನಲ್ಲಿ ಯಾರಾದರೂ ಪ್ರತಿಪಾದಿಸುವವರಿದ್ದರೆ ಅವರು ಮಹಾನ್ ಸಂಶೋಧಕ ಡಾ॥ ಎಂ ಚಿದಾನಂದಮೂರ್ತಿಯವರೊಬ್ಬರೆ ಎಂದು ಹೇಳಬೇಕಾಗುತ್ತದೆ.

ಡಾ॥ ಎಂ.ಚಿದಾನಂದಮೂರ್ತಿಯವರು ತಮ್ಮ ಲೇಖನದ ವೀರಶೈವ ತಲೆಬರಹ ಭಾಗದಲ್ಲಿ ಶರಣರ ವಚನಗಳಲ್ಲಿ ವೀರಶೈವರು, ವೀರಶೈವ ದೀಕ್ಷೆ, ವೀರಶೈವಾಗಮ ಎಂದು ಬಳಸಿದ್ದಾರೆ, ಎಂದು ಹೇಳುತ್ತಾರೆ. ಬಳಸಿರಬಹುದು ಆದರೆ ಲಿಂಗಾಯತ ಗುರು, ಲಿಂಗದೀಕ್ಷೆ ಮತ್ತು ಲಿಂಗಾಯತ ಧರ್ಮ ಸಾಹಿತ್ಯವಾದ, ವಚನಸಾಹಿತ್ಯ, ಅನುಕ್ರಮವಾಗಿ ವೀರಶೈವಗುರು, ವೀರಶೈವದೀಕ್ಷೆ, ವೀರಶೈವಾಗಮ, ಇವುಗಳಿಂದ ಪೂರ್ಣವಾಗಿ

ಬೇರೆಯಾಗಿದೆ. ವೀರಶೈವರ ಸಾಹಿತ್ಯ ಆಗಮಗಳು, ಲಿಂಗಾಯತ ಧರ್ಮಸಾಹಿತ್ಯ ಬಸವಾದಿ ಪ್ರಮಥರು ಬರೆದ ವಚನ ಸಾಹಿತ್ಯವಾಗಿದೆ.

ಡಾ|| ಎಂ.ಚಿದಾನಂದಮೂರ್ತಿಯವರು ತಮ್ಮ ಲೇಖನದ ಪ್ರಾರಂಭದಲ್ಲಿ ಲಿಂಗಾಯತ ಧರ್ಮಸ್ಥಾಪಕ ಬಸವಣ್ಣನವರು ಎಂದು ಪ್ರತಿಪಾದಿಸುವ ಮಠಾಧೀಶರೂ ಯಾವುದೇ ಸಾಕ್ಷ್ಯಾಧಾರಗಳನ್ನು ನೀಡಿದಂತಿಲ್ಲ , ಎಂಬ ಹಾರಿಕೆಯ ಹೇಳಿಕೆಯನ್ನು ಕೊಡುತ್ತಾರೆ. ಲಿಂಗಾಯತ ಧರ್ಮದ ಷಡ್‌ಗಣಾಧೀಶರ ವಚನಗಳೇ ವಿಶ್ವಗುರು ಬಸವಣ್ಣನವರು ಲಿಂಗಾಯತ ಧರ್ಮಸ್ಥಾಪಕ ಮೂಲಪುರುಷ ಎಂದು ಸಾರಿ ಸಾಕ್ಷ್ಯ ಹೇಳುತ್ತದೆ.

ಲಿಂಗಾಂಗಯೋಗಿ ಸಿದ್ಧರಾಮೇಶ್ವರರು

(1) ನೋಟದ ಭಕ್ತಿ ಬಸವನಿಂದಾಯಿತು, ಕೂಟದ ಜ್ಞಾನ ಬಸವನಿಂದಾಯಿತ್ತು, ಕಾಣಾ ; ಎಲ್ಲಿಯ ಶಿವಜ್ಞಾನ, ಎಲ್ಲಿಯ ಮಾಟಕೂಟ ಬಸವನಲ್ಲದೆ? ಮಹಾಜ್ಞಾನ, ಮಹಾಪ್ರಕಾಶ, ಬಸವಣ್ಣನ ಧರ್ಮವಯ್ಯಾ ಕಪಿಲಸಿದ್ಧ ಮಲ್ಲಿನಾಥಯ್ಯಾ. ನೋಟದ ಭಕ್ತಿ ಬಸವನಿಂದಾಯಿತು, ಅಂದರೆ ತ್ರಾಟಕದಿಂದ ಕೂಡಿದ ಇಷ್ಟಲಿಂಗ ಪೂಜೆ ಬಸವಣ್ಣನವರಿಂದಾಯಿತ್ತು. ಎಂದರೆ -ಲಿಂಗಾಂಗ ಸಾಮರಸ್ಯ ಬಸವನಿಂದಾಯಿತ್ತು ಎಂದು ಹೇಳುತ್ತಾರೆ.

(2) ಕರುಣ ಬಸವಾ, ಕಾಲಹರ ಬಸವಾ, ಕರ್ಮಹರ ಬಸವಾ, ನಿರ್ಮಳ ಬಸವಾ, ಶಿವಜ್ಞಾನಿ ಬಸವಾ, ನಿಮ್ಮ ಧರ್ಮವಯ್ಯಾ ಈ ಭಕ್ತಿಯ ಪಥವು! ಕರುಣ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ, ನಿಮಗೂ ಎನಗೂ ಬಸವಣ್ಣನ ಧರ್ಮವಯ್ಯಾ, ಲಿಂಗಾಂಗಯೋಗಿ ಸಿದ್ಧರಾಮೇಶ್ವರರು ಇಷ್ಟೊಂದು ಸ್ಪಷ್ಟವಾಗಿ ತಾವು ಮತ್ತು ಶರಣರು ಆಚರಿಸುವ ಧರ್ಮ ಬಸವಣ್ಣನವರ ಧರ್ಮ ಎಂದು ಹೇಳುತ್ತಾ, ದೇವರಿಗೆಯೂ ಸಹಿತ ವಿಶ್ವಗುರು ಬಸವಣ್ಣನವರ ಧರ್ಮವನ್ನು ಆಚರಿಸಲು ಹೇಳಿದ್ದಾರೆ.

ಶೂನ್ಯ ಪೀಠಾಧೀಶ ಅಲ್ಲಮಪ್ರಭುದೇವರು

(3) ಆಯತದಲ್ಲಿ ಪೂರ್ವಾಚಾರಿಯ ಕಂಡೆ
ಸ್ವಾಯತದಲ್ಲಿ ಪೂರ್ವಾಚಾರಿಯ ಕಂಡೆ
ಸನ್ನಿಹಿತದಲ್ಲಿ ಪೂರ್ವಾಚಾರಿಯ ಕಂಡೆ
ಗುಹೇಶ್ವರ ಲಿಂಗದಲ್ಲಿ ಪೂರ್ವಾಚಾರಿ
ಸಂಗನಬಸವಣ್ಣನ ಶ್ರೀ ಪಾದಕ್ಕೆ ನಮೋ ನಮೋ ಎಂಬೆನು

ಅಂಗದ ಮೇಲೆ ಧರಿಸುವ ಇಷ್ಟಲಿಂಗದ ಆಯತ ಪ್ರಾಣದಲ್ಲಿ ಅಳವಡಿಸಿಕೊಳ್ಳುವ ಆತ್ಮಲಿಂಗದ ಸ್ವಾಯತ , ಭಾವದಲ್ಲಿ ಅನುಭವಿಸುವ ಭಾವಲಿಂಗ ಸನ್ನಿಹಿತ ಈ ತತ್ವ - ಅನುಭವಗಳಿಗೆ ಗುರು ಬಸವಣ್ಣನವರೇ ಪ್ರಥಮ ಗುರು. ಇಂತಹ ಪೂರ್ವಾಚಾರಿ ಸಂಗನ ಬಸವಣ್ಣನವರ ಶ್ರೀ ಪಾದಕ್ಕೆ ನಮೋ ನಮೋ ಎಂದಿದ್ದಾರೆ ಅಲ್ಲಮಪ್ರಭುಗಳು.

(4) ಶಿವ, ಗುರುವೆಂದು ಬಲ್ಲಾತನೆ ಗುರು
ಶಿವ, ಲಿಂಗವೆಂದು ಬಲ್ಲಾತನೇ ಗುರು
ಶಿವ, ಜಂಗಮವೆಂದು ಬಲ್ಲಾತನೇ ಗುರು
ಶಿವ, ಪ್ರಸಾದವೆಂದು ಬಲ್ಲಾತನೇ ಗುರು
ಶಿವ, ಆಚಾರವೆಂದು ಬಲ್ಲಾತನೇ ಗುರು
ಇಂತೀ ಪಂಚವಿಧವೇ ಪಂಚಬ್ರಹ್ಮವೆಂದರಿದ ಮಹಾಮಹಿಮ
ಸಂಗನ ಬಸವಣ್ಣ ಎನಗೆಯೂ ಗುರು, ನಿನಗೆಯೂ ಗುರು, ಜಗವೆಲ್ಲಕ್ಕೆಯೂ
ಗುರು ಕಾಣಾ ಗುಹೇಶ್ವರಾ.

ಆದಿಯಲ್ಲಿ ನೀನೆ ಗುರುವಾದ ಕಾರಣ ನಿನ್ನಿಂದ ಹುಟ್ಟಿತ್ತು-ಲಿಂಗ! ಪೂರ್ವಾಚಾರಿ ನೀನೆಯಾದ ಕಾರಣ ಗುಹೇಶ್ವರ ಲಿಂಗದಲ್ಲಿ ಚಂದಯ್ಯಂಗೆ ಲಿಂಗದ ನಿಜವ ತಿಳುಹಾ ಸಂಗನ ಬಸವಣ್ಣಾ (ಅ.ವ.894)

ಬಸವಣ್ಣನವರಿಗೆ ಯಾರೂ ವ್ಯಕ್ತಿಗತ ಗುರುವಿಲ್ಲ, ಲೋಕಗುರು ಪರಮಾತ್ಮನೇ ಅವರ ಗುರು ಎಂದು ಲಿಂಗಾಂಗ ಯೋಗಿ ಸಿದ್ಧರಾಮೇಶ್ವರರು ಹೇಳಿದ್ದಾರೆ.

(5) ನಿನಗೆ ನೀನೆ ಕರ್ತನು ಬಸವಾ, ಎನಗೆ ನೀನೇ ಕರ್ತನು ಬಸವಾ
ನಾ ಮಾಡುವ ಭಕ್ತಿಗೆ ನೀನೆ ಕರ್ತನು ಬಸವಾ ಕರುಣಿ ಕಪಿಲಸಿದ್ಧಮಲ್ಲಿನಾಥಯ್ಯಾ.

ಬಸವಣ್ಣನವರೇ ಇಷ್ಟಲಿಂಗದ ಜನಕರು ಎಂದು ಚಾಮರಸ ಕವಿ ಹೇಳುತ್ತಾನೆ.

(6) ಕಾಯದೊಳು ಗುರು ಲಿಂಗ ಜಂಗಮ, ದಾಯತವನರಿಯಲ್ಕೆ ಬಾಹ್ಯಸ್ಥಲಕ್ಕೆ ಸುಲಭೋಪಾಯದಿಂದಿರಿಟ್ಟು ಬಾಹ್ಯಸ್ಥಲಕ್ಕೆ ಕುರುಹಾಗಿ, ದಾಯದೋರಿ ಸಮಸ್ತ ಭಕ್ತನಿ ಕಾಯವನು ಪಾವನವ ಮಾಡಿದ, ರಾಯ ಪೂರ್ವಾಚಾರ್ಯ ಸಂಗನ ಬಸವ ಶರಣಾರ್ಥಿ.

(7) ಬಯಲನೊಂದು ರೂಪ ಮಾಡಿ ಬಣ್ಣಕ್ಕೆ ತಂದು, ಆ ಬಣ್ಣದ ನಿಜದಲ್ಲಿ ನಿಲಿಸಿದಾತ ನಮ್ಮ ಬಸವಯ್ಯನು ಎಂದು ಗುರುಬಸವಣ್ಣನವರ ಧರ್ಮಪತ್ನಿ ನೀಲಗಂಗಮ್ಮ ತಾಯಿ ಹೇಳಿದ್ದಾರೆ.

(8) ನಿರಾಕಾರದ ಮೂರ್ತಿಯ ಆಕಾರಕ್ಕೆ ತಂದೆಯಲ್ಲ ಬಸವಾ ಆಕಾರದ ಮೂರ್ತಿಯ ಹೃದಯ ಕುಂಜದಲ್ಲಿ ವಾಸಗೊಂಡು ತೋರಿದೆಯಲ್ಲಾ ಬಸವಾ ಎಂದು ಸಿದ್ಧರಾಮೇಶ್ವರರು ಹೇಳಿದ್ದಾರೆ.

(9) ಕರ್ನಾಟಕ ಸರಕಾರ ಮುದ್ರಿಸಿದ 15 ವಚನ ಕೂಟಗಳ ಸಂಪುಟಗಳ ಇಪ್ಪತ್ತು ಸಾವಿರ ವಚನಗಳನ್ನು ಸಾವಧಾನದಿಂದ ಪಠಣ ಮಾಡಿದರೆ ನಮ್ಮ ತಾಯಿ ವಚನಾಂಬಿಕೆ- ನಮ್ಮ ಧರ್ಮದ ತಂದೆ ಯಾರು ಎಂಬುದನ್ನು ಹೇಳುತ್ತಾಳೆ. ಲಿಂಗಾಯತ ಧರ್ಮಪಿತ ವಿಶ್ವಗುರು ಬಸವಣ್ಣನವರು ಎಂದು ಆ ಮಹಾತಾಯಿ ಸ್ಪಷ್ಟವಾಗಿ ಹೇಳುತ್ತಾಳೆ. ಅಂಗೈ ಹುಣ್ಣಿಗೆ ಕನ್ನಡಿ ಏಕೆ? ಗುರುಬಸಪ್ಪ, ಗುರುಬಸವ್ವಾ, ಗುರುಬಸಯ್ಯಾ, ಬಸವಲಿಂಗಪ್ಪ, ಬಸವಲಿಂಗವ್ವಾ, ಬಸವಲಿಂಗಯ್ಯಾ ಎಂಬ ಹೆಸರುಗಳು ನಮ್ಮ ಸಮಾಜದಲ್ಲಿಯ ವ್ಯಕ್ತಿಗಳ ಹೆಸರುಗಳ ಸಾಕ್ಷಿಯಲ್ಲವೆ.? ಬಸವಣ್ಣನವರೆ ನಮ್ಮ ಧರ್ಮಗುರು ಎಂದು ಮೊದಲಿನ ಮೂರು ಹೆಸರುಗಳು ಹೇಳಿದರೆ ನಂತರದ ಮೂರು ಹೆಸರುಗಳು ಇಷ್ಟಲಿಂಗಜನಕ ಎಂದು ಹೇಳುತ್ತವೆ. ದೇವಾಲಯದಲ್ಲಿರುವ ಲಿಂಗ ಶಿವಲಿಂಗ; ಶಿವನ ಪ್ರತೀಕವಾದ ಸ್ಥಾವರಲಿಂಗ ದೇವಾಲಯದಲ್ಲಿರುವುವು. ನಾವು ಮೂಲದಲ್ಲಿ ಶೈವರು, ವೀರಶೈವರು ಆಗಿದ್ದೆವು. ಆದ್ದರಿಂದ ಶಿವಲಿಂಗಪ್ಪ, ಶಿವಲಿಂಗವ್ವ ಶಿವಾನಂದ, ಎಂದೂ ನಮ್ಮಲ್ಲಿ ವ್ಯಕ್ತಿಗಳ ಹೆಸರು ಇಡುತ್ತಾರೆ. ಹನ್ನೆರಡನೇ ಶತಮಾನದಲ್ಲಿ ಲಿಂಗಾಯತ ಧರ್ಮ ಸ್ವೀಕಾರ ಮಾಡಿದವರಲ್ಲಿ ವೀರಶೈವರು - ಹೆಚ್ಚಿನ ಪ್ರಮಾಣದಲ್ಲಿದ್ದಾರೆ. ಅವರಲ್ಲಿ ಕೆಲವರಿಗೆ ಉಳಿದೆಲ್ಲ ಲಿಂಗಾಯತರಿಗಿಂತ ಶ್ರೇಷ್ಠರು ಎಂದೆನಿಸಿಕೊಳ್ಳುವ ಸಣ್ಣತನ ಮನೆಮಾಡಿಕೊಂಡಿತ್ತು. ಆದ್ದರಿಂದ ಅವರು ವೀರಶೈವ - ಲಿಂಗಾಯತರು ಎಂದು ಬರೆದುಕೊಳ್ಳುತ್ತಿದ್ದರು ಮತ್ತು ಹೇಳಿಕೊಳ್ಳುತ್ತಿದ್ದರು. ವೀರಶೈವ - ಲಿಂಗಾಯತ ಇದರಲ್ಲಿ ಲಿಂಗಾಯತ ಮುಖ್ಯ ಪದ - ವೀರಶೈವ ವಿಶೇಷಣೆ ಅಷ್ಟೇ. ಆದರೆ ಈಗ ಕೆಲವರು ಕೇವಲ ವೀರಶೈವರು ಎಂದು ಹೇಳುತ್ತಿದ್ದಾರೆ. ಅವರಿಗೆ ಉಳಿದೆಲ್ಲ ಲಿಂಗಾಯತರೊಂದಿಗೆ ಬೆರೆಯುವ ವಿಶಾಲ ಹೃದಯವಿಲ್ಲ. ವೀರಶೈವ ಹುಟ್ಟಿನಿಂದ ಬರುತ್ತದೆ. ವೀರಶೈವರ ಮನೆಯಲ್ಲಿ ಹುಟ್ಟಿದವ ವೀರಶೈವ ಎಂದೆನಿಸಿಕೊಳ್ಳುತ್ತಾನೆ. ಅಂಗದ ಮೇಲೆ ಇಷ್ಟಲಿಂಗವುಳ್ಳವನು ಲಿಂಗಾಯತ. ಇಷ್ಟಲಿಂಗವು ಬುಲ್ಡೋಜರ್ ಇದ್ದಂತೆ. ಬುಲ್ಡೋಜರ್ ತಗ್ಗುದಿನ್ನೆಗಳನ್ನು ಸಮ ಮಾಡುವಂತೆ ಇಷ್ಟಲಿಂಗವು ಮೇಲು-ಕೀಳು ಎಂಬ ಜಾತಿಗಳನ್ನು ಹೊಡೆದೋಡಿಸಿ ಲಿಂಗಾಯತ ಧರ್ಮವನ್ನು ಕೊಡುತ್ತದೆ. ಪರಮ ಪತಿವ್ರತೆಗೆ ಗಂಡನೊಬ್ಬ ಕಾಣಿರೋ, ನಂಬಬಲ್ಲ ಭಕ್ತನಿಗೆ ದೇವನೊಬ್ಬ ಕಾಣಿರೋ ಎಂಬ ಬಸವ ಸಂದೇಶದಂತೆ ಲಿಂಗಪತಿ - ಶರಣಸತಿ ಎಂಬ ಭಾವನೆಯನ್ನು ಹುಟ್ಟಿಸಿ ಏಕದೇವೋಪಾಸನೆಯನ್ನು ಕಲಿಸುತ್ತದೆ. ಇಷ್ಟಲಿಂಗ ಎಂಬ ದೇವರ ಕುರುಹನ್ನು ದೀಕ್ಷೆ ಪಡೆದು ಧರಿಸಿ ಪೂಜಿಸುವವರು, ಲಿಂಗಾಯತರ ವೀರಶೈವರು ಹೇಗಾಗಲು ಸಾಧ್ಯ ?. ಸಿರಿಯಿದ್ದವನು ಸಿರಿವಂತನೆ ಹೊರತು ಬಡವನಲ್ಲ. ಅಂಗದ ಮೇಲೆ ಲಿಂಗ ಇದ್ದವನು ಲಿಂಗವಂತನು. ಆದ್ದರಿಂದ ನಮ್ಮ ಸಮಾಜಕ್ಕೆ ಲಿಂಗಾಯತ ಶಬ್ದವು ಅತ್ಯಂತ ಸೂಕ್ತ ಹೆಸರು. ಆದರೆ ಡಾ|| ಚಿದಾನಂದ ಮೂರ್ತಿಯವರು ಹಾಗೂ ಅವರ ವಿಚಾರಧಾರೆಯವರು ವೀರಶೈವ ಪದದ ಬಗ್ಗೆ ಏಕೆ ಹುಚ್ಚು ವ್ಯಾಮೋಹ ಬೆಳೆಸಿಕೊಂಡಿದ್ದಾರೆ ಎಂಬ ಚಿಂತೆ ನಮಗೆ. ಆದರಿಂದ ಅಖಿಲ ಭಾರತ ವೀರಶೈವ ಮಹಾಸಭೆಯವರಲ್ಲಿ ವಿನಂತಿ ಏನೆಂದರೆ ಅಖಿಲ ಭಾರತ ಲಿಂಗಾಯತ ಧರ್ಮ ಮಹಾಸಭೆಯೆಂದು ಹೆಸರು ಬದಲಾವಣೆ ಮಾಡಿಕೊಂಡರೆ ನಮ್ಮ ಸಮಾಜಕ್ಕೆ ಮಹಾನ್ ಉಪಕಾರವಾಗುತ್ತದೆ.

ಸಾಮಾನ್ಯವಾಗಿ ಜಗತ್ತಿನ ಬಹುಪಾಲು ಧರ್ಮಗಳು ಸ್ಥಾಪಕರು ಇಲ್ಲವೆ ತತ್ವದ ಹೆಸರು ಪಡೆದುಕೊಂಡಿದೆ. ಅದಕ್ಕೆ ನಾವು ಧರ್ಮಗುರು ಪಡೆದುಕೊಂಡಿದ್ದರೆ ನಮ್ಮ ಧರ್ಮವು ದೇವನ ಹೆಸರನ್ನು ಪಡೆದುಕೊಂಡಿದೆ. ಅದಕ್ಕೆ ನಾವು ಧರ್ಮಗುರು ಬಸವಣ್ಣನವರಿಗೆ ಕೃತಜ್ಞತೆಯನ್ನು ಸಲ್ಲಿಸೋಣ. ಧರ್ಮಗುರು ಬಸವಣ್ಣನವರು, ಧರ್ಮ ಸಂಹಿತೆ-ವಚನ ಸಾಹಿತ್ಯ ಮತ್ತು ಇಷ್ಟಲಿಂಗ ದೇವರನ್ನು ಗಟ್ಟಿಯಾಗಿ ಹಿಡಿದುಕೊಂಡು ಪ್ರಗತಿಪಥದಲ್ಲಿ ಮುಂದೆ ನಡೆಯೋಣ ಎಂದು ಹಾರೈಸುತ್ತೇನೆ.

ಧರ್ಮಕ್ರಾಂತಿಯ ಧೀರಯೋಗಿ
ಲಿಂ॥ ಪೂಜ್ಯ ಶ್ರೀ ಜಗದ್ಗುರು ಲಿಂಗಾನಂದ ಅಪ್ಪಾಜಿ

- ಮಂಜುನಾಥ. ಬ. ಬಂಡಿ

"ಕಳ್ಳನಲ್ಲಿ ಕೂಡಲಸಂಗಮದೇವನನ್ನು ಕಂಡವರೆಲ್ಲರೂ ಬಸವಣ್ಣನಾಗುವರೆನಯ್ಯ ?
ದಿಗಂಬರಿಯಾಗಿ ಕದಳಿ ಬನಕ್ಕೆ ಹೋದವರೆಲ್ಲ ಅಕ್ಕಮಹಾದೇವಿಯಾಗುವರೇನಯ್ಯ?
ಕೈ ಹಿಡಿದ ಹೆಂಡತಿಯನ್ನು ದೇವಿ ಎಂದು ಪೂಜಿಸದವರೆಲ್ಲ ಪರಮಹಂಸರಾಗುವರೇನಯ್ಯ?
ವೃತ್ತಿಯನ್ನು ಕೈ ಬಿಟ್ಟು ವಚನ-ಸಾಹಿತ್ಯ ಸಂಶೋಧನೆಯಲ್ಲಿ ಪ್ರವೃತ್ತರಾದವರೆಲ್ಲರು ಫ.ಗು. ಹಳಕಟ್ಟಿ ಆಗುವರೆನಯ್ಯ ?" ಎಂದು ಲಿಂ॥ ಶರಣ. ಸಿದ್ಧಯ್ಯ ಪುರಾಣಿಕರ ಮಾತಿನಂತೆ -
"ವಿಶ್ವಧರ್ಮ ಪ್ರವಚನ ಮಾಡುತ್ತಿರುವವರೆಲ್ಲರೂ ಲಿಂಗಾನಂದ ಸ್ವಾಮೀಜಿಯಾಗುವರೆನಯ್ಯ ?"

ಎಂದರೆ ಉತ್ಪ್ರೇಕ್ಷೆ ಏನಲ್ಲ. ಈ ಮೇಲಿನ ವಚನವು ಅಭಿಪ್ರಾಯವು 3-4 ದಶಕಗಳಿಂದ ಕನ್ನಡ ನಾಡಿನ, ಬಸವ ಧರ್ಮದ ಭಕ್ತ ಸಮೂಹದ ನಾಲಿಗೆಯ ಮೇಲೆ ಮಾರ್ದನಿಸತೊಡಗಿದೆ ; ಹಬ್ಬಿ ಹಸರಿಸುತ್ತಲೆ ಇದೆ.

ಕಾರಣ ತಮ್ಮ ಅದ್ಭುತವಾದ ವಾಕ್ ಶಕ್ತಿಯಿಂದ ವಿಶ್ವಧರ್ಮ ಪ್ರವಚನದ - ಪಾಂಚಜನ್ಯ ಮೊಳಗಿಸುತ್ತ, ಕಠಿಣವಾದ ಆಧ್ಯಾತ್ಮಿಕ ತತ್ವಗಳನ್ನು, ಲೌಕಿಕ ದೃಷ್ಟಾಂತಗಳೊಂದಿಗೆ ಹೋಲಿಸಿ ಸುಲಭವಾಗಿ ಪ್ರತಿಯೊಬ್ಬರಿಗೂ ಮನಮುಟ್ಟುವಂತೆ ತಿಳಿಸಿ ಹೇಳುವ ವಿನೂತನ ಶೈಲಿಯಿಂದ ಪ್ರವಚನದ ಮೂಲಕ ಅಪ್ರತಿಮ ಕ್ರಾಂತಿಯನ್ನುಂಟು ಮಾಡಿ ಬಸವಧರ್ಮದ ಪುನರುತ್ಥಾನಕ್ಕೆ ತಮ್ಮ ಬಾಳನ್ನೇ ಸವೆಸಿದ, ಪ್ರವಚನ ಪಿತಾಮಹರೆಂದೇ ಖ್ಯಾತರಾದ ಲಿಂ-ಪೂಜ್ಯ ಲಿಂಗಾನಂದ ಅಪ್ಪಾಜಿ ಅವರಿಗೆ ಮೇಲಿನ ವಚನ ಅರ್ಥವತ್ತಾಗಿ ಅನ್ವಯಿಸುತ್ತದೆ.

ನಾಡಿನ ಶಿಷ್ಯವರ್ಗಕ್ಕೆ ಗುರೂಜಿ ಎಂದು ಬಸವಭಕ್ತರ ಸಮೂಹಕ್ಕೆ ಅಪ್ಪಾಜಿ ಎಂದೇ ಚಿರಪರಿಚಿತರಾದ ಲಿಂ. ಪೂಜ್ಯ ಲಿಂಗಾನಂದ ಅಪ್ಪಾಜಿಯವರು ಬಿಜಾಪುರ ಜಿಲ್ಲೆಯ ಪುಣ್ಯಭೂಮಿ ಬಸವನ ಬಾಗೇವಾಡಿ ತಾಲೂಕಿನ ಮನಗೂಳಿಯ ಲಿಂಗವಂತ ಸದ್ಭಕ್ತ ದಂಪತಿಗಳ ಪುತ್ರನಾಗಿ ದಿ-15-09-1931 ರಂದು ಜನಿಸಿದರು. ಸ್ವಾಮೀಜಿಯವರ ಜನ್ಮನಾಮ ಸಂಗಮೇಶ. ಬಾಲ್ಯದಿಂದಲು ದೃಢ ಕಾಯವನ್ನು ಹೊಂದಿ; ಮನೆಯ ಆರ್ಥಿಕತೆಯ ಸಂಕಷ್ಟದ ಮಧ್ಯೆಯು ತಮ್ಮ ಬೌದ್ಧಿ ಪಟುತ್ವದಿಂದ ಹಂತಹಂತವಾಗಿ ಮೇಲೇರಿ ಬಿ.ಎ. ಆನರ್ಸ್ ಪದವಿಯನ್ನು ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಮುಗಿಸಿದರು. ಬೆಳಗಾವಿಯ ರುದ್ರಾಕ್ಷಿ ಮಠದ ಹಾಸ್ಟೆಲಿನಲ್ಲಿದ್ದಾಗ ದಾಸೋಹದ ಮನೆಯ ಮೇಲೆ ಲಿಂಗವಿಲ್ಲದವರಿಗೆ ಪ್ರವೇಶವಿಲ್ಲ ಎಂಬ ವಾಕ್ಯವನ್ನು ನೋಡಿ ಪ್ರತಿನಿತ್ಯ ಸಂಗಮೇಶನು "Linga is the gate pass to dining hall" ಎಂದು ಗೇಲಿ ಮಾಡುತ್ತಿದ್ದನು. ಅದೇ ಸಂಗಮೇಶನು ಮುಂದೆ ಸ್ವಾಮಿ ಲಿಂಗಾನಂದರಾಗಿ "Linga is the gate pass to the kingdom of God" ಎಂದು ತೋರಿಸಿಕೊಟ್ಟದ್ದು ವಿಚಿತ್ರವಾದರೂ ಸತ್ಯವಾದ ಇತಿಹಾಸ.

ಮುಂದೆ ಧಾರವಾಡದಲ್ಲಿ ಎಂ.ಎ ತತ್ವಜ್ಞಾನವನ್ನು ಅಭ್ಯಸಿಸುವಾಗ ಧಾರವಾಡದ ನವಕಲ್ಯಾಣ ಮಠದ ಕುಮಾರಸ್ವಾಮಿಗಳ ಉಪನ್ಯಾಸಗಳಿಂದ ಪ್ರಭಾವಿತರಾಗಿ ಮಾರ್ಕ್ಸ್‌ಯಿಸ್‌ಮನ್ನು ಬಹಳ ನಂಬಿದ್ದ ಇವರು ಬಸವಾಯಿಸಮ್ ಕಡೆಗೆ ಕವಲೊಡೆದಾಗ ಬಸವಧರ್ಮದ ಭವ್ಯವಾದ ಬಾನಂಗಳಲ್ಲಿ ದಿವ್ಯವಾದ ಲಿಂಗಾನಂದವೆಂಬ ನಕ್ಷತ್ರವೊಂದು ಪ್ರಜ್ವಲಿಸ ಹತ್ತಿತ್ತು. ವಿದ್ಯಾರ್ಥಿ ದೆಸೆಯಲ್ಲಿಯೇ ಸ್ವಾಮಿತ್ವದ ಹಂಬಲವನ್ನು ಸೂಕ್ಷ್ಮವಾಗಿ ತೋರಿಸುತ್ತಿದ್ದ ಇವರು 1956ರ ನವೆಂಬರ್ 19 ರಂದು ಸುಪ್ರಭಾತ ಸಮಯದಲ್ಲಿ ಬಸವ ಗುರುವಿನ ಸಾಕ್ಷಿಯಾಗಿ ಸ್ವಪ್ರೇರಣೆಯಿಂದ ಕಾವಿ ಲಾಂಛನ ಧರಿಸಿದ ಸಂಗಮೇಶರು, ಸ್ವಾಮಿ ಲಿಂಗಾನಂದರಾಗಿ ಎಲ್ಲರನ್ನು ಆಶ್ಚರ್ಯ ಚಕಿತರನ್ನಾಗಿಸಿದರು. ಅಲ್ಲಿಂದ ಮುಂದೆ 5 ವರ್ಷಗಳ ಕಾಲ ಅಂತರಮುಖಿಗಳಾಗಿ ಕಠಿಣವಾದ ತಪಸ್ಸು, ಅಧ್ಯಯನವನ್ನು ಕೈಗೊಂಡು 1961 ರಲ್ಲಿ ಮೈಸೂರಿನ ಸುತ್ತೂರು ಮಠದ ಶ್ರೀಗಳಿಂದ ವಿಧ್ಯುಕ್ತವಾಗಿ ಜಂಗಮದೀಕ್ಷೆ ಪಡೆದುಕೊಂಡು "ಜನರು ಧರ್ಮದೆಡೆಗೆ ಬರದಿದ್ದಾಗ, ಧರ್ಮವನ್ನೇ ಜನರೆಡೆಗೆ ಒಯ್ಯಬೇಕು" ಎಂದು ಪ್ರಚಾರ ಕೈಗೊಂಡರು. ಮುಗ್ದಭಾವುಕ ಭಕ್ತರ ಮೂಢನಂಬಿಕೆ ಮೂಢಾಚಾರಗಳನ್ನೇ ತಮ್ಮ ಬಂಡವಾಳವನ್ನಾಗಿ ಮಾಡಿಕೊಂಡು ಬಸವ ಧರ್ಮವನ್ನು ಅಧೋಗತಿಗೆ ಎಳೆಯುತ್ತಿದ್ದ ಸಂಪ್ರದಾಯವಾದಿ ಪಟ್ಟಭದ್ರ ಹಿತಾಸಕ್ತಿಗಳ ಪಾಲಿಗೆ ಚಂಡಮಾರುತವಾಗಿ ಪರಿಣಮಿಸಿ, ಲಿಂಗಾಯತ ಧರ್ಮದಲ್ಲಿ ಸ್ಫೂರ್ತಿಯನ್ನು, ಪುನರುತ್ಥಾನದ ಚೇತನವನ್ನು ತುಂಬಿ ವಿಶ್ವಮೌಲ್ಯಗಳನ್ನು ಹೊಂದಿದ ಬಸವಾದಿ ಶರಣರ ವಚನ-ವಾಙ್ಮಯದ ದಿವ್ಯ-ಸಂದೇಶವನ್ನು ನಾಡಿನ ಮೂಲೆ ಮೂಲೆಗಳಲ್ಲಿಯೂ ಪಸರಿಸುವ ಮಣಿಹ ಹೊತ್ತು ಸುಮಾರು 4 ದಶಕಗಳ ಕಾಲ, ನಮ್ಮ ರಾಷ್ಟ್ರದ ತಮಿಳುನಾಡು, ಆಂಧ್ರ, ಮಹಾರಾಷ್ಟ್ರ ಮತ್ತು ಕರ್ನಾಟಕಗಳಲ್ಲಿಯೂ ಬಸವ ಧರ್ಮಕ್ಕೆ ತಮ್ಮ ಪ್ರಭಾವಿ ಪ್ರವಚನದ ಮೂಲಕ ಆಧುನಿಕತೆಯ ಅಡಿಪಾಯ ಹಾಕಿಕೊಟ್ಟವರೆಂದರೆ ಪೂಜ್ಯ ಅಪ್ಪಾಜಿಯವರು. ಪೂಜ್ಯರು ಸಾರಿದ ದಿವ್ಯ ಸಂದೇಶಗಳು ಇಂದಿಗೂ ಕೂಡಾ ಭಕ್ತ ಸಮೂಹದ ನಾಲಿಗೆಯ ಮೇಲೆ ನಾಟ್ಯ ಮಾಡುತ್ತವೆ.

ಸಾಹಿತ್ಯ ಮತ್ತು ಧಾರ್ಮಿಕ ಆಂದೋಲನದ ದೃಷ್ಟಿಯಿಂದ ಸುವರ್ಣಯುಗವೆನಿಸಿದ 12ನೇ ಶತಮಾನದ ಶರಣರ ಮಣಿಹವನ್ನು, ಆಶೋತ್ತರಗಳನ್ನು ಪೂರೈಸಲು ಶರಣಮೇಳವನ್ನು ಸಂಘಟಿಸಿ ನಾಡಿನ ಬಸವಭಕ್ತರೆಲ್ಲರನ್ನು ಒಂದೆಡೆ ಸೇರಿಸಿದ ಹೆಗ್ಗಳಿಕೆ ಪೂಜ್ಯರದು.

ಅಷ್ಟೇ ಅಲ್ಲ ಜಾಗತಿಕ ಧಾರ್ಮಿಕ ಇತಿಹಾಸದಲ್ಲಿ ಯಾರೂ ಮಾಡದ ಮಹಿಳಾ ಜಗದ್ಗುರು ಪೀಠವನ್ನು ಸ್ಥಾಪಿಸಿ ಅದ್ಭುತ ಧಾರ್ಮಿಕ ಕ್ರಾಂತಿಯನ್ನೇ ಮಾಡಿ ಮಾತಾಜಿ ಎಂಬ ಮಾಣಿಕ್ಯವನ್ನು ನಾಡಿಗೆ ನೀಡಿದ್ದಾರೆ.

ತಮಗೆ ವಿಷ ಸಿಂಚನ ಮಾಡಿದವರಿಗೂ ಕೂಡಾ ಬಸವಾಮೃತವನ್ನೇ ಉಣಬಡಿಸಿದ ಕರುಣಾಶೀಲರು ಪೂಜ್ಯ ಅಪ್ಪಾಜಿಯವರು.

ತಮ್ಮ ವಿನೂತನ ಶೈಲಿಯ ವಾಕ್‌ಶಕ್ತಿಯಿಂದ ಭಕ್ತರಿಗೆ ಸದಾ ಬಸವಾಮೃತವನ್ನೇ ನೀಡಿದ್ದ ಪೂಜ್ಯರು ಬಾಳಿದ ಬದುಕು ನಿಸ್ವಾರ್ಥದ ಗೌರಿಶಂಕರ ! ಹೇಗೆ ಶ್ರೀಗಂಧದ ಗಿಡ ಬೆಳೆದು ಪರಿಮಳಯುಕ್ತವಾಗಿ ಬಾಳಿ, ತೆಯ್ದರೆ ಗಂಧವನ್ನು ಕೊಟ್ಟು ಉರಿದರೆ ಸುಮಧುರ ವಾಸನೆ ಬೀರಿ, ಕೆತ್ತಿದರೆ ಕಲಾಕೃತಿಯಾಗಿ ಸಾರ್ಥಕದ ಬಾಳು ಬಾಳುತ್ತದೆಯೋ ಹಾಗೆ ಪೂಜ್ಯರು ಶ್ರೀಗಂಧದಂತೆ ಬಸವ ಧರ್ಮಪ್ರಚಾರಕ್ಕಾಗಿ-ಪ್ರಸಾರಕ್ಕಾಗಿ ತಮ್ಮನ್ನು ತಾವು ಸವೆದುಕೊಂಡಿದ್ದ ಈ ತೇಜೋಮೂರ್ತಿಯ ವ್ಯಕ್ತಿತ್ವ-ವರ್ಣಮಯವಾದದ್ದು. ಅವರು ಸಾಧಿಸಿದ್ದ ಅದ್ಭುತ ಕ್ರಾಂತಿಯ ಸಾಧನೆಗಳನ್ನು ಸಿದ್ದಿಮಯ ಜೀವನವನ್ನು, ಬಾಳಿಗೆ ನಿಸ್ವಾರ್ಥದ ಸಾರ್ಥಕಮಯ ಬಾಳಿನ ಬೆಳಕನ್ನು ಕೇವಲ ಈ ಪುಟ್ಟಬರಹದಲ್ಲಿ ಬರೆದಿಡುವುದು ಕಷ್ಟ ಸಾಧ್ಯದ ಕೆಲಸ. ಶರಣವಾಣಿಯಂತೆ ಕಾಯಕದಲ್ಲಿಯೇ ಕೈಲಾಸವನ್ನು ಕಂಡು, ದಿ. 30-6-1995 ರಂದು ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿ ಪ್ರವಚನ ಕಾಯಕದ ಸಮಯದಲ್ಲಿಯೆ ಕಾಯವನ್ನು ತಲ್ಲೀನಗೊಳಿಸಿದಾಗ ಸೃಷ್ಟಿಕರ್ತ ಲಿಂಗದೇವ ತನಗೆ ಬೇಕೆಂದು ಎತ್ತಿಕೊಂಡ.

ಸುಮಾರು 64 ಸಾರ್ಥಕ ವರ್ಷಗಳನ್ನು ಈ ಧರೆಯ ಮೇಲೆ ನಿಸ್ವಾರ್ಥ ಬಸವ ಸೇವೆಗೆ ಮುಡುಪಾಗಿಟ್ಟ ಪೂಜ್ಯರ ಬದುಕು-ಬರಹ ನಾಡಿನಲ್ಲಿ ಬಸವಧರ್ಮವನ್ನು ಪುನರುತ್ಥಾನಗೊಳಿಸಿತು. ಅವರ ಬದುಕು ಆದರ್ಶಮಯ, ಸಾಧಿಸಿದ ಸಿದ್ಧಿ ಕೇವಲ ಇತಿಹಾಸ. ಅವರ ಕಾಯವಷ್ಟೇ ಲಿಂಗದೇವನಲ್ಲಿ ಲೀನವಾಗಿದೆ. ಆದರೆ ಅವರು ಬೀರಿದ, ಬಿತ್ತಿದ, ಉದಾತ್ತ ತತ್ವಗಳು ನಾಡಿನ ಭಕ್ತ ಸಮೂಹದಲ್ಲಿ ಇನ್ನೂ ಜೀವಂತವಾಗಿಯೇ ಇವೆ.

ಜುಲೈ ತಿಂಗಳಲ್ಲಿ ಧನ ಸಹಾಯ ಮಾಡಿದ ಧನ ದಾಸೋಹಿಗಳು
ಬಸವ ಕಲ್ಯಾಣದಲ್ಲಿ ನಿರ್ಮಾಣವಾಗುತ್ತಿರುವ ಮಹಾಮನೆಗೆ

ಶರಣರುಗಳಾದ :

1.	ಗುಪ್ತದಾನಿ(ಭೂಮಿ ಖರೀದಿಗಾಗಿ)	50,000
2.	ಎಸ್.ಎಸ್.ನೀಲಕಂಠ, ಹರ್ಷ ಟ್ರೆಡಿಂಗ್ ಕಂಪೆನಿ	25,000
3.	ಡಾ॥ ಎಸ್.ವಿ.ಸಂಗನಾಳ,ಹಟ್ಟಿ	11,000
4.	ಮಹಾದೇವಿ ಮತ್ತು ವೀರಣ್ಣ ದಾಟನಾಳ,ಹುಬ್ಬಳ್ಳಿ	(ಕಾಣಿಕೆ ಪೆಟ್ಟಿಗೆ)
5.	ಕಮಲಾ ಮತ್ತು ಲಿಂಗರಾಜ ಇಂಗಳಳ್ಳಿ,ಹುಬ್ಬಳ್ಳಿ	(ಕಾಣಿಕೆ ಪೆಟ್ಟಿಗೆ)
6.	ಎನ್.ಪುಟ್ಟರುದ್ರ,ಅಧ್ಯಕ್ಷರು ಲಿಂಗಾಯತ ಧರ್ಮ ಮಹಾಸಭಾ	5,000
7.	ಉಕ್ಕಲಿ (ಕಟ್ಟಡ ನಿಧಿಗೆ), ಸೊಲ್ಲಾಪುರ	1,000
8.	ಶರಣ.ಎ.ಜಿ.ಪಾಟೀಲ್, ಸೊಲ್ಲಾಪುರ ಪುಸ್ತಕ ಮುದ್ರಣಕ್ಕಾಗಿ (ವಿಶ್ವಕಲ್ಯಾಣ ಮಿಷನ್)	5,000

ಕೂಡಲ ಸಂಗಮದ ಬಸವಧರ್ಮಪೀಠದ ಮಹಾಮನೆ ಮಹಾಮಠದಲ್ಲಿ ನಡೆಯುವ ನಿತ್ಯದಾಸೋಹ ನಿಧಿಗೆ 1111 ರೂ ಸಲ್ಲಿಸಿದವರು

1. ಶರಣೆ. ಲಕ್ಷ್ಮೀಬಾಯಿ ಲಕ್ಷಣ ಮಿರ್ಜ, ಸಂಕೇಶ್ವರ

ಬಸವಕಲ್ಯಾಣದಲ್ಲಿ ದಾಸೋಹ / ಪೂಜೆ

ನೀಲಾಂಬಿಕಾ ಹುಣ್ಣಿಮೆಯಂದು (23-8-2002)

ಡಾ॥ ರಾಜೇಂದ್ರ ಪಾಟೀಲ್,ನಿರ್ಣಾ.ಬೀದರ್ ಜಿಲ್ಲೆ

ಬಸವ ಕಲ್ಯಾಣದ ಬಸವ ಮಹಾಮನೆಯಲ್ಲಿ ನಡೆಯುವ ನಿತ್ಯ ದಾಸೋಹನಿಧಿಗೆ 1200 ರೂ ಸಲ್ಲಿಸಿದ ಧನ ದಾಸೋಹಿಗಳು

ಶರಣರುಗಳಾದ:

ಸುಶೀಲಾಬಾಯಿ ಕಮಲಾಕರ್ ಹಾವಗಿ, ಸೊಲ್ಲಾಪುರ
ಪ್ರಶಾಂತ್ ಗಂಗಾಧರ್ ಸಾತಲಗಾಂವಕರ್, ಸೊಲ್ಲಾಪುರ
ಗಿರೀಶ್ ಗುರಪ್ಪ ಪ್ರಚಂಡೆ, ಸೊಲ್ಲಾಪುರ
ಮೃತ್ಯುಂಜಯ ಪ್ರಭು ಅಪ್ಪ ಮಾನವಿ, ಸೊಲ್ಲಾಪುರ
ಶಾಂತಯ್ಯ ರಾಚಯ್ಯ ಹತ್ತೂರೆ ಸ್ವಾಮಿ, ಸೊಲ್ಲಾಪುರ
ರಾಮಚಂದ್ರ ರೇವಣಸಿದ್ದಪ್ಪ ದಸಲೆ, ಸೊಲ್ಲಾಪುರ
ಬಾಬೂರಾವ್ ಶರಣಪ್ಪ ರಾಂಪುರೆ, ಸೊಲ್ಲಾಪುರ
ಸಿದ್ದರಾಮಪ್ಪ ಮಲ್ಲಪ್ಪಶೆಟ್ಟಿ, ಸೊಲ್ಲಾಪುರ
ರೇವಣಸಿದ್ದಪ್ಪ ಗುರಪ್ಪ ಏಟೆ, ಸೊಲ್ಲಾಪುರ
ಮಾಧವ್ ಉಮಾಕಾಂತ್ ಶೆಟಕಾರ್, ಸೊಲ್ಲಾಪುರ
ಮಲ್ಲಿನಾಥ್ ಜಿ.ತಾಳೀಕೋಟೆ (ಹಿರೇಮಠ್)
ಚಂದ್ರಕಾಂತ್ ಗಣಪತರಾವ್ ಚಿತ್ತೆ, ಸೊಲ್ಲಾಪುರ
ಜಯಪ್ರಕಾಶ್ ಶಿವಬಸವಸ್ವಾಮಿ ಯರಗಂಬಳಿಮಠ
ಅಶೋಕ್ ಶಿವಾಜಿರಾವ್ ಬಗಡೆ, ಸೊಲ್ಲಾಪುರ
ಮಹಾಲಿಂಗಪ್ಪ ರಾಮಸ್ವಾಮಿ ಬಳಗಾರ್

ಬಸವಕಲ್ಯಾಣದ ಮಹಾಮನೆಯಲ್ಲಿ ನಡೆಯುವ ನಿತ್ಯ ಪೂಜಾನಿಧಿಗೆ 600 ರೂ ಸಲ್ಲಿಸಿದ ಧನದಾಸೋಹಿಗಳು

ಶರಣರುಗಳಾದ :

ಲಿಂಗಮ್ಮ ತಂದೆ ಕಂಠೆಪ್ಪ ಶೆಟಕಾರ್, ಬೀದರ್
ಎಸ್.ಎಂ.ಚಿಮ್ಮಲಗಿ,ಸೊಲ್ಲಾಪುರ
ಸಿದ್ದರಾಮ ಹಾವಪ್ಪ ಬಿದರಿ,ಸೊಲ್ಲಾಪುರ
ಮಲ್ಲಾರಿ ನಾಗನಾಥ ಜೋಡಕರಿ,ಸೊಲ್ಲಾಪುರ
ಸುರೇಶ ಅಣ್ಣಪ್ಪ ಕೊಕಟನೂರ್, ''
ವೇಣುಗೋಪಾಲ್ ನಾರಾಯಣ ಚಿಲಿಚೌಡ್,
ಮಲ್ಲಿನಾಥ ಸಿದ್ದರಾಮಪ್ಪ ಉಟಗಿ, ''
ಸಂಜಯ ಶರಣಪ್ಪ ಸಂಕದ
ಜಯದೇವ ಮಲ್ಲಯ್ಯ ಸ್ವಾಮಿ
ಚನ್ನಮಲ್ಲಪ್ಪ ಶಿವಪ್ಪ ಗುಜರೆ
ಬಾಳಾ ಸಾಹೇಬ ಸೂಗೂರಪ್ಪ ಯಲಗೊಂಡೆ
ವಿಲಾಸ್ ಸದಾಶಿವ ಜಿರಫೆ
ಸುಮಂತ್ ಗುರುಲಿಂಗಪ್ಪ ಕವಟಿ
ಗಂಗಾಧರ್ ಪರಪ್ಪ ಪಾಟೀಲ್
ಅಂಕುಶ್ ರಾಮಚಂದ್ರ ಖಿಂದಾರೆ
ನಾಗನಾಥ ಕೊಂಡಿಬಾ ಕೋಕರೆ
ಪ್ರಭುದೇವ ಗುಂಡಪ್ಪ ತೊಂಡಾರೆ
ತುಕಾರಾಂ ಮಾರುತಿ ಕ್ಷೀರಸಾಗರ್
ವಿಶ್ವನಾಥ್ ಪರಮೇಶ್ವರ್ ಫಾಳೆ
ಸಿದ್ದರಾಮ ಚನ್ನಬಸಪ್ಪ ಇಸಾಪುರೆ
ಸಿ.ಆರ್.ಕುಲಕರ್ಣಿ
ಸಿದ್ದರಾಮಪ್ಪ ಭೀಮರಾವ್ ಆಲೂರೆ
ರಾಜೇಂದ್ರ ಶರಣಪ್ಪ ರಾಂಪುರೆ
ನಾಗೇಶ್ ಶಂಕರಪ್ಪ ಇಸಾಪುರೆ
ಸಿದ್ದರಾಮಪ್ಪ ಈರಪ್ಪ ಲೋಣೆ
ರಾಜೆಂದ್ರ ವೀರಭದ್ರಪ್ಪ ಥಂಗೆ
ಭೀಮಶಂಕರ್ ಸಿದ್ದರಾಮಪ್ಪ ಘೋಮಗೊಂಡೆ
ವಿಠ್ಠಲ್ ಮಾರುತಿ ಪುಲಾರೆ
ರಾಜ್‌ಕುಮಾರ್ ಸಿದ್ದಪ್ಪ ಕಣಮುಸ್
ಈಶ್ವರ್ ಕಾಶೀನಾಥ ಸ್ವಾಮಿ
ಸಿದ್ದೇಶ್ವರ್ ಮಾಣಿಕ್ ಸೊನ್ನದ್
ಶರಣಪ್ಪ ಕಲ್ಲಪ್ಪ ಲೋಖಂಡೆ
ಸುಭಾಷ್ ಪುಂಡಲೀಕ್ ಗುಳೇದ
ಚಂದ್ರಕಾಂತ ಕಲ್ಯಾಣರಾವ್ ಹೈಗುಂಡೆ
ವಿನೂಭಾಯ್ ಪಟೇಲ್
ಪಿ. ಎಂ. ಬೆಲ್ಲದ, ಬೈಲಹೊಂಗಲ
ಗಿರಿಜಾದೇವಿ ಉಳುವೆಪ್ಪ ಥಮ್ಮಣಗಿ, ಬೈಲಹೊಂಗಲ

ಪ್ರತಿ ದೇವ(ಭಾನು)ವಾರ ಬೆಂಗಳೂರಿನ ಬಸವ ಮಂಟಪದಲ್ಲಿ ಶರಣ ಸಂಗಮದಲ್ಲಿ ನಡೆಯುವ ದಾಸೋಹಕ್ಕೆ 2000 ರೂ ಸಲ್ಲಿಸಿ ಪ್ರಸಾದ ದಾಸೋಹ ಮಾಡಿರುವ ಸದ್ಭಕ್ತರು

4-8-2002	ಶರಣೆ. ಕೆಂಚಮ್ಮಜ್ಜಿ ಮಗ ಶರಣ. ಗೋವಿಂದರಾಜು ಮತ್ತು ಪರಿವಾರದವರು, ಮೈಸೂರು
11-8-2002	ಶರಣೆ ಸತ್ಯಮ್ಮ ಮೈಸೂರು, ಮಗಳು ಲಕ್ಷ್ಮಿ ವಿಶ್ವನಾಥ್,ಬೆಂಗಳೂರು
13-8-2002	ಬಸವ ಪಂಚಮಿ ಸಿಹಿ ವಿತರಣೆ ಸಿದ್ಧಯ್ಯ ಹಿರೆಮಠ್
18-8-2002	ಶರಣೆ. ವನಜಾಕ್ಷಮ್ಮ ಓಂಕಾರಸ್ವಾಮಿ, ಅರ್ಚನಾ ಇಂದುಶೇಖರ್, ಬೆಂಗಳೂರು.
25-8-2002	ಶರಣೆ. ಡಾ॥ ಸುಶೀಲಮ್ಮ, ಬೆಂಗಳೂರು

ಬಸವ ಕಲ್ಯಾಣದಲ್ಲಿ ಬಸವ ತತ್ತ್ವ ತರಬೇತಿ ಕಮ್ಮಟ

2002 ರ ಅಕ್ಟೋಬರ್ 2 ರಿಂದ 15 ರವರೆಗೆ

ಮಡಿಕೆಯ ಮಾಡುವೊಡೆ ಮಣ್ಣೇ ಮೊದಲು
ತೊಡಿಗೆಯ ಮಾಡುವೊಡೆ ಹೊನ್ನೇ ಮೊದಲು
ಶಿವಪಥವರಿವೊಡೆ ಗುರುಪಥವೇ ಮೊದಲು
ನಮ್ಮ ಲಿಂಗದೇವರನರಿವೊಡೆ
ಶರಣರ ಸಂಗವೇ ಮೊದಲು. (ಬ.ವ.ದೀ. 68)

ಬಸವ ಧರ್ಮ ಪೀಠ ಮತ್ತು ವಿಶ್ವಕಲ್ಯಾಣ ಮಿಷನ್‌ಗಳ ಸಂಯುಕ್ತ ಆಶ್ರಯದಲ್ಲಿ ಪ್ರತಿವರ್ಷವೂ ಬೇಸಿಗೆಯ ರಜಾ ಕಾಲದಲ್ಲಿ ಮತ್ತು ಅಕ್ಟೋಬರ್ ರಜೆಯ ಕಾಲದಲ್ಲಿ ಬಸವ ತತ್ತ್ವ ತರಬೇತಿ ಕಮ್ಮಟವನ್ನು ನಡೆಸಿಕೊಂಡು ಬರಲಾಗುತ್ತಿದೆಯಷ್ಟೆ. 2002 ನೆಯ ಸಾಲಿನ ತರಬೇತಿ ಕಮ್ಮಟವನ್ನು ಬಸವ ಕಲ್ಯಾಣದ ಬಸವ ಮಹಾಮನೆಯ ಆವರಣದ ಶರಣ ಶೈಲ ದ ಮೇಲೆ ನಡೆಸುವ ಕಾರ್ಯಕ್ರಮ ರೂಪಿಸಲಾಗಿದೆ. ಇದಕ್ಕಾಗಿ ತಾತ್ಕಾಲಿಕ ತಂಗುದಾಣಗಳನ್ನು ನಿರ್ಮಿಸಲಾಗುತ್ತದೆ. ಬೀದರ್, ಗುಲಬರ್ಗಾ ಜಿಲ್ಲೆಗಳವರಿಗೆ ಮಹಾರಾಷ್ಟ್ರದ ಸೊಲ್ಲಾಪುರ, ಉದಗೀರ್, ಆಂಧ್ರ ಪ್ರದೇಶದ ಹೈದ್ರಾಬಾದ್, ಜಹಿರಾಬಾದ್ ಮುಂತಾದ ಪ್ರದೇಶಗಳ ಮುಮುಕ್ಷುಗಳಿಗೆ ಭಾಗಿಗಳಾಗಲು ಸದವಕಾಶ ಕಲ್ಪಿಸಿ ಕೊಟ್ಟಂತೆ ಆಗುತ್ತದೆ. ಇದಲ್ಲದೆ ಬಸವ ಕಲ್ಯಾಣದ ಪವಿತ್ರ ಶರಣ ಭೂಮಿಯಲ್ಲಿದ್ದು ಅನುಷ್ಠಾನ ಮಾಡುವ ಸದವಕಾಶ ಎಲ್ಲ ಜನರಿಗೆ ಲಭ್ಯವಾಗುತ್ತದೆ. ತರಬೇತಿ ಕಮ್ಮಟಗಳಲ್ಲಿ ಪ್ರಾಯೋಗಿಕ ಶಿಕ್ಷಣವು ದೊರೆಯುವುದಲ್ಲದೆ ತಮ್ಮ ಸಂದೇಹಗಳಿಗೆ ಸೂಕ್ತ ಪರಿಹಾರ ಪಡೆದುಕೊಳ್ಳಲು ಅನುಕೂಲವಾಗುತ್ತದೆ.

1. ದಿನ ನಿತ್ಯ ಸಂಜೆ ಒಂದೊಂದು ವಿಷಯದ ಮೇಲೆ ಪ್ರವಚನ
2. ಸುಪ್ರಭಾತದಲ್ಲಿ ಯೋಗಾಸನ, ಪ್ರಾಣಾಯಾಮ, ಧ್ಯಾನ, ಸಾಮೂಹಿಕ ಇಷ್ಟಲಿಂಗಾರ್ಚನೆ ಮತ್ತು ತ್ರಾಟಕಯೋಗ.
3. ವಚನ ಚಿಂತನೆ, ವಿಶ್ಲೇಷಣೆ, ವಚನ ಲೇಖನ ಮುಂತಾದವುಗಳ ಅಭ್ಯಾಸ ಜರುಗುತ್ತದೆ.
4. ಸಂಜೆಯ ವೇಳೆ ವಯೋಭೇದವಿಲ್ಲದೆ ಆಟೋಟಗಳಿರುತ್ತವೆ.
5. ರಾತ್ರಿ 9 ರಿಂದ ರಸ ಪ್ರಶ್ನೆ, ಸಾಂಸ್ಕೃತಿಕ ಕಾರ್ಯಕ್ರಮ
6. ಆರೋಗ್ಯ ಭಾಗ್ಯ ಕುರಿತು ಉಪನ್ಯಾಸ, ನಿಸರ್ಗೋಪಚಾರ ಕುರಿತು ಮಾಹಿತಿ, ಆರೋಗ್ಯಕರ ಅಡಿಗೆಯ ಮಾಹಿತಿ.
7. ಗೃಹ ಪ್ರವೇಶ, ವಿವಾಹ ವಿಧಿ, ಲಿಂಗಧಾರಣೆ, ನಾಮಕರಣ, ಶವ ಸಂಸ್ಕಾರ ಮುಂತಾದ ವಿಧಿ-ವಿಧಾನಗಳನ್ನು ನೆರವೇರಿಸುವ ಬಗ್ಗೆ ತರಬೇತಿ ನೀಡಲಾಗುವುದಲ್ಲದೆ ಕ್ರಿಯಾ ಮೂರ್ತಿ ದೀಕ್ಷೆಯನ್ನು ಸಹ ನೀಡಿ ತರಬೇತಿ ಹೊಂದಿದವರಿಗೆ ಮಾನ್ಯತಾ ಪತ್ರ (Certificate) ಕೊಡಲಾಗುವುದು.

ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿ ಹಾಗೂ ಮಾರ್ಗದರ್ಶನದಲ್ಲಿ ನಡೆಯುವ ಈ ತರಬೇತಿ ಕಮ್ಮಟದಲ್ಲಿ ಅಲ್ಲಮಪ್ರಭು ಶೂನ್ಯ ಪೀಠಾಧೀಶರಾದ ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳು, ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು, ಪೂಜ್ಯ ಶ್ರೀ ಬಸವ ಕುಮಾರ ಸ್ವಾಮಿಗಳು, ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳು, ಶರಣ. ಶಿವಕುಮಾರ ಡಾಕುಳಗೆ, ಶರಣ. ವೀರಣ್ಣ ಕೊರ್ಲ್ಪಳ್ಳಿ ಮುಂತಾದವರು ಭಾಗವಹಿಸಿ ತರಬೇತಿ ನೀಡಲಿರುವರು.

ಶಿಬಿರ ಶುಲ್ಕ ವಿವರ

ದಿ. 2-10-2002 ರಿಂದ 15-10-2002 ರವರೆಗೆ 14 ದಿವಸಗಳ ಕಾಲ ನಡೆಯುವ ಶಿಬಿರದ ಶುಲ್ಕ ಒಬ್ಬರಿಗೆ 450 ರೂ. ವಿದ್ಯಾರ್ಥಿ - ವಿದ್ಯಾರ್ಥಿನಿಯರಿಗೆ ರಿಯಾಯಿತಿಯೊಡನೆ 300 ರೂಗಳು. ವಿದ್ಯಾರ್ಥಿಗಳಲ್ಲದಿದ್ದರೂ ಆಸಕ್ತರಾದ ಬಡವರಿಗೆ ಸಹ ರಿಯಾಯಿತಿಯೊಡನೆ 300 ರೂಗಳು.

ಪರವಾನಗಿಯೊಡನೆ ಉಚಿತ ಅವಕಾಶ : ಆರ್ಥಿಕವಾಗಿ ಬಹಳ ಹಿಂದುಳಿದಿದ್ದು ಧರ್ಮಪ್ರಚಾರ ಮತ್ತು ಸಂಘಟನೆ ಮಾಡುವ ಕಳಕಳಿಯುಳ್ಳವರು ಶಿಬಿರ ಶುಲ್ಕವನ್ನು ಕಟ್ಟಲು ಅಸಮರ್ಥರಾಗಿದ್ದರೆ ಅವರು ಮೊದಲೇ ಪತ್ರ ಬರೆದು ಉಚಿತವಾಗಿ ಭಾಗವಹಿಸಲು ಪರವಾನಗಿ ಪಡೆದುಕೊಳ್ಳಲು ಅವಕಾಶವಿದೆ. ಅಂಥವರು ಕೊಟ್ಟಿರುವ ವಿಳಾಸಗಳಿಗೆ ಪತ್ರ ಬರೆಯಬೇಕು. ರಾಷ್ಟ್ರೀಯ ಬಸವ ದಳದವರು ಆಸಕ್ತರಾದ ಶಿಬಿರಾರ್ಥಿಗಳು ಬಡವರಿದ್ದರೆ ಅವರ ಗಾಡಿ ಖರ್ಚು, ಶಿಬಿರ ಶುಲ್ಕ ಭರಿಸಿ ತರಬೇತಿಗೆ ಒಳ್ಳೆಯ ಕಾರ್ಯಕರ್ತರನ್ನು ಆಯ್ಕೆಮಾಡಿ ಕಳಿಸಬೇಕು.

1. ಶಿಬಿರಾರ್ಥಿಗಳು ಅಕ್ಟೋಬರ್ 1 ರ ಸಂಜೆಯೊಳಗೆ ಅಥವಾ 2 ನೇ ತಾರೀಖು 10 ಗಂಟೆಯೊಳಗೆ ಬಂದು ತಲುಪಬೇಕು.
2. ತಮ್ಮೊಡನೆ ಉಡುವ ಬಟ್ಟೆಗಳು, ಹಾಸುವ ಹಾಸಿಗೆ, ಹೊದ್ದಿಕೆ, ಸೊಳ್ಳೆಯ ಪರದೆ, ಊಟದ ತಟ್ಟೆ - ಲೋಟ, ಇಷ್ಟಲಿಂಗ ಪೂಜೆಯ ಸಾಮಗ್ರಿ, ಟಿಪ್ಪಣಿ ಬರೆದುಕೊಳ್ಳಲು ಪುಸ್ತಕ, ಪೆನ್ನು ತಂದಿರಬೇಕು.

ದಾನಿಗಳು ಮತ್ತು ರಾಷ್ಟ್ರೀಯ ಬಸವ ದಳಗಳವರಲ್ಲಿ ಕೋರಿಕೆ

ಬಸವ ಕಲ್ಯಾಣದ ಬಸವ ಮಹಾಮನೆ ಆವರಣದಲ್ಲಿ ಇನ್ನೂ ಕಾಯಂ ವಸತಿ ಗೃಹ ಆಗಿಲ್ಲದೆ ಇರುವುದರಿಂದ ತಾತ್ಕಾಲಿಕವಾದ ತಂಗುದಾಣಗಳನ್ನು ನಿರ್ಮಿಸಬೇಕಾಗುತ್ತದೆ. ಇನ್ನೂ ಮಳೆಗಾಲ ಇರುವುದರಿಂದ ತಗಡಿನ ಶೆಡ್ ಹಾಕಿಸಬೇಕಾಗುತ್ತದೆ. ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಸಾಕಷ್ಟು ಕಟ್ಟಡಗಳಿವೆ, ಮೇಲಾಗಿ ಧಾರ್ಮಿಕ ಕಾರ್ಯಕ್ರಮಕ್ಕೆ ಅನೇಕ ದಾನಿಗಳು ಧನ ಸಹಾಯ ಮಾಡುವುದೇ ಅಲ್ಲದೆ ತರಕಾರಿ, ದವಸ-ಧಾನ್ಯಗಳನ್ನು ಉಚಿತವಾಗಿ ಕೊಡುವರು. ಆದರೆ ಬೀದರ್-ಗುಲಬರ್ಗಾ-ಹೈದರಾಬಾದ್, ಉದ್ಗೀರ್ ಜನರು ಬಸವ ಕಲ್ಯಾಣದಲ್ಲಿ ಶಿಬಿರ ನಡೆಸಬೇಕೆಂದು ಆಗ್ರಹ ಪೂರ್ವಕವಾಗಿ ಒತ್ತಾಯಿಸುತ್ತಿದ್ದಾರೆ. ಆದ್ದರಿಂದ ದಾನಿಗಳು ಉದಾರವಾದ ಕಾಣಿಕೆಯನ್ನು ಧನ ರೂಪದಲ್ಲಿ, ವಸ್ತುಗಳ ರೂಪದಲ್ಲಿ ಕೊಡುವ ಔದಾರ್ಯ ತೋರಬೇಕು. ಈಗಾಗಲೇ ನಮ್ಮ ಅನುಭವದಂತೆ ಆರ್ಥಿಕವಾಗಿ ದುರ್ಬಲರಾಗಿರುವ ಯುವಕ-ಯುವತಿಯರು ಧರ್ಮ ಪ್ರಚಾರ, ಸಮಾಜ ಸಂಘಟನೆ ಮಾಡುವ ಹಂಬಲದಿಂದ ದುಡಿಯಲು ಉತ್ಸುಕರಾಗಿ ಶಿಬಿರಗಳಲ್ಲಿ ಉಚಿತವಾಗಿ ಭಾಗವಹಿಸುವ ಅಪೇಕ್ಷೆಯನ್ನು ವ್ಯಕ್ತಪಡಿಸುತ್ತಾರೆ. ಅಂಥವರಿಗೆ ಪ್ರವೇಶ ನಿರಾಕರಿಸಲು ನಮಗೆ ಮನಸ್ಸು ಬರದು. ಆದ್ದರಿಂದ ವಿವಿಧ ರಾಷ್ಟ್ರೀಯ ಬಸವ ದಳಗಳವರು ಹಣವನ್ನು, ದವಸ - ಧಾನ್ಯವನ್ನು ಸಂಗ್ರಹಿಸಿ ಕೊಡುವ ಪ್ರಯತ್ನ ಮಾಡಬೇಕು.

ಬೆಳಗ್ಗೆ ಉಪಾಹಾರ, ಮಧ್ಯಾಹ್ನ ಪ್ರಸಾದ (ಊಟ), ಸಂಜೆ ಚಹಾ - ಕಷಾಯ, ರಾತ್ರಿ ಊಟ - ಹೀಗೆ ಕೊಡಲಾಗುವುದು. ಒಬ್ಬೊಬ್ಬ ದಾನಿಗಳು ಒಂದು ಹೊತ್ತಿನ ಪ್ರಸಾದ ಸಿದ್ಧಪಡಿಸಲೂ ಕಾಣಿಕೆ ನೀಡಬಹುದು. ಸದ್ಯ ಆರ್ಥಿಕವಾಗಿ ನಮಗೆ ಬಹಳ ಸಂಕಷ್ಟವಿರುವುದಾದರೂ ತರಬೇತಿ ತೀರಾ ಅಗತ್ಯವಿದೆ ಎಂಬ ಕಾರಣಕ್ಕೆ ನಾವು ಕಮ್ಮಟವನ್ನು ಹಮ್ಮಿಕೊಳ್ಳುತ್ತಿದ್ದೇವೆ. ಆದ ಕಾರಣ ಶರಣ ಬಂಧುಗಳು ಸಹಕರಿಸಬೇಕು.

ಭಕ್ತಿ ಪಕ್ಷ ಸಮ್ಮೇಳನ

ದಿ. 14-10-2002 ಮತ್ತು 15-10-2002

ಕಾಗೆಯೊಂದಗುಳ ಕಂಡರೆ ಕೂಗಿಕರೆಯದೆ ತನ್ನ ಬಳಗವೆಲ್ಲವನು ?
ಕೋಳಿಯೊಂದು ಕುಟುಕು ಕಂಡರೆ ಕರೆಯದೆ ತನ್ನ ಕುಲವನೆಲ್ಲವನು ?
ಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಆ ಕಾಗೆ ಕೋಳಿಗಳಿಗಿಂತ ಕರಕಷ್ಟ ಕಾಣಾ ಲಿಂಗದೇವ ।

(ಬ.ವ.ದೀ. ೪೩೫)

ಎಂಬ ಧರ್ಮಪಿತರ ಆದೇಶದಂತೆ ಭಕ್ತನಿಗೆ ಭಕ್ತಿಪಕ್ಷ ಬೇಕು. ತರಬೇತಿ ಕಮ್ಮಟದ ಕಡೆಯ ಎರಡು ದಿನ ದಿ. 14-10-2002 ಮತ್ತು 15-10-2002 ರಂದು ಭಕ್ತಿಪಕ್ಷ ಸಮ್ಮೇಳನವು ಜರುಗುತ್ತದೆ. ಪ್ರತಿನಿಧಿ ಶುಲ್ಕ ಒಬ್ಬರಿಗೆ 100 ರೂ (ಒಂದು ನೂರು ರೂಪಾಯಿ). ಆರ್ಥಿಕ ತೊಂದರೆ ಇರುವವರಿಗೆ ಉಚಿತ ಪ್ರವೇಶ ಲಭ್ಯವಿದೆ. ದಿ. 14-10-2002 ರಂದು ಬೆಳಿಗ್ಗೆ 10-30 ಕ್ಕೆ ಸಮಾವೇಶ ಪ್ರಾರಂಭವಾಗಿ 10-30 ರಿಂದ 2, ಮಧ್ಯಾಹ್ನ 4 ರಿಂದ 6-30, ಸಂಜೆ 7 ರಿಂದ 9 ರವರೆಗೆ ಮೂರು ಸಭೆ ನಡೆಯುತ್ತವೆ. ದಿ. 15-10-2002 ರಂದು ಬೆಳಿಗ್ಗೆ 10-30 ರಿಂದ ಸಮಾರೋಪ ಕಾರ್ಯಕ್ರಮ ಆರಂಭವಾಗಿ ಮಧ್ಯಾಹ್ನ 3 ಗಂಟೆಗೆ ಮುಕ್ತಾಯವಾಗುತ್ತದೆ. ನಂತರ ಶಿಬಿರಾರ್ಥಿಗಳು, ಸಮ್ಮೇಳನದ ಪ್ರತಿನಿಧಿಗಳು ತಮ್ಮ ತಮ್ಮ ಊರಿಗೆ ಹೊರಡಲು ಅನುಮತಿ ಇರುತ್ತದೆ.

ಅಕ್ಟೋಬರ್ 2 ಗಾಂಧಿ ಜಯಂತಿಯಿಂದ ಆರಂಭವಾಗಿ ವಿಜಯ ದಶಮಿಗೆ ಮುಕ್ತಾಯವಾಗುವುದರಿಂದ ಸರ್ಕಾರಿ ರಜಾ ದಿನಗಳು 6 ಲಭ್ಯವಾಗುತ್ತವೆ. ಈ ದೃಷ್ಟಿಯಿಂದಲೂ ಮತ್ತು ದಸರಾ ಸಮಯದಲ್ಲಿ ಅನೇಕ ಲಿಂಗಾಯತರು ಮೂಢ ಆಚರಣೆ ಮಾಡುತ್ತ ದೇವಿ ಪುರಾಣ ಓದುವುದರಿಂದ ಇದನ್ನು ತಪ್ಪಿಸಿ ವಚನಾಧ್ಯಯನ, ವಚನ ಪಠಣ, ವಚನ ಲೇಖನವನ್ನು ರೂಢಿ ಮಾಡಲೋಸುಗ ಈ ದಿವಸಗಳನ್ನು ಆಯ್ದುಕೊಳ್ಳಲಾಗಿದೆ. ಆದ್ದರಿಂದ ಹೆಚ್ಚಿನ ಜನರು ಶಿಬಿರದ ಸದುಪಯೋಗ ಮಾಡಿಕೊಳ್ಳಬೇಕೆಂದು ಕೋರುತ್ತೇವೆ.

ಬೀದರ್ ಜಿಲ್ಲೆಯ ಬಸವ ಕಲ್ಯಾಣಕ್ಕೆ ರಾಜಧಾನಿ ಬೆಂಗಳೂರಿನಿಂದ ಮತ್ತು ವಿವಿಧ ಸ್ಥಳಗಳಿಂದ ನೇರ ಬಸ್ಸುಗಳಿವೆ. ಗುಲಬರ್ಗಾವರೆಗೆ ಟ್ರೇನಿನಲ್ಲಿ ಬಂದು ಅಲ್ಲಿಂದ ಬಸವ ಕಲ್ಯಾಣಕ್ಕೆ ಬರುವುದು ಅನುಕೂಲಕರ. ಒಂದು ಟ್ರೇನ್ - ಲಿಂಕ್ ಎಕ್ಸ್‌ಪ್ರೆಸ್ ಭಾಲ್ಕಿವರೆಗೆ ಬರುತ್ತದೆ. ಅಲ್ಲಿಂದ ಬಸವ ಕಲ್ಯಾಣ ಕೇವಲ 35 ಕಿಲೋಮೀಟರ್. ಹುಮನಾಬಾದ್ ರಾಷ್ಟ್ರೀಯ ಹೆದ್ದಾರಿ 9 ರ ಮೇಲಿದ್ದು ಅಲ್ಲಿಂದ ಬಸವ ಕಲ್ಯಾಣಕ್ಕೆ ಸಾಕಷ್ಟು ವಾಹನ ಸೌಕರ್ಯವಿದೆ. ಶಿಬಿರ ಶುಲ್ಕವನ್ನು ಡಿ.ಡಿ/ಎಂ.ಒ ಮೂಲಕ ಈ ಎರಡರಲ್ಲಿ ಒಂದು ವಿಳಾಸಕ್ಕೆ ಕಳಿಸಬಹುದು.

ವ್ಯವಹರಿಸುವ ವಿಳಾಸಗಳು

ಬಸವ ಧರ್ಮ ಪೀಠ (ರಿ)
ಬಸವ ಮಂಟಪ
2035, 2ನೇ ಬ್ಲಾಕ್, 20ನೇ ಮೇನ್
ರಾಜಾಜಿನಗರ, ಬೆಂಗಳೂರು-560010
ದೂರವಾಣಿ :080-3325335/3322790

ಬಸವ ಧರ್ಮ ಪೀಠ (ರಿ)
ಬಸವ ಮಹಾಮನೆ
ಮುಖ್ಯ ರಸ್ತೆ, ಬಸವ ಕಲ್ಯಾಣ
ತಾ-ಬಸವ ಕಲ್ಯಾಣ, ಜಿಲ್ಲೆ-ಬೀದರ್
ದೂರವಾಣಿ : 0848-651921

ಬಸವ ಗಂಗೋತ್ರಿ ನಗರ ಯೋಜನೆ - 2ನೇ ಹಂತ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ **"ಬಸವ ಗಂಗೋತ್ರಿ"** ನಗರವು ಬೆಂಗಳೂರಿನಿಂದ ಅತಿದೂರವಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ.

1. "ಬಸವ ಗಂಗೋತ್ರಿ ನಗರ" ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

   ವರ್ಗ 'ಎ'-40' X 60'-ವಿಸ್ತೀರ್ಣ 2400 ಚ.ಅಡಿಗಳು

   ವರ್ಗ 'ಬಿ'-30' X 40'-ವಿಸ್ತೀರ್ಣ 1200 ಚ.ಅಡಿಗಳು

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ಏರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

2. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. 1000/- (ಒಂದು ಸಾವಿರ) ರೂಪಾಯಿ ಕಟ್ಟಲು ಪರವಾನಗಿ ನೀಡುವುದು.
3. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ "ವಿಶ್ವಕಲ್ಯಾಣ ಮಿಷನ್, ಬೆಂಗಳೂರು" ಹೆಸರಿಗೆ 100/-(ಒಂದುನೂರು) ರೂಗಳನ್ನು ಎಂ.ಒ/ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ :- ದೂರವಾಣಿ : 080-3325335 / 3322790

ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳು
ವಿಶ್ವಕಲ್ಯಾಣ ಮಿಷನ್, ಬಸವ ಗಂಗೋತ್ರಿ ನಗರ ಯೋಜನೆ
ಬಸವ ಮಂಟಪ, 2035, 20ನೆಯ ಮುಖ್ಯರಸ್ತೆ, 2ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560010



ಬೈಲಹೊಂಗಲದಲ್ಲಿ ರಾಷ್ಟ್ರೀಯ ಬಸವ ದಳದಿಂದ 51ನೆಯ ಬಸವ ಜ್ಯೋತಿ ಕಾರ್ಯಕ್ರಮ
ಸನ್ನಿಧಿ ಹಾಗೂ ಉದ್ಘಾಟನೆ ಬಸವ ಧರ್ಮ ಪೀಠದ ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳಿಂದ,
ಸಾಮೂಹಿಕ ಪ್ರಾರ್ಥನೆಯಲ್ಲಿ ನಿರತರಾದ ಶರಣ ಸಮೂಹ



ಮತ್ತೀಪುರದಲ್ಲಿ ದಿ. 14-7-2002 ರಂದು ನಡೆದ ಕಾರ್ಯಕ್ರಮ.
ಶರಣ. ಮಲ್ಲಿಕಾರ್ಜುನಪ್ಪ ಅವರಿಂದ ಪ್ರಾಸ್ತಾವಿಕ ಭಾಷಣ.



ದಿ. 11-8-2002 ರಂದು ಬೈಲಹೊಂಗಲದಲ್ಲಿ ನಡೆದ 51ನೆಯ ಬಸವ ಜ್ಯೋತಿ ಕಾರ್ಯಕ್ರಮದ ಉದ್ಘಾಟನೆ
ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳಿಂದ. ಶಾಸಕ ಮಹಾಂತೇಶ ಕೌಜಲಗಿ ಮುಖ್ಯ ಅತಿಥಿಗಳು.

ಕಲ್ಯಾಣ ಕಿರಣ CPMG/KA/BGW-50 ಸೆಪ್ಟೆಂಬರ್ - 2002
R.NO. 19988/70 WPP (W) - 17

